ಕುವೆಂಪು ಕವಿತೆಗಳಲ್ಲಿ ಸಮಕಾಲೀನತೆ

ಒಂದು ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಲ್ಲಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಎಂ. ಸುರೇಶ

ಎಂ.ಫಿಲ್. ಅಭ್ಯರ್ಥಿ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,
ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಮ. ರಾಮಕೃಷ್ಣ

ಪ್ರಾಧ್ಯಾಪಕರು
ಕನ್ನಡ ವಿಭಾಗ, ಭಾರತೀ ಕಾಲೇಜು,
ಭಾರತೀ ನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ.), ಮಂಡ್ಯ.
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭-೦೮

ಕುವೆಂಪು ಕವಿತೆಗಳಲ್ಲಿ ಸಮಕಾಲೀನತೆ:ಒಂದು ಅಧ್ಯಯನ

(ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು

ಎಂ. ಸುರೇಶ

ಎಂ.ಫಿಲ್. ಅಭ್ಯರ್ಥಿ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ.

ಮಾರ್ಗದರ್ಶಕರು

ಮ. ರಾಮಕೃಷ್ಣ

ಪ್ರಾಧ್ಯಾಪಕರು,
ಕನ್ನಡ ವಿಭಾಗ, ಭಾರತೀ ಕಾಲೇಜು,
ಭಾರತೀ ನಗರ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,
ಕರ್ನಾಟಕ ಸಂಘ (ರಿ.), ಮಂಡ್ಯ.
(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

೨೦೦೭-೦೮

ದೃಢೀಕರಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಎಂ. ಸುರೇಶ ಅವರು ''ಕುವೆಂಪು ಕವಿತೆಯಲ್ಲಿ ಸಮಕಾಲೀನತೆ'' ಎಂಬ ವಿಷಯವನ್ನು ನನ್ನ ಮಾರ್ಗದರ್ಶನದಲ್ಲಿ ರಚಿಸಿರುತ್ತಾರೆ. ಈ ನಿಬಂಧವನ್ನು ಯಾವುದೇ ಗ್ರಂಥ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ದೃಢೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

ಮರಾಮಕೃ

ಸ್ಥಳ : ಮಂಡ್ಯ

ದಿನಾಂಕ : 30-09-2008

(ಮ. ರಾಮಕೃಷ್ಣ)
ಕನ್ನಡ ವಿಭಾಗ
ಭಾರತೀಕಾಲೇಜು, ಭಾರತೀನಗರ.
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಅಭ್ಯರ್ಥಿಯ ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ ಕನ್ನಡ ಎಂ.ಫಿಲ್ ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು "ಕುವೆಂಪು ಕವಿತೆಗಳಲ್ಲಿ ಸಮಕಾಲೀನತೆ - ಒಂದು ಅಧ್ಯಯನ" ವಿಷಯವನ್ನು ಆಯ್ಕೆ ಮಾಡಿಕೊಂಡು ಪ್ರೊ॥ ಮ. ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತಿದ್ದೇನೆ. ಕನ್ನಡ ವಿಶ್ವವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತಿದ್ದೇನೆ.

ಸ್ಥಳ : ಮಂಡ್ಯ

ದಿನಾಂಕ : 30-09-08.

ಇಂತಿ ತಮ್ಮ ವಿಧೇಯ ವಿದ್ಯಾರ್ಥಿ

(signature)

(ಎಂ. ಸುರೇಶ)

ಪರಿವಿಡಿ

ಅಧ್ಯಾಯ 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕುವೆಂಪು ಅವರ ಕವಿತೆಗಳ ವಸ್ತುವಿನ ಹರವು ಬಹಳ ದೊಡ್ಡದು. ಪ್ರಮಾಣದಲ್ಲೂ, ವೈವಿಧ್ಯತೆಯಲ್ಲೂ ಅವು ಪ್ರಮುಖ ದಾಖಲೆಯನ್ನು ಸ್ಥಾಪಿಸಿವೆ. ವಸ್ತುವಿನ ದೃಷ್ಟಿಯಿಂದ ಅವರ ಕವಿತೆಗಳು ಪ್ರಕೃತಿ, ಪ್ರಣಯ, ಆಧ್ಯಾತ್ಮ, ಸಮಾಜ, ನಾಡು-ನುಡಿ ಪ್ರೇಮ, ಮೌಢ್ಯ ಮುಂತಾಗಿ ವಿಭಾಗಿಸಿಕೊಳ್ಳಬಹುದು. ಪ್ರತಿಯೊಂದು ವಿಷಯವನ್ನು ವಿವಿಧ ದೃಷ್ಟಿಕೋನಗಳಿಂದ ವಿವಿಧ ಸ್ತರಗಳಲ್ಲಿ ನಿಂತು ಪರಿಭಾವಿಸಿರುವುದು ಕಂಡು ಬರುತ್ತದೆ. ಅಪಾರ ಸಂಖ್ಯೆಯ ಈ ಕವಿತೆಗಳು ಹೊಸ ಅಭಿರುಚಿಯನ್ನೇ ಸೃಷ್ಟಿಸಿದವು. ಕುವೆಂಪು ಅವರು ಸಮಕಾಲೀನವಾದ ಎಲ್ಲಾ ವಿಷಯುಗಳಿಗೂ ಇಲ್ಲಿ ಅಭಿವ್ಯಕ್ತಿ ನೀಡಿರುವುದು ಮತ್ತು ಅದಕ್ಕೆ ಪ್ರಾಮಾಣಿಕರಾಗಿ ನಡೆದುಕೊಂಡಿರುವುದು ಮಹತ್ವದ್ದಾಗಿದೆ.

ಕುವೆಂಪು ಅವರ ಕವಿತೆಗಳುಕಲ್ಪನೆಯ ಕುಸುಮಗಳು ಎಂದು ಭಾವಿಸಿದ ಕೆಲವರಿಗೆ ಅವರ ವೈಚಾರಿಕ ಮುಖ ಕಾಣಿಸಲೇ ಇಲ್ಲ. ಒಂದು ಕಾಲಕ್ಕೆ ಕುವೆಂಪುರವರನ್ನು 'ಕವಿಯೇ ಅಲ್ಲ' ಎನ್ನುತ್ತಿದ್ದವರು ಇಂದು ಮಹಾಕವಿ ಎಂದು ಒಪ್ಪಿ ಒಮ್ಮತಕ್ಕೆ ಬಂದಿದ್ದಾರೆ. ವಿಚಾರವಾದಿಯೇ ಅಲ್ಲ ಎನ್ನುತ್ತಿದ್ದವರು ಇಂದು ಮಹಾಕ್ರಾಂತಿಕಾರಿ ಎಂದು ಕರೆಯುತ್ತಿದ್ದಾರೆ. ಯಾವ ಕವಿಯೇ ಆದರೂ ಒಂದಲ್ಲಾ ಒಂದು ವಿಧದಲ್ಲಿ ವೈಚಾರಿಕತೆಯನ್ನು ತನ್ನ ಕಾವ್ಯದಲ್ಲಿ ಅಭಿವ್ಯಕ್ತಿಸಿಯೇ ಇರುತ್ತಾನೆ. ಇಂಥ ವೈಚಾರಿಕತೆಯಿಂದ ಅವರು ವಿಮುಖವಾಗಿರಲಿಲ್ಲ ಎನ್ನುವುದಕ್ಕೆ 'ಕೋಗಿಲೆ ಮತ್ತು ಸೋವಿಯೆಟ್ ರಷ್ಯಾ' ಮತ್ತು ಪಾಂಚಜನ್ಯ ಮುಂತಾದ ಕವನ ಸಂಕಲನಗಳನ್ನು ಗಮನಿಸಬಹುದು.

ವೈಚಾರಿಕತೆ ವ್ಯಕ್ತಗೊಂಡಿರುವ ಈ ಎಲ್ಲಾ ಕವನಗಳಲ್ಲಿ ಅವರು ವರ್ಣ ವ್ಯವಸ್ಥೆ, ವರ್ಗ ವ್ಯವಸ್ಥೆ, ಪುರೋಹಿತಶಾಹಿ, ಅಂಧಶ್ರದ್ಧೆ, ಮೌಢ್ಯತೆಗಳ ವಿರುದ್ಧ ಬಂಡಾಯವೆದ್ದಿದ್ದಾರೆ. ಆ ಮೂಲಕ ಸಾಮಾಜಿಕ ಪುನರ್‌ರಚನೆಯ ಕಡೆಗೆ ಮುಖ ಮಾಡಿದ್ದಾರೆ. ಅವರು ತಮ್ಮ ಕವನಗಳಲ್ಲಿ ಏನು ಹೇಳಿದ್ದಾರೊ ಹಾಗೆಯೇ ವಾಸ್ತವದಲ್ಲಿ ಬದುಕಿದವರು. ಆದ್ದರಿಂದ ನಮ್ಮ ಸಮಕಾಲೀನ ಎಲ್ಲಾ ಲೇಖಕರಿಗಿಂತ ಕುವೆಂಪು ಹೆಚ್ಚು ಕ್ರಾಂತಿಕಾರಿಯಾಗಿರುವಂತೆ ಕಾಣುತ್ತಾರೆ. ರಾಷ್ಟ್ರ ಪ್ರೇಮ ಮತ್ತು ಸ್ವಾತಂತ್ರ್ಯ ಚಳುವಳಿಗೆ ಸಂಬಂಧಪಟ್ಟ ಗೀತೆಗಳೂ ವೈಚಾರಿಕ ವಲಯಕ್ಕೆ ಬರುತ್ತವೆ. ಏಕೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಇವು ಮೌಲ್ಯಗಳಾಗಿ ಸ್ವೀಕೃತವಾಗಿದ್ದವು. ಜೀವಂತ ಲೇಖಕನೊಬ್ಬ ಇಂಥ ಸಮಕಾಲೀನ ಜಲ್ವಂತ ಸಮಸ್ಯೆಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಕಾವ್ಯ ಬದುಕಿನ ಆರಂಭದಲ್ಲೇ ಕುವೆಂಪುರವರ ಸಾಮಾಜಿಕ ಪ್ರಜ್ಞೆ ವಾಸ್ತವಿಕ ಜೀವನದ ಸರ್ವವನ್ನು ಒಪ್ಪಿಕೊಳ್ಳುತ್ತಾರೆ. ಜೊತೆಗೆ ಸಾಮಾನ್ಯ ಜನತೆಯನ್ನು ಬಲ್ಲವರ ಮತ್ತು ಬಲಿಷ್ಟರ ಬೌದ್ಧಿಕ ಹಾಗೂ ಆರ್ಥಿಕ ದಾಸ್ಯದಿಂದ, ಅವರ ಪಾರ್ಶ್ವವಿಕ ಶೋಷಣೆಯಿಂದ ಪಾರು ಮಾಡುವ ಕಾರಣದಿಂದ ಅವರ ಲೇಖನ, ಭಾಷಣಗಳ ಮೂಲಕ ಜನತೆಯನ್ನು ಎಚ್ಚರಿಸಲು, ಅವರಲ್ಲಿ ನಿರಂಕುಶ ಮತೀತ್ವವನ್ನು, ವೈಚಾರಿಕ ಬುದ್ಧಿಯನ್ನು, ವೈಜ್ಞಾನಿಕ ಮನೋಧರ್ಮವನ್ನು ರೂಢಿಸಲು ಪ್ರಯತ್ನ ಮಾಡುತ್ತಾರೆ. ಬಹುಕಾಲದ ದೀರ್ಘ ಮಂಥನದಿಂದ ಅನ್ಯಾಯಗಳನ್ನು, ಅವಿವೇಕಗಳನ್ನು ಅಜ್ಞಾನ ಜನ್ಯವಾದ ಕ್ರೂರ ವರ್ತನೆಗಳನ್ನು ಕಂಡಾಗ ಮಾಡಿದ ಸಾತ್ವಿಕ ಕ್ರೋಧದಿಂದ ನಮ್ಮ ದೇಶ, ನಮ್ಮ ನಾಡು, ಭಾಷೆ, ಸಂಸ್ಕೃತಿ, ಸ್ಥಿತಿ-ಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಸಮಾಜದಲ್ಲಿ ರೂಢ ಮೂಲವಾಗಿದ್ದ ಹಾನಿಕಾರಕ ಮೌಢ್ಯ, ಸಂಪ್ರದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ.ಮತದ ಹೆಸರಿನಲ್ಲಿ ಚಲಾವಣೆಯಲ್ಲಿರುವ ಕಟ್ಟು-ಕಟ್ಟಲೆಗಳನ್ನು ಹಂಗಿಸುತ್ತಾರೆ. ನೂರಾರು ದೇವತೆಗಳನ್ನು ಗುಡಿಯಿಂದಾಚೆ ದಬ್ಬಿ ಒಬ್ಬ ಸರ್ವೇಶ್ವರನನ್ನು ಪೂಜಿಸುವಂತೆ, ಆಧ್ಯಾತ್ಮ ಸಾಧನೆಯಲ್ಲಿ ತೊಡಗುವಂತೆ ಜನರಿಗೆ ಕರೆ ಕೊಡುತ್ತಾರೆ.

ಕುವೆಂಪುರವರ ಎಲ್ಲಾ ಬರಹಗಳ ಒಳ ಹರಿವು ಅಥವಾ ಅಂತರ್ ಜಲ ಜೀವ ಪರತೆ ಜನಪರತೆಯಾಗಿರುವುದರಿಂದ ಇವರ ಅಭಿವ್ಯಕ್ತಿ ಹಿನ್ನಲೆ ಪ್ರಗತಿದಾರನಿಗೆ ಮಾನವೀಯ ನೆಲೆಯಾಗಿ ಈ ದೇಶದ ಮತೀಯ ಜಾತೀಯ ಕೋಮು ಭಾವನೆಗಳನ್ನು ತಿರಸ್ಕರಿಸಿ ಅವುಗಳನ್ನು ಮೀರುವ ಪರ್ಯಾಯವಾಗಿ ವಿಶ್ವಮಾನವ ಸಂದೇಶವನ್ನು ಕೊಡುವುದರ ಜೊತೆಗೆ ಸಮಾಜದಲ್ಲಿರುವ ಶ್ರೀಮಂತ ವರ್ಗ ಮತ್ತು ಬಡ ವರ್ಗ ಎಂಬ ಎರಡು ಗುಂಪುಗಳ ನಡುವೆ ನಡೆಯುತ್ತಿರುವ ತಿಣುಕಾಟವನ್ನು, ರಾಜಕಾರಣಿಗಳು, ಅಧಿಕಾರ ವರ್ಗ ಇವರ ಶೋಷಣೆ ಮೊದಲಾದವುನ್ನೆಲ್ಲಾ ತಮ್ಮ ಕವಿತೆಗಳ ಮೂಸೆಯ ಮೂಲಕ ಅಭಿವ್ಯಕ್ತಿಸಿದ್ದಾರೆ. ಹಣದ ಬಲದಿಂದ, ಜಾತಿಯ ಬಲದಿಂದ ನೀತಿ-ನಿಯಮಗಳನ್ನು ಬದಲಾಯಿಸುತ್ತಿದ್ದ ಕಾಲವು ನಶಿಸಿ ಬುದ್ಧಿವಂತಿಕೆಯು ಆ ಜಾಗವನ್ನು ತುಂಬಿಕೊಂಡು ಹಿಂದಿನ ಸಂಪ್ರದಾಯಗಳನ್ನು ತಿದ್ದಿ ನಮಗೆ ಬೇಕಾದ ಸ್ವರ್ಗವನ್ನು ಸೃಷ್ಟಿಸಿಕೊಳ್ಳಬೇಕು. ನಾವು ಜಾತಿಯಲ್ಲಿ ಕೀಳು, ನಮ್ಮ ಹಣೆಬರಹವೇ ಇಷ್ಟು ಎಂಬೆಲ್ಲ ಮೌಢ್ಯತೆಯಿಂದ ಹೊರಗೆ ಬಂದು ಬದಲಾಗುತ್ತಿರುವ ಸಮಾಜದ ಜೊತೆಗೆ ಸ್ಪಂದಿಸಿ ಸರ್ವರ ಉದ್ಧಾರಕ್ಕೆ ದುಡಿಯಬೇಕಾದ ಅನಿವಾರ್ಯತೆಯನ್ನು ತಿಳಿಸುತ್ತಾರೆ.

ಅನಾದಿಕಾಲದಿಂದಲೂ ಮೃಷ್ಟಾನ್ನವನ್ನುಂಡು ತೆಗುತ್ತಿದ್ದ ಸೋಮಾರಿಗಳಿಗೆ, ದೀನದಲಿತರ ಸಮಾಧಿಯ ಮೇಲೆ ಗುಡಿ-ಗೋಪುರವನ್ನು ನಿರ್ಮಿಸುತ್ತಿದ್ದ ಪುರೋಹಿತರಿಗೆ, ಸೌಧಗಳಲ್ಲಿ ಮೆರೆದು, ಬೋಗ

ವಿಲಾಸಗಳಲ್ಲಿ ಮುಳುಗಿರುತ್ತಿದ್ದ ಶ್ರೀಮಂತರಿಗೆ, ಸಾಮ್ರಾಜ್ಯಶಾಹಿಯನ್ನು ವಿಸ್ತರಿಸುತ್ತಿದ್ದ ಚಕ್ರವರ್ತಿಗಳಿಗೆ ಬೆವರು ಸುರಿಸಿ, ರಕ್ತ ಬಸಿದು ಆಹಾರವನ್ನು ಬೆಳೆದು ಸಂಪತ್ತನ್ನು ಸೃಷ್ಟಿಸಿಕೊಡುತ್ತಿದ್ದ ರೈತ ಪರ ಕಳಾಜಿ ಕುವೆಂಪುರವರ ಸಾಮಾಜಿಕ ಪ್ರಜ್ಞೆ ಹಾಗೂ ಸಮಕಾಲೀನತೆಗೆ ತಮ್ಮನ್ನು ಒಡ್ಡಿಕೊಂಡದ್ದಕ್ಕೆ ನಿದರ್ಶನವಾಗಿದೆ. ರೈತನ ನೇಗಿಲ ಬಲದಿಂದ ದೊರೆಗಳು ದೇಶವನ್ನಾಳುತ್ತಾರೆ. ಶ್ರೀಮಂತರು ಬೊಜ್ಜು ಬೆಳೆಸುತ್ತಾರೆ. ಯೋಧರು ಖಡ್ಗಗಳನ್ನು ಝಳಪಿಸುತ್ತಾರೆ, ಘನಪಾಠಿ ತ್ರಿಪಾಠಿಗಳು ವೇದಾಧ್ಯಯನದಲ್ಲಿ ನಿರತರಾಗುತ್ತಾರೆ, ಕವಿಗಳು ಕಾವ್ಯ ರಚಿಸುತ್ತಾರೆ. ಇಷ್ಟೆಲ್ಲಾ ಜನರ ಆಧಾರವಾಗಿರುವ ರೈತನ ಸ್ಥಿತಿಯತ್ತ ಯಾರೂ ಗಮನಹರಿಸದಿರುವುದು ನಾಚಿಕೆಗೇಡಿನ ಪ್ರಸಂಗವಾಗಿದೆ. ಗ್ರಾಮೀಣ ಜೀವನವನ್ನೂ, ರೈತರ ಬಾಳನ್ನು ತೀರ ಹತ್ತಿರದಿಂದ ಗಮನಿಸಿ ಗ್ರಾಮೀಣ ಸಮಾಜದ ಸಮಸ್ಯೆಗಳಿಗೆ, ರೈತ ಜೀವನದ ಹೀನಸ್ಥಿತಿಗೆ ಕನ್ನಡಿ ಹಿಡಿದವರು ಇಲ್ಲವೆಂದರೂ ತಪ್ಪಾಗುವುದಿಲ್ಲ. ರೈತರ ಮನೆಯಲ್ಲಿಯೇ ಹುಟ್ಟಿ, ಅವರ ನಡುವೆಯೇ ಬೆಳೆದು, ಅವರ ಬಾಳಿನಲ್ಲಿ ಒಂದಾಗಿ ಬೆರೆತವರಿಗೆ ಮಾತ್ರ ಅವರ ಬದುಕಿನ ವಿವಿಧ ಮುಖಗಳ ಪರಿಚಯ ಸಿದ್ಧಿತವಾಗುತ್ತದೆ. ಹೀಗೆ ರೈತರ ಭವಣೆಗಳನ್ನು ಸಾಹಿತ್ಯದ ಚೌಕಟ್ಟಿಗೆ ಒಳಪಡಿಸಿದವರು ಅಲ್ಲೊಬ್ಬರು ಇಲ್ಲೊಬ್ಬರೂ ಕಾಣ ಸಿಗುತ್ತಾರೆ. ಅವರಿಗೆಲ್ಲಾ ಮಕುಟಪ್ರಾಯರಾಗಿ, ಪಂಥ ನಿರ್ಮಾಪಕರಾಗಿ ಕುವೆಂಪುರವರು ರೈತ ಸಾಹಿತ್ಯವನ್ನು ರಚಿಸುವುದನ್ನು ಪ್ರಸ್ತುತ ನಮ್ಮ ಅಧ್ಯಯನದ ಚೌಕಟ್ಟಿನಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಮಹಾದಾರ್ಶನಿಕರಾದ ಕುವೆಂಪುರವರು ರಾಷ್ಟ್ರಪ್ರೇಮ, ನಾಡಪ್ರೇಮ, ಭಾಷಾಭಿಮಾನವನ್ನು ಹೃದಯದಲ್ಲಿ ಅನನ್ಯವಾಗಿ ತುಂಬಿಕೊಂಡು ಅದನ್ನು ತಮ್ಮ ಕವನಗಳಲ್ಲಿ ಚಿತ್ರಿಸಿದ್ದಾರೆ. ಒಂದು ಸಂಸ್ಕೃತಿಯ ಆಶೋತ್ತರಗಳನ್ನು, ಆ ರಾಷ್ಟ್ರದ ಉದ್ಧಾರಕ್ಕಾಗಿಯೇ ರೂಪಿಸಬೇಕೆಂದು ಅವರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು. ಭಾರತ ದೇಶವು ಅನೇಕ ಸಣ್ಣ ಸಣ್ಣ ತುಂಡುಗಳಾಗಿ ಹರಿದು ಹಂಚಿ ಹೋಗಿ ಭರತ ಖಂಡದ ಅಖಂಡತೆಯ ಪ್ರಜ್ಞೆ ನಶಿಸುತ್ತಿದ್ದ ಕಾಲಘಟ್ಟದಲ್ಲಿ ಇವರು ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಜನರನ್ನು ಕೊಂಡೊಯ್ಯುವಲ್ಲಿ ಸಾಹಿತ್ಯ ಬೇಸಾಯದ ಬೆಳೆಯನ್ನು ಬೆಳೆಸಿಕೊಂಡಿದ್ದಾರೆ. ಜೊತೆಗೆ ಭೌಗೋಳಿಕವಾಗಿ ಹರಿದು ಹಂಚಿ ಹೋಗಿದ್ದ ಕರ್ನಾಟಕದ ಏಕೀಕರಣವು ಅವರ ಪ್ರಬಲವಾದ ಆಶೋತ್ತರವಾಗಿದ್ದರೂ ಅದು ವಾಸ್ತವಿಕ ನೆಲೆಗಟ್ಟಿನ ಮೇಲೆ ರೂಪತವಾಗಬೇಕಾಗಿತ್ತು. ಅಲ್ಲದೇ ಕನ್ನಡ ಭಾಷೆ ಕನ್ನಡ ತನ ಅಂದರೆ ಅದು ಬರೀ ಭಾಷೆ ಮತ್ತು ನಡವಳಿಕೆಯಲ್ಲ. ಆ ರಾಜ್ಯದ ಜನರ ಬದುಕಿನ ನೆಮ್ಮದಿಯು ಕೂಡ. ಕನ್ನಡದ ನಿಜವಾದ ಅರ್ಥ ಸಕಾರವಾಗಬೇಕಾದರೆ ಶಾಂತಿ, ನೆಮ್ಮದಿ, ಸಂಮೃದ್ಧಿಗಳು ನೆಲೆಸಲೇಬೇಕು. ಹೀಗೆ ರಾಷ್ಟ್ರೀಯತೆ,

ನಾಡು ಮತ್ತು ನುಡಿಗಳು ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡುವ ಮಹೋನ್ನತ ಶಕ್ತಿಗಳೆನ್ನುತ್ತಾರೆ ಕುವೆಂಪು.

ಹೀಗೆ ಕುವೆಂಪುರವರ ಎಲ್ಲಾ ಬರವಣಿಗೆಯೂ ವೈಚಾರಿಕತೆ ಮತ್ತು ಸಮಕಾಲೀನತೆಯತ್ತ ಮುಖ ಮಾಡಿದುದೇ ಆಗಿರುತ್ತದೆ. ಇವರ ಸಾವಿರಾರು ಪುಟಗಳ ಪದ್ಯ ಬರವಣಿಗೆಯನ್ನು ಗಮನಿಸಿದರೆ ಅವೆಲ್ಲವೂ ಅವರು 20ನೆಯ ಶತಮಾನದ ಆರಂಭಕ್ಕೆ ಮುಂದಿನ ಶತಮಾನಗಳ ವೈಜ್ಞಾನಿಕತೆಯ ಮಹತ್ವವನ್ನು ಅರಿತವರಾಗಿದ್ದರು. ಇದನ್ನು ಅವರು ಪ್ರತಿಪಾದಿಸಿಯೂ ಇದ್ದಾರೆ. ಇಂತಹ ವೈಚಾರಿಕತೆ ಇವರ ಕಾವ್ಯದಲ್ಲಿ ಸಂದರ್ಭ ಸಿಕ್ಕಗೆಲ್ಲಾ ಪ್ರವೇಶ ಪಡೆಯುತ್ತಿದ್ದರಿಂದ ಅವರ ಅನೇಕ ಕವಿತೆಗಳು ವೈಚಾರಿಕತೆಯ ಧ್ವನಿಯನ್ನು ಮಿಳಿತಗೊಳಿಸಿಕೊಂಡಿವೆ. ಈ ರೀತಿಯಲ್ಲಿ ಅವರು ಕವಿಯಾಗಿ ಅವರ ನಿಲುವುಗಳೇನೂ ಮತ್ತು ಅವರ ಕಾವ್ಯ ಸಾಧನೆಯ ಹಾದಿಯ ರೀತಿ ಏನೂ ಎಂಬುದು ಅರಿವಿಗೆ ಬರುವುದರ ಜೊತೆಗೆ ಇಂದಿಗೂ ಮತ್ತು ಮುಂದಿಗೂ ಪ್ರಸ್ತುತವಾಗಿರುವ ಉದ್ದೇಶದಿಂದ ಕುವೆಂಪುರವ ಕವಿತೆಗಳಲ್ಲಿ ಅಡಗಿರುವ ಸಮಕಾಲೀನತೆಯನ್ನು ಅಧ್ಯಯನದ ಚೌಕಟ್ಟಿಗೆ ಒಳಪಡಿಸಿಕೊಂಡಿದ್ದೇವೆ.

ಈ ಎಲ್ಲಾ ಮುಖ್ಯೋದ್ದೇಶಗಳಿಂದ ವರ್ತಮಾನದ ಅಸ್ಥಿತ್ವಗಳು ತತ್ತರಿಸಿ ಹೋಗುತ್ತಿದ್ದ ಕಾಲದಂದು ಸತ್ಯಕ್ಕೆ ಎದೆ ಒಡ್ಡಿಕೊಳ್ಳುವ ಕಾವ್ಯ ಮತ್ತು ಮನುಷ್ಯನ ಸಂಬಂಧವನ್ನು ಬದುಕಿನ ಸಂಕಟದ ಬಕ್ಕಮೈಗಳಿಗೆ ಸಂತನ ಹೃದಯದ ಮಮಕಾರದಿಂದ ಅತುಳ ಪ್ರೇಮದೊಂದಿಗೆ ಧ್ಯಾನಿಸಿ ವಾಸ್ತವೀಕರಣಗೊಳಿಸುವ ಚೈತನ್ಯದ ಚಿಲುಮೆಯ ಕವಿ ಕುವೆಂಪುರವರ ಸಮಗ್ರ ಕವಿತೆಯಲ್ಲೂ ಸಮಕಾಲೀನತೆಯ ಅಂಶಗಳು ಕಂಡು ಬಂದರೂ, ಅಧ್ಯಯನದ ವ್ಯಾಪ್ತಿ ವಿಸ್ತೃತಗೊಳ್ಳುವ ಕಾರಣದಿಂದ ಕೆಲವು ಕವಿತೆಗಳನ್ನು ಮಾತ್ರ ಈ ನಿಬಂಧದಲ್ಲಿ ಬಳಸಿಕೊಂಡಿದ್ದೇವೆ.

ಅಧ್ಯಾಯ 2

ಕವಿ ಪರಿಚಯ

ಕುವೆಂಪು ಕನ್ನಡ ಸಾಹಿತ್ಯ ಜಗತ್ತಿನ ಮೇರು ಕವಿ. ೨೦ನೆಯ ಶತಮಾನದ ಸಾಹಿತ್ಯ ಚರಿತ್ರೆ ಕುವೆಂಪುರವರ ಸಾಹಿತ್ಯ ಬೆಳವಣಿಗೆಯ ಸಾಧನೆ ಸಿದ್ಧಿಗಳಿಂದ ಮತ್ತು ಅವರು ಇತರ ಕವಿಗಳ ಮೇಲೆ ಬೀರಿದ ಪ್ರಭಾವದಿಂದ ಕಂಗೊಳಿಸುತ್ತಿದೆ. ಕಾವ್ಯ, ನಾಟಕ, ಸಣ್ಣಕತೆ, ಕಾದಂಬರಿ, ವಚನ, ಮಹಾಕಾವ್ಯ, ಸಾಹಿತ್ಯ ವಿಮರ್ಶೆ ಈ ಒಂದೊಂದು ಪ್ರಕಾರದಲ್ಲೂ ಗಣನೀಯವಾದ ಕೊಡುಗೆಯನ್ನು ಕುವೆಂಪು ನೀಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಯಾವುದೇ ಪ್ರಕಾರವನ್ನು ಕುರಿತು ಅಧ್ಯಯನ ನಡೆಸುವಾಗಲೂ ಕುವೆಂಪುರವರ ಕೃತಿಗಳನ್ನು ಹೊರತುಗೊಳಿಸಿದರೆ ಆ ಅಧ್ಯಯನ ಅಸಂಪೂರ್ಣ ಎನ್ನುವಷ್ಟರ ಮಟ್ಟಿಗೆ ಪ್ರತಿಯೊಂದು ವಿಭಾಗದಲ್ಲೂ ಗಟ್ಟಿ ಕೃತಿಗಳನ್ನು ಅವರು ರಚಿಸಿದ್ದಾರೆ. ಕನ್ನಡಕ್ಕೆ ರಾಷ್ಟಮಟ್ಟದ ಖ್ಯಾತಿಯನ್ನು ತಂದು ಕೊಟ್ಟ ಮೊದಲಿಗರಲ್ಲಿ ಅವರೂ ಒಬ್ಬರು. ಇಂಗ್ಲೀಷ್ ಮುಂತಾದ ಯೂರೋಪಿಯನ್ ಭಾಷೆಗಳಿಗೆ ಅವರ ಕೃತಿಗಳು ಅನುವಾದಗೊಂಡಾಗ ಕನ್ನಡಕ್ಕೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯು ದೊರಕುತ್ತದೆ ಎಂಬುದು ಸ್ಪಷ್ಟವಾಗಿಯೇ ಇದೆ.

ಕುವೆಂಪುರವರ ಪೂರ್ಣ ಹೆಸರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಅವರ ಊರು. ತಂದೆ ವೆಂಕಟಪ್ಪ, ತಾಯಿ ಸೀತಮ್ಮ ಅವರ ಮಗನಾಗಿ 1904 ನೇ ಇಸವಿ ಡಿಸೆಂಬರ್ 29ರಂದು ಕೆ.ವಿ ಪುಟ್ಟಪ್ಪನವರು ಜನಿಸಿದರು. ಕುವೆಂಪು ಹುಟ್ಟಿದ್ದು ಕೊಪ್ಪಕ್ಕೆ ಸಮೀಪದ ''ಹಿರೇಕೊಡಿಗೆ'' ಯಲ್ಲಿ ತಮ್ಮ ತಾಯಿಯ ತವರು ಮನೆಯಲ್ಲಿ. ಆದರೆ ಅವರು ಬೆಳೆದದ್ದು ಕುಪ್ಪಳ್ಳಿಯಲ್ಲಿ ಕುಪ್ಪಳ್ಳಿಯ ಸುತ್ತ-ಮುತ್ತಲಿನ ಪರಿಸರ, ದಟ್ಟವಾದ ಕಾಡು, ಗಗನಚುಂಬಿ ಪರ್ವತ ಶ್ರೇಣಿಗಳು, ನೂರಾರು ಬಗೆಯ ಪಕ್ಷಿ ಪ್ರಾಣಿ ಸಂಕುಲಗಳು, ಪ್ರಕೃತಿಯ ಸುಂದರ ರಮಣೀಯ ದೃಶ್ಯಗಳು ಕವಿ ಕುವೆಂಪು ಅವರ ಬಾಲ್ಯ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ್ದವು. ಆದ್ದರಿಂದಲೇ ಏನೋ ಕುವೆಂಪುರವರ ಕಾವ್ಯ ಕೃತಿಗಳಲ್ಲಿ ನಿಸರ್ಗ ಒಂದು ಸಜೀವ ಪಾತ್ರವೆನ್ನುವಂತೆ ಚಿತ್ರಿತಗೊಂಡಿದೆ. ಅಂದರೆ ಪ್ರಕೃತಿ ಅವರ ಕಾವ್ಯ ಕೃತಿಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಂಡಿದೆ. ಹಾಗಾಗಿ ಕುವೆಂಪು ಅವರನ್ನು 'ಪ್ರಕೃತಿ ಕವಿ' ಎಂದು ಗುರುತಿಸುವ ಪರಿಪಾಠವೂ ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೆಳೆದು ಬಂದಿದೆ ಎಂಬುದನ್ನು ಗುರುತಿಸಬಹುದು.

ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದ ಕುವೆಂಪುರವರು ತಮ್ಮ ಪೂರ್ಣ ಬದುಕನ್ನು ಇಲ್ಲಿಯೇ ಕಳೆದರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಯನ್ನು ಆರಂಭಿಸಿದ ಕುವೆಂಪುರವರು

ಆ ಕಾಲೇಜಿನ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದರು. 1956 ರಿಂದ 1960ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳ ಸ್ಥಾನವನ್ನು ಅಲಂಕರಿಸಿದ್ದ ಹೆಗ್ಗಳಿಕೆಯೂ ಅವರಿಗೆ ಸಂದಿದೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕುವೆಂಪುರವರು ವೈವಿಧ್ಯಮಯ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯವನ್ನು ಅತ್ಯಂತ ಶ್ರೀಮಂತಗೊಳಿಸಿದ್ದಾರೆ. ''ನಾಡಿನ ಪುಣ್ಯದ ಪೂರ್ವದಿಗಂತದಿ ನವ ಅರುಣೋದಯ'' ಮೂಡಲಿರುವಾಗ ಮೂಡಿ ಬಂದವರು ಕುವೆಂಪು. ಹೊಸ ಮೌಲ್ಯಗಳನ್ನು ಸ್ಥಾಪಿಸಿವುದು, ಹೊಸ ಭಾಷೆಯನ್ನು, ಹೊಸ ಕಾವ್ಯ ಭಾಷೆಯನ್ನು ಸೃಷ್ಟಿಸುವುದು ನವೋದಯ ಕಾವ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ಮೊದಲ ತಲೆಮಾರಿನ ಕವಿಗಳ ಒಂದು ಮಹತ್ವದ ಜವಾಬ್ದಾರಿಯಾಗಿತ್ತು. ಇಂಥ ಹೊಚ್ಚ ಹೊಸ ಸಾಹಿತ್ಯಕ ಪರಿಸರವನ್ನು ಬೆಳೆಸುತ್ತಲೇ ಸಾಹಿತಿಯಾಗಿ ಬೆಳೆದ ಗಣ್ಯರಲ್ಲಿ ಋಷಿ ಪ್ರಜ್ಞೆ, ಕವಿ ಪ್ರತಿಭೆಗಳ ಅದ್ವೈತ ವ್ಯಕ್ತಿತ್ವದ 'ಕುವೆಂಪು' ಕಾವ್ಯನಾಮ ಕನ್ನಡಿಗರಿಗೆ ರೋಮಾಂಚನವೇ ಸರಿ. ಇಪ್ಪತ್ತನೆಯ ಶತಮಾನ ಕಂಡಿರುವ ದೈತ್ಯ ಪ್ರತಿಭೆಯ ಈ ಮಹಾಕವಿಗೆ ಜನತೆ, ಸರ್ಕಾರ, ಸಂಘ ಸಂಸ್ಥೆಗಳು ಎಲ್ಲ ಬಗೆಯ ಅತ್ಯುನ್ನತ ಗೌರವ ಪ್ರಶಸ್ತಿಗಳನ್ನು ನೀಡಿ ಅಭಿಮಾನದ ಮಹಾಪೂರವನ್ನೇ ಹರಿಯಿಸಿವೆ ಎಂಬುದು ಗಮನಾರ್ಹ ಸಂಗತಿ.

1955ರಲ್ಲಿ ಕುವೆಂಪು ತಾವು ಓದಿ, ಅಧ್ಯಾಪಕ, ಪ್ರಾಧ್ಯಾಪಕರಾಗಿದ್ದ ಮೈಸೂರು ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರಾಗಿ ಅಧಿಕಾರದ ಗದ್ದುಗೆಯನ್ನೇರಿದರು. ಅದೇ ವರ್ಷ ಪ್ರಪ್ರಥಮ ಬಾರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ತನ್ನ ಪ್ರಶಸ್ತಿಗಳನ್ನು ನೀಡಿತು. ಪ್ರಥಮ ಬಾರಿಗೆ ಕನ್ನಡ ಕೃತಿ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯಕ್ಕೆ ಆ ಪ್ರಶಸ್ತಿ ದೊರಕಿತು. 1956ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವೂ 1966ರಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯವೂ, 1969ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯವೂ, 1985 ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾನಿಲಯವೂ ಗೌರವ ಡಿ-ಲಿಟ್ ಪದವಿಯನ್ನು ನೀಡಿದವು. 1956ರ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ನೇಮಕಗೊಂಡರು. 1957ರಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. 1958ರಲ್ಲಿ ಭಾರತ ಸರ್ಕಾವು 'ಪದ್ಮ ಭೂಷಣ' ಪ್ರಶಸ್ತಿ ನೀಡಿತು. 1964ರಲ್ಲಿ ಕರ್ನಾಟಕ ಸರ್ಕಾರ 'ರಾಷ್ಟ್ರಕವಿ' ಎಂದು ಘೋಷಿಸಿತು. 1968 ರಲ್ಲಿ ಅವರ ಶಿಷ್ಯರೂ ಅಭಿಮಾನಿಗಳೂ 'ಗಂಗೋತ್ರಿ' ಎಂಬ 1100 ಪುಟಗಳ ಬೃಹತ್ ಗೌರವ ಗ್ರಂಥವನ್ನು ಅವರಿಗೆ ಅರ್ಪಿಸಿದರು. 'ಪಂಪ ಪ್ರಶಸ್ತಿಯ' ಪ್ರ ಪ್ರಥಮ ಪುರಸ್ಕಾರವು 1988ರಲ್ಲಿ ಆ ಕೃತಿಗೆ ದೊರಕಿದೆ. ಹೀಗೆ ಕನ್ನಡಿಗರ ಹೃನ್ಮಂದಿರಗಳಲ್ಲಿ ಹಚ್ಚ-ಹಸುರಾಗಿ ನೆಲೆಗೊಂಡಿರುವ ಈ ಮಹಾಚೇತನ ೧೦ ನೇ ನವೆಂಬರ್ ೧೯೯೪ ರಂದು ನಮ್ಮಿಂದ ದೂರವಾಯಿತು.

ಕುವೆಂಪು ಕೃತಿಗಳ ಪರಿಚಯ :

ಕುವೆಂಪುರವರ ವೈವಿಧ್ಯಮಯ ಸಾಹಿತ್ಯ ಸೃಷ್ಟಿ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದೆ. ಭಾವಗೀತೆ, ಕಥೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ವಿಮರ್ಶೆ, ಪ್ರಬಂಧ, ವೈಚಾರಿಕ ಲೇಖನಗಳು, ಕಾವ್ಯ, ಮಹಾಕಾವ್ಯ-ಮುಂತಾದ ಪ್ರಕಾರಗಳಲ್ಲಿ ಸುಮಾರು ಎಪ್ಪತ್ತೈದಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕುವೆಂಪುರವರ ಮೊದಲ ಕವನ 'ಕೊಳಲು' 1930 ರಲ್ಲಿ ಪ್ರಕಟವಾಯಿತು. ಆದರೆ ಮಲೆನಾಡಿನ ಕವಿ ಕುವೆಂಪು ಮೊಟ್ಟ ಮೊದಲು ಕವಿತೆಗಳನ್ನು ರಚಿಸಿದ್ದು ಕನ್ನಡದಲ್ಲಿ ಅಲ್ಲ ಇಂಗ್ಲೀಷಿನಲ್ಲಿ ಎನ್ನುವುದು ಸ್ವಾರಸ್ಯದ ಸಂಗತಿಯಾಗಿದೆ. ಅಂದರೆ ಪುಟ್ಟಪ್ಪನವರು ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿಯೇ "The Beginner's Muse' ಎಂಬ ಹದಿನಾರು ಪುಟಗಳ ಇಂಗ್ಲೀಷ್ ಕವನಗಳ ಪುಟ್ಟ ಸಂಕಲನವೊಂದನ್ನು 1922 ರಲ್ಲಿಯೇ ಪ್ರಕಟಿಸಿದ್ದರು. ಆಗಿನ್ನೂ ಅವರು ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಯ ವಿದ್ಯಾರ್ಥಿಯಾಗಿದ್ದರು. ಕವನಗಳನ್ನು ಓದಿದ ಮಿತ್ರರು ಕವನಗಳ ಭಾಷೆಗೆ, ಉಪಮೆ ರೂಪಕಗಳಿಗೆ, ವಸ್ತು ವೈವಿಧ್ಯ ಕಲ್ಪನಾ ಚಾತುರ್ಯಕ್ಕೆ ಮಾರು ಹೋದರು. ಆಕಸ್ಮಿಕ ಎಂಬಂತೆ ಮೈಸೂರಿಗೆ ಬಂದಿದ್ದ ಐರಿಷ್ ಕವಿ ಜೇಮ್ಸ್ ಕಸಿನ್ಸ್ ಅವರಿಗೆ ಪುಟ್ಟಪ್ಪನವರು ತಮ್ಮ ಕವನಗಳನ್ನು ತೋರಿಸಿದರು. ಕವನಗಳನ್ನು ಓದಿದ ಜೇಮ್ಸ್‌ಕಸಿನ್ಸ್ ಮೆಚ್ಚಿ ಪ್ರೋತ್ಸಾಹಿಸಿದರು. ''ನೀವು ಏನು ಮಾಡಿದರೂ ನಿಮ್ಮದಲ್ಲದ ಭಾಷೆಯಲ್ಲಿ ನಿಮ್ಮ ಅಭಿವ್ಯಕ್ತಿಯನ್ನು ಕಂಡು ಕೊಳ್ಳಲಾರಿರಿ. ಅದರಲ್ಲೂ ಕವಿತೆಯಂತಹ ಸೃಜನಾತ್ಮಕ ಅಭಿವ್ಯಕ್ತಿಯಂತೂ ನಿಮ್ಮದಲ್ಲದ ಪರಕೀಯ ಭಾಷೆಯಲ್ಲಿ ನಿಮಗೆ ಸಾಧ್ಯವೇ ಇಲ್ಲ..... ರವೀಂದ್ರರು ತಮ್ಮ ತಾಯಿ ನುಡಿಯಾದ ಬಂಗಾಳಿ ಭಾಷೆಯಲ್ಲಿ ಬರೆದಂತೆ ನೀನು ನಿನ್ನ ತಾಯಿ ನುಡಿಯಾದ ಕನ್ನಡದಲ್ಲಿ ಬರೆ, ಉತ್ತಮ ಕವಿಯಾಗುತ್ತೀಯ'', ಎಂಬ ವಿವೇಕದ ನುಡಿಗಳನ್ನಾಡಿ ಪುಟ್ಟಪ್ಪನವರನ್ನು ಅಂದಿನ 'ನವೋದಯದ ಮುಖ್ಯ ಪ್ರವಾಹದತ್ತ ತಿರುಗಿಸಿದರು.

ಇದರಿಂದಾಗಿ ವಿದ್ಯಾರ್ಥಿಯಾಗಿದ್ದಾಗಲೇ ಪುಟ್ಟಪ್ಪನವರು ಅನೇಕ ಕವನಗಳನ್ನು ರಚಿಸಿದ್ದರು ಎಂಬ ಸಂಗತಿ ನಮಗೆ ಗೊತ್ತಾಗುತ್ತದೆ. ಎ.ಆರ್.ಕೃಷ್ಣಶಾಸ್ತ್ರಿಗಳ ಒತ್ತಾಯದಿಂದ ಅವರು ಏರ್ಪಡಿಸಿದ್ದ ಕವಿ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರಂತೆ. ಎಂ. ಎ ತರಗತಿಗೆ ಸೇರಿದ ಮೊದಲಲ್ಲಿ 'ಜಲಗಾರ' ಅನಂತರ 'ಯಮನಸೋಲು' ನಾಟಕಗಳನ್ನು ಪುಟ್ಟಪ್ಪನವರು ರಚಿಸಿದರು. ಅವರೆಡೂ ಭಾರಿ ಯಶಸ್ಸನ್ನು ಗಳಿಸಿದವು 'ಸರಳರಗಳೆ' ಯನ್ನು ಮೊಟ್ಟಮೊದಲ ಬಾರಿಗೆ ಯಶಸ್ವಿಯಾಗಿ ನಾಟಕದ ರಚನೆಗೆ ಬಳಸಿಕೊಂಡ ಕೀರ್ತಿ ಅವರದು. ಈಗಾಗಲೇ ಅವರು 'ಬೊಮ್ಮನಹಳ್ಳಿಯ ಕಿಂದರಿ ಜೋಗಿ' ನೀಳ್ಗವನದಿಂದಲೂ ಕನ್ನಡ ನಾಡಿನ

ಕಾವ್ಯ ಪ್ರಿಯರ ಹೃದಯದಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿಕೊಂಡಿದ್ದರು ಈ ನಾಟಕಗಳು ಅವರಿಗೆ ಇನ್ನೂ ಹೆಚ್ಚಿನ ಯಶಸ್ಸನ್ನು ತಂದವು.

ಈಗಾಗಲೇ ತಿಳಿಸಿದಂತೆ ಕುವೆಂಪು ಅವರ ಮೊಟ್ಟಮೊದಲ ಕವನ ಸಂಕಲನ 'ಕೊಳಲು'. ಇದು 1930 ರಲ್ಲಿ ಪ್ರಕಟವಾಗಿದೆ. ಇದಕ್ಕೆ ಬಿ.ಎಂ. ಶ್ರೀಯವರೇ ಮುನ್ನುಡಿಯನ್ನು ಬರೆದಿದ್ದಾರೆ. ''ಜೀವಾನಂದ, ಬ್ರಹ್ಮಾನಂದ, ಕಾವ್ಯಾನಂದಗಳನ್ನು ತಮ್ಮ ಶಕ್ತಿಗಳಿಗನುಗುಣನಾಗಿ ಅಂತಃ ಕರಣದಲ್ಲಿ ತುಂಬಿಕೊಳ್ಳುತ್ತಾ ಹಕ್ಕಿ ಹಾಡಿದಂತೆ ಸುಖವಾಗಿ ಹಾಡುವವರು ಪುಟ್ಟಪ್ಪನವರು ಇವರು ತಿರುಳುಗನ್ನಡ ನುಡಿಗಳು, ಇಂಪಾದ ಹೊಸ ಹೊಸ ಮುದ್ದು ಪದ್ಯಗಳು, ಸರಳ ಶೈಲಿ, ಭಾವೋದ್ರೇಕ ಗೀತ ಪ್ರವಾಹ ಇವುಗಳ ಹೊಡೆತದಲ್ಲಿ ಏನಾದರೂ ತಪ್ಪುಗಳು ಒಂದು ವೇಳೆ ಬಿದ್ದಿದ್ದರೂ ಅವು ಕಾಣದಂತೆ ಮುಚ್ಚಿ ಹೋಗುವವು. ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ, ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ. ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ, ಆತ್ಮವಿದೆ; ಅಮೃತ ತತ್ವದ ಸಾರವಿದೆ'' ಎಂಬುದಾಗಿ ಬಿ.ಎಂ. ಶ್ರೀರವರು ಆಡಿರುವ ಮಾತುಗಳಲ್ಲಿ ಪುಟ್ಟಪ್ಪನವರು ಮುಂದೆ ಕನ್ನಡದ ಬಹುದೊಡ್ಡ ಕವಿಯಾಗಿ ಬೆಳೆಯುವ ಎಲ್ಲಾ ಸಾಧ್ಯತೆಗಳು ಇದ್ದವು ಎಂಬ ಅಂಶ ವೇದ್ಯವಾಗುತ್ತದೆ. 'ಕೊಳಲು' ಸಂಕಲನದ ಅತ್ಯುತ್ಕೃಷ್ಟವಾದ ಕವನಗಳಲ್ಲಿ ಒಂದಾದ 'ಸುಗ್ಗಿ ಬರುತಿದೆ.' ಎಂಬುದರ ಕೆಲವು ಸಾಲುಗಳನ್ನು ಗಮನಿಸಬಹುದು.

ಅಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ!
ಸುಗ್ಗಿ ಬರೆ ಹಿಗ್ಗಿತಿರೆ ಸಗ್ಗ ಸೊಗವ ತರುತಿದೆ!
ಕಣೆವೆಯಿಳಿದು ತೆಮರಸೇರಿ.
ತರುಗಳಲ್ಲಿ ತಳಿರ ಹೇರಿ,
ಹೊಸತು ಜೀವಕಳೆಯ ಬೀರಿ,
ಸುಗ್ಗಿ ಮೂಡುತಿರುವುದು!
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು!

ಕನ್ನಡ ಶ್ರೇಷ್ಠ ಚಿಂತಕರೂ, ವಿದ್ವಾಂಸರೂ, ಸ್ವಯಂ, ಸಾಹಿತಿಗಳೂ ಆದ ದಿವಂಗತ ಶ್ರೀ ಡಿ.ವಿ. ಗುಂಡಪ್ಪನವರು ಈ ಪಂಕ್ತಿಗಳನ್ನು ಉದ್ಧರಿಸಿ ಹೇಳಿ ''ಇದನ್ನು ಬರೆಯುವ ಕವಿಗಳಿದ್ದಾರೆ. ಇನ್ನು ಕನ್ನಡಕ್ಕೆ ಭಯವಿಲ್ಲ'' ಎಂದು ಉದ್ಗಾರ ತೆಗೆದರಂತೆ. ಮುಂದಿನ ದಿನಗಳಲ್ಲಿ ಕುವೆಂಪುರವರ ಕಾವ್ಯ ಸೃಷ್ಠಿ ನಿರಂತರವಾಗಿ ಸಾಗಿ ಸಮೃದ್ಧ ಫಲವನ್ನು ನೀಡಿತು. 'ಕೊಳಲು' ಸಂಕಲನವೂ ಸೇರಿದಂತೆ ಮೂವತ್ತೊಂದು ಕವನ

ಸಂಕಲನಗಳನ್ನು ಪ್ರಕಟಿಸಿದ್ದಾರೆ 'ಕೊಳಲು'(1930), ಪಾಂಚಜನ್ಯ (1933), ಕಲಾಸುಂದರಿ(1934), ನವಿಲು (1946), ಪಕ್ಷಕಾಶಿ (1946), ಕಿಂಕಿಣಿ(1946), ಪ್ರೇಮಕಾಶ್ಮೀರ (1946), ಷೋಡಶಿ (1947), ಇಕ್ಷುಗಂಗೋತ್ರಿ (1957), ಅನಿಕೇತನ (1963), ಪ್ರೇತಕ್ಯೂ (1967), ಮಂತ್ರಾಕ್ಷತೆ (1966), ಕದರಡಕೆ (1967), ಅನುತ್ತರಾ (1969), ಕುಂಟೀಚಕ (1969), ಹೊನ್ನಹೊತ್ತಾರೆ (1976),ಕಥನ ಕವನಗಳು (1936), ಅಮಲನ ಕಥೆ (1926), ನನ್ನ ಮನೆ (1947), ಮೇಘಪುರ (1947), ಸಮುದ್ರ ಲಂಘನ (1981), ಮಹಾದರ್ಶನ ಮತ್ತು ಪ್ರಾಯಶ್ಚಿತ್ತ (1985), ಕೊನೆಯ ತೆನೆ ಮತ್ತು ವಿಶ್ವಮಾನವ ಗೀತೆ (1981), ಇವು ಅವರ ಕವನ ಸಂಕಲನಗಳು. 'ಚಿತ್ರಾಂಗದ' ಎಂಬ ಖಂಡ ಕಾವ್ಯವನ್ನು 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯವನ್ನು ಅವರು ರಚಿಸಿದ್ದಾರೆ.

ಯಮನಸೋಲು, ಜಲಗಾರ, ಬಿರುಗಾಳಿ, ವಾಲ್ಮೀಕಿಯ ಭಾಗ್ಯ, ಮಹಾರಾತ್ರಿ, ಶ್ಮಶಾನ-ಕುರುಕ್ಷೇತ್ರ, ರಕ್ತಾಕ್ಷಿ, ಶೂದ್ರತಪಸ್ವಿ, ಬೆರಳ್ಗೆಕೊರಳ್, ಬಲಿದಾನ, ಚಂದ್ರಹಾಸ, ಕಾನೀನ, ಮೋಡಣ್ಣನ ತಮ್ಮ, ನನ್ನ ಗೋಪಾಲ-ಇವು ಕುವೆಂಪುರವರು ಬರೆದಿರುವ ನಾಟಕಗಳು. ಸನ್ಯಾಸಿ ಮತ್ತು ಇತರ ಕಥೆಗಳು, ನನ್ನ ದೇವರು ಮತ್ತು ಇತರ ಕಥೆಗಳು ಸಣ್ಣಕಥೆಗಳ ಸಂಕಲನಗಳಾದರೆ, ಮಲೆ ನಾಡಿನ ಚಿತ್ರಗಳು ಕುವೆಂಪುರವರ ಮಹತ್ವ ಪೂರ್ಣ ಪ್ರಬಂಧ ಸಂಕಲನವಾಗಿದೆ. ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು, ಕುವೆಂಪು ಅವರ ಎರಡು ಬೃಹತ್ ಕಾದಂಬರಿಗಳು, 'ಬೊಮ್ಮನ ಹಳ್ಳಿಯ ಕಿಂದರ ಜೋಗಿ' ಮಕ್ಕಳಿಗಾಗಿ ಬರೆದ ಬಹು ಪ್ರಸಿದ್ಧ ಕವನ. ಮಕ್ಕಳಿಗಾಗಿ ಕುವೆಂಪು ಹಲವು ಕೃತಿಗಳನ್ನು ರಚಿಸಿದ್ದಾರೆ. 'ಜನಪ್ರಿಯ ವಾಲ್ಮೀಕಿ ರಾಮಾಯಣ' ಬರೆದಿದ್ದಾರೆ. ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದರ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. 'ನೆನಪಿನ ದೋಣಿಯಲ್ಲಿ' ಇದು ಅವರ ಆತ್ಮಕಥನವಾಗಿದೆ. ಕಾವ್ಯ ವಿಹಾರ, ತಪೋನಂದನ, ವಿಭೂತಿ ಪೂಜೆ, ದ್ರೌಪದಿಯ ಶ್ರೀಮುಡಿ, ರಸೋವೈಸ:, ಇತ್ಯಾದಿ ಸಾಹಿತ್ಯ ಪ್ರಚಾರ ಮೊದಲಾದ ವಿಮರ್ಶಾ ಕೃತಿಗಳು, ನಿರಂಕುಶ ಮತಿಗಳಿಗೆ, ಷಷ್ಠಿ ನಮನ, ಮನುಜ ಮತ ವಿಶ್ವಪಥ, ವಿಚಾರ ಕ್ರಾಂತಿಗೆ ಆಹ್ವಾನ ಇವೇ ಮೊದಲಾದ ವಿಚಾರ ಶೀಲ ಪ್ರಬಂಧ ಉಪನ್ಯಾಸಗಳೂ ಕುವೆಂಪುರವರ ಕೊಡುಗೆಗಳಾಗಿವೆ.

ಅಧ್ಯಾಯ - 3

ಸಮಕಾಲೀನತೆ

ಅ) ಸಮಕಾಲೀನತೆ ಎಂದರೇನು?

ಪ್ರತಿಯೊಬ್ಬ ಕವಿಯೂ ಒಂದು ನಿರ್ಧಿಷ್ಟವಾದ ಕಾಲಮಾನದಲ್ಲಿ ಬದುಕಿರುತ್ತಾನಾದ್ದರಿಂದ ಅವನಿಗೆ ಅವನು ಬದುಕಿದ ಕಾಲ ಸಮಕಾಲೀನ ಎನ್ನುವುದು ಬಹಳ ಸರಳವಾದ ಸಂಗತಿ. ನಾವು ಕವಿ ಕೃತಿಗಳನ್ನು ಕುರಿತು ಮಾತನಾಡುವಾಗ ಕವಿಯ ಬದುಕಿನ ಅವಧಿಯನ್ನಷ್ಟೆ ಗಮನಿಸದೆ ಅವನು ಬದುಕಿದ ಶತಮಾನವನ್ನು ಮೂಲಮಾನವನ್ನಾಗಿರಿಸಿಕೊಳ್ಳುತ್ತೇವೆ. ಸಾಹಿತ್ಯ ಚರಿತ್ರೆಯನ್ನು ಅಭ್ಯಾಸ ಮಾಡುವಾಗ ಸಾಹಿತ್ಯ ವಿಮರ್ಶೆಯನ್ನು ಮಾಡುವಾಗ ಆಯಾಶತಮಾನಗಳನ್ನು ಗಮನದಲ್ಲಿರಿಸಿಕೊಂಡು ಅಂದಂದಿನ ಕವಿಗಳನ್ನು ಕೃತಿಗಳನ್ನು ಅಳೆದು ತೂಗುವುದು ವಿದ್ವಾಂಸರೆಲ್ಲರೂ ಅನುಕೂಲಕ್ಕಾಗಿ ಒಪ್ಪಿಕೊಂಡ ಒಂದು ಪರಪರೆ. ಆದ ಕಾರಣ ಒಬ್ಬ ಕವಿಯ ಸಮಕಾಲೀನತೆಯನ್ನು ನಾವು ಗುರುತಿಸುವಾಗ ಅವನ ಬದುಕಿನ ಕೇಂದ್ರದ ಸುತ್ತ ಇರುವ ಅಂದಿನ ಶತಮಾನವೆ ನಮಗೆ ಪರಿಧಿ.

ಸಮಕಾಲೀನ ಪ್ರಜ್ಞೆ ಎಂದರೆ, ಆಯಾ ಕವಿ ತಾನು ಬದುಕಿದ ಆ ಒಂದು ಕಾಲದ ಅಥವಾ ಶತಮಾನದ ಸಮಕಾಲೀನ ಜೀವನವನ್ನು ಎಷ್ಟರಮಟ್ಟಿಗೆ ಜೀವಂತವಾಗಿ ಅನುಭವಿಸಿ ತನ್ನ ಕೃತಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ ಎನ್ನುವುದನ್ನು ಕುರಿತದ್ದು. ಪ್ರತಿಯೊಬ್ಬ ಕವಿಯೂ ಅಂದಂದಿನ ಕಾಲ ದೇಶಗಳ ಯಾವುದೋ ಒಂದು ಬಿಂದುವಿನಲ್ಲಿ ಬದುಕಿರುವ ಕಾರಣ, ಅವನು ಅಂದಿನ ಶತಮಾನದ ಸತ್ವದಿಂದ ಅನಿವಾರ್ಯವಾಗಿ ಬದ್ಧನಾಗಿರುತ್ತಾನೆ. ಆದ ಕಾರಣ ಅವನ ಕೃತಿ ಅವನಿಗಿಂತ ಹಿಂದಿನ ಶತಮಾನದ ಕವಿ ಕೃತಿಗಳಿಂದ ಮತ್ತು ಅವನ ನಂತರದ ಮುಂದಿನ ಶತಮಾನದ ಕವಿ ಕೃತಿಗಳಿಂದ ಸಹಜವಾಗಿಯೇ ಬೇರೆಯಾಗಿರುತ್ತದೆ. ಪಂಪ ಕವಿ ತನ್ನ 'ವಿಕ್ರಮಾರ್ಜುನ ವಿಜಯ' ವನ್ನು ಹತ್ತನೆ ಶತಮಾನದಲ್ಲಿ ಬರೆದ. ಒಂದು ವೇಳೆ ಪಂಪ ಅದೇ ಕೃತಿಯನ್ನು ಹನ್ನೆರಡನೇ ಶತಮಾನದಲ್ಲಿ ಬರೆದಿದ್ದರೆ ಅದು ತನ್ನ ಸ್ವರೂಪ ಸ್ವಭಾವಗಳಲ್ಲಿ ಈಗಿರುವುದಕ್ಕಿಂತ ಭಿನ್ನವಾಗಿ ಬಿಡುತ್ತಿತ್ತು ಎನ್ನುವಷ್ಟರ ಮಟ್ಟಿಗೆ ಅದು ಹತ್ತನೇ ಶತಮಾನದ ಸತ್ವದೊಂದಿಗೆ ಬದ್ಧವಾಗಿದೆ. [1] ಎಂಬುದನ್ನು ಜಿ.ಎಸ್. ಶಿವರುದ್ರಪ್ಪನವರು ತಿಳಿಸಿದ್ದಾರೆ. ಪ್ರತಿಯೊಂದು ಶತಮಾನವೂ ತನ್ನದೇ ಆದ 'ಸಮಕಾಲೀನತೆ' ಯನ್ನು ಅಂದಂದಿನ ಕೃತಿಗಳಲ್ಲಿ ಪ್ರಕಟಿಸಿಕೊಂಡಿದೆ.

ಪ್ರತಿಯೊಂದು ಶತಮಾನಕ್ಕೂ ತನ್ನದ ಆದ, ಗುರುತಿಸಬಹುದಾದ ಕೆಲವು ವೈಲಕ್ಷಣ್ಯಗಳಿವೆ. ಒಂದೊಂದು

ಶತಮಾನವೂ ತನಗಿಂತ ಹಿಂದಿನ ಶತಮಾನಗಳಿಂದ ಬಿನ್ನವಾದ ಪರಿಸರವನ್ನು ಹೊಂದುವುದು ಪ್ರಗತಿಯನ್ನೋ ಬದಲಾವಣೆಯನ್ನೋ ಸೂಚಿಸುತ್ತದೆ. ಹತ್ತನೇ ಶತಮಾನ ವೀರ ಯುಗ, 12ನೇ ಶತಮಾನ ಭಕ್ತಿಯುಗ, 20ನೇ ಶತಮಾನ ವೈಜ್ಞಾನಿಕ ಯುಗ ಎಂದಾಗ ಅದು ಆಯಾ ಕಾಲದ ಪ್ರಮುಖವಾದ ಜನಮನೋಧರ್ಮವನ್ನು ಸೂಚಿಸುತ್ತದೆ. ಕಾಲದಿಂದ ಕಾಲಕ್ಕೆ ಜನಜೀವನದಲ್ಲಾದ ಧಾರ್ಮಿಕ, ರಾಜಕೀಯ, ಸಾಮಾಜಿಕ ಬದಲಾವಣೆಗಳಿಂದ ಆಯಾ ಕಾಲದಲ್ಲಿ ವೈಚಾರಿಕ ಕ್ರಾಂತಿಯಾಗುತ್ತದೆ. ಅದರ ಪರಿಣಾಮವಾಗಿ ಹೊಸ ಮೌಲ್ಯಗಳು, ಹೊಸ ಜೀವನ ದೃಷ್ಠಿಗಳು ಕಾಣಿಸಿಕೊಳ್ಳುತ್ತವೆ. ಅಂದಂದಿನ ಈ ಸಮಕಾಲೀನತೆಯನ್ನು ಕವಿಯ ಪ್ರಜ್ಞೆ ಗ್ರಹಿಸಿ ಅದಕ್ಕೆ ಅನುಗುಣವಾದ ಅಭಿವ್ಯಕ್ತಿಯನ್ನು ನೀಡುತ್ತದೆ. ಈ ಅಭಿವ್ಯಕ್ತಿಯ ಕ್ರಮವು ಕಾಲದಿಂದ ಕಾಲಕ್ಕೆ ಬೇರೆಯಾಗಿರುತ್ತದೆ. ಹೀಗಾಗಿ ವಸ್ತುವಿನಲ್ಲಿ, ರೀತಿಯಲ್ಲಿ, ದೃಷ್ಠಿಯಲ್ಲಿ ಪ್ರಮುಖವಾದ ಬದಲಾವಣೆಗಳು ಅಂಧಂದಿನ ಕವಿಗಳಲ್ಲಿ ಕಂಡು ಬಂದು ಅದು ಸಾಹಿತ್ಯದ ಪ್ರಗತಿಯನ್ನು ನಾವು ಯಾವ ಕವಿಯಲ್ಲಿ ಅಂದಿನ ಯುಗದ ಅಥವಾ ಕಾಲದ ಜೊತೆಗೆ ಅಂದಿನ ಸಾಹಿತ್ಯಗಳಿಗೆ ಇರುವ ಸಮಕಾಲೀನ ಪ್ರಜ್ಞೆಯನ್ನು ಪ್ರಕಟಿಸುತ್ತದೆ. ಆದ ಕಾರಣ ನಾವು ಯಾವ ಕವಿಯಲ್ಲಿ ಅಂದಿನ ಯುಗದ ಅಥವಾ ಕಾಲದ ನಿಜವಾದ ಜೀವನಾನುಭವದ ವಿಶಿಷ್ಟ ಸ್ಪಂದನವನ್ನು ಗುರುತಿಸುತ್ತೇವೆಯೋ ಅಂಥ ಕವಿಯನ್ನು ಸಮಕಾಲೀನ ಪ್ರಜ್ಞೆ ಉಳ್ಳವನೆಂದು ಹೇಳುತ್ತೇವೆ.

ಕನ್ನಡ ಸಾಹಿತ್ಯ ಪರಂಪರೆಯ ಪರಿಚಯವಿರುವವರು ಈ ಸಮಕಾಲೀನ ಪ್ರಜ್ಞೆ ಉದ್ದಕ್ಕೂ ಹಲವು ಘಟ್ಟಗಳಲ್ಲಿ ಅಂದಂದಿನ ಪ್ರಮುಖ ಕವಿಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಕಾಣ ಬಹುದು. ಎಷ್ಟೋವೇಳೆ ಕವಿಗಳು ತಾವು ಬದುಕಿದ ಕಾಲದ ಜನಜೀವನದಿಂದ ವಸ್ತುಗಳನ್ನಾರಿಸಿಕೊಂಡ ಕಾರಣದಿಂದಲೇ ಅವರಲ್ಲಿ ಸಮಕಾಲೀನ ಪ್ರಜ್ಞೆ ಇದೆ ಎಂತಲೂ, ಸಮಕಾಲೀನವಲ್ಲದ ಐತಿಹಾಸಿಕ, ಪೌರಾಣಿಕ ವಸ್ತುಗಳನ್ನಾರಿಸಿಕೊಂಡು ಕೃತಿ ರಚನೆಮಾಡಿದ ಕವಿಗಳಿಗೆ ಸಮಕಾಲೀನ ಪ್ರಜ್ಞೆ ಅಷ್ಟಾಗಿ ಇಲ್ಲವೆಂದೋ, ಅವರು ಸಮಕಾಲೀನ ಜೀವವನ್ನೆದುರಿಸಲಾರದೆ ಪಲಾಯನ ಮಾಡಿದ್ದಾರೆಂದೊ ಕೆಲವು ವಿಮರ್ಶಕರು ಮಾತನಾಡಿರುವುದುಂಟು.

ವಸ್ತು ಯಾವ ಕವಿಗೂ ಬರೀ ಒಂದು ನಿಮಿತ್ತ ಮಾತ್ರ. ಏಕೆಂದರೆ ನಿಜವಾದ ಕೃತಿ ಕೇವಲ 'ಕಥಾವಸ್ತು' ಅಲ್ಲ, ಆ ವಸ್ತುವಿನ ಮೂಲಕ ಪ್ರಕಟವಾಗಿರುವ ಆಯುಗದ ಮನೋಧರ್ಮ, ಯುಗ ಮೌಲ್ಯಗಳು ಮುಖ್ಯ. ಸಮಕಾಲೀನ ಪ್ರಜ್ಞೆಯ ಪರಿಶೀಲನೆಯಲ್ಲಿ, ಆ ಒಂದು ಯುಗದ ಸಾಮಾಜಿಕ, ಧಾರ್ಮಿಕ, ರಾಜಕೀಯ

ಬದಲಾವಣೆಗಳ ಪರಿಣಾಮದಿಂದ ನಿರ್ಮಿತವಾದ ಮೌಲ್ಯಪ್ರಜ್ಞೆ ಮತ್ತು ಈ ಪ್ರಜ್ಞೆಯನ್ನು ಅಭಿವ್ಯಕ್ತಿಗೊಳಿಸಲು ಕವಿ ತಾನು ನಿರ್ಮಿಸಿಕೊಂಡ ನವನವೋಲ್ಲೇಖ ಶಾಲಿನಿಯಾದ ಭಾಷೆ ಶೈಲಿ ಇವುಗಳನ್ನು ಮೂಲಮಾನವನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಶಕ್ತನಾದ ಕವಿ ಅತ್ಯಂತ ಪ್ರಾಚೀನವಾದ ವಸ್ತುವನ್ನಾಶ್ರಯಿಸಿಯೂ ತನ್ನ ಸಮಕಾಲೀನತೆಯನ್ನು ಪ್ರಕಟಿಸಬಲ್ಲ. ಕೇವಲ ಸಮಕಾಲೀನ ವಸ್ತುವನ್ನು ತೆಗೆದುಕೊಂಡು ಕೃತಿರಚನೆ ಮಾಡಿದವರಲ್ಲಿಯೇ ಸಮಕಾಲಿನ ಪ್ರಜ್ಞೆ ಇದೆ ಎಂದು ಭಾವಿಸುವುದು ಅರ್ಧಸತ್ಯ ಮಾತ್ರ.

ಪ್ರತಿಯೊಬ್ಬ ಕವಿಯೂ ತನ್ನ ಸಮಕಾಲೀನ ಜೀವನಾನುಭವದಿಂದಲೇ ಕೃತಿ ರಚನೆ ಮಾಡುತ್ತಾನೆ ಎಂದರೂ ಅದು ಪೂರ್ಣ ಸತ್ಯವಲ್ಲ. ಏಕೆಂದರೆ ನಿಜವಾದ ಕವಿ ನಮಗೆ ಯಾವುದೋ ಒಂದು ಕಾಲದ 'ಸಮಕಾಲೀನತೆ' ಯಲ್ಲಿ ಬದುಕುತ್ತಿರುವಂತೆ ತೋರಿದರೂ ಅವನಹಿಂದೆ ಒಂದು ಜೀವಂತ ಇತಿಹಾಸವೇ ಅವನ ಸಾಹಿತ್ಯ ನಿರ್ಮಿತಿಯ ಪರಂಪರೆಯ ಒಂದು ಮುಂದುವರಿಕೆಯಾಗಿ ಕೆಲಸ ಮಾಡುತ್ತಿರುತ್ತದೆ. ಈ ಐತಿಹಾಸಿಕ ಪ್ರಜ್ಞೆಯಿಂದ ನಿಜವಾದ ಲೇಖಕ ಹೊರತಾದವನಲ್ಲ. ಅವನು ಎಷ್ಟರ ಮಟ್ಟಿಗೆ ಸಮಕಾಲೀನನೋ ಅಷ್ಟೆ ಭೂತಕಾಲಕ್ಕೂ ಸಂಬಂಧಿಸಿದವನು. ಹಾಗೆಯೇ ಅವನ ಕೃತಿ ಭವಿಷ್ಯದ ಘಟನೆಗಳಿಗೆ ಒಡ್ಡಿದ ಕನ್ನಡಿ.

ಹೀಗೆ ಕವಿ ನಿತ್ಯ ವರ್ತಮಾನಕ್ಕೆ ಸಲ್ಲಬೇಕಾದರೆ ಅವನು ತನ್ನ ಸಮಕಾಲೀನತೆಯನ್ನು ಎಷ್ಟರ ಮಟ್ಟಿಗೆ ಸರ್ವಕಾಲೀನವನ್ನಾಗಿಸುವ ಸಾಮರ್ಥ್ಯವನ್ನು ಪಡೆದಿದ್ದಾನೆ ಎನ್ನುವುದು ಮುಖ್ಯ. ನಿಜವಾದ ಅರ್ಥದಲ್ಲಿ ಒಬ್ಬ ಲೇಖಕ ಸಮಕಾಲೀನನೂ ಹೌದು, ಸಾರ್ವಕಾಲೀನನೂ ಹೌದು. ಸಮಕಾಲೀನ ಅಂದರೆ ಅವನು ತನ್ನ ಶತಮಾನದ ಪರಿಸರಕ್ಕೆ ಪಡಿಮಿಡಿಯುವ ಸಾಮರ್ಥ್ಯವನ್ನು ಪಡೆದಿದ್ದಾನೆಂಬುದಕ್ಕೆ ಅವನ ಕೃತಿ ಸಾಕ್ಷಿಯಾಗಿದೆ ಅನ್ನುವ ಅರ್ಥ. ಅವನು ಸಾರ್ವಕಾಲೀನ ಅಂದರೆ ಎಲ್ಲ ಕಾಲಕ್ಕೂ ನವನವೋನ್ಮೇಷ ಶಾಲಿನಿಯಾಗುವ ಅರ್ಥ-ಭಾವ ಮೌಲ್ಯಗಳಿಗೆ ಸಾಂಕೇತಿಕವಾದ ವಿಶಿಷ್ಟ ಅಭಿವ್ಯಕ್ತಿಯನ್ನು ನಿರ್ಮಿಸಿದ್ದಾರೆ ಎಂದು ಅರ್ಥ.

ಆ. ಕುವೆಂಪು ಕವಿತೆಗಳಲ್ಲಿ ಸಮಕಾಲೀನತೆ :

ಕವಿ ಅಥವಾ ಸಾಹಿತಿ ಪರಿಸರದ ಶಿಶು. ನಿಸರ್ಗ ಮತ್ತು ಸಮಾಜಗಳು ಅವನನ್ನು ತೀಡಿ ತಿದ್ದುತ್ತವೆ, ಬಡಿದು ರೂಪಿಸುತ್ತವೆ. ಅವನ ಬದುಕಿನ ಏರಿಳಿತಗಳಿಗೆ, ನೋವು ನಲಿವುಗಳಿಗೆ, ಚಟ ಚಾಳಿಗಳಿಗೆ ಅವು ಕಾರಣವಾಗುವುದುಂಟು. ಅವನ ಮನಸ್ಸಿನ ಮೇಲೂ ಅವು ಪರಿಣಾಮ ಬೀರುವುದುಂಟು. ಅವನು ಸಮಾಜದ ಒಂದು ಭಾಗವಾಗಿ ಅದರ ನಡುವೆಯೇ ಬಾಳಬೇಕಾಗಿರುವುದರಿಂದ ಅದರೊಡನೆ ಆತ್ಮೀಯತೆಯಿಂದ ಬೆರೆಯಬಲ್ಲನು. ಸಹಾನುಭೂತಿಯಿಂದ ವ್ಯವಹರಿಸಬಲ್ಲನು. ಸಾಕ್ಷಿಪ್ರಜ್ಞೆಯಿಂದ ಅದರ ಒಳಹೊರಗನು

ಪರೀಕ್ಷಿಸಬಲ್ಲನು.ಸಮಾಜದ ಆಗುಹೋಗುಗಳ ಬಗ್ಗೆ ಕಳಕಳಿ ಕಳವಳ ಕಾತರತೆಯಿದಷ್ಟೂ ಅದರ ಬಗೆಗಿನ ಅವನ ಪ್ರಜ್ಞೆ ಸಾಂದ್ರವಾಗುತ್ತದೆ. ಅದು ಎಷ್ಟು ಸಾಂದ್ರವಾಗಿದ್ದರೆ ಅಷ್ಟೂ ಸಾಹಿತ್ಯದ ಮೂಲಕ ಅಭಿವ್ಯಕ್ತಿಯನ್ನು ಪಡೆಯುತ್ತದೆ.

ಸಾಮಾಜಿಕ ಋಣವನ್ನು ತೀರಿಸಬೇಕಾದ್ದು ಸಾಹಿತಿಯ ಆದ್ಯ ಕರ್ತವ್ಯ. ಅವನು ನಿರ್ವಹಿಸಬೇಕಾದ ಸಾಮಾಜಿಕ ಜವಾಬ್ದಾರಿಯನ್ನು ಬೇರೆ ಯಾರೂ ನಿರ್ವಹಿಸಲಾರರು. ಸಾದು ಸಂತ ಋಷಿ ಸನ್ಯಾಸಿಗಳ ಏಕಮೇವ ಉದ್ದೇಶ ಬ್ರಹ್ಮ ಸಾಕ್ಷಾತ್ಕಾರ ಮತ್ತು ವೈರಾಗ್ಯಸಾಧನೆ. ಅವರು ಸಾಮಾಜಿಕ ಜವಾಬ್ದಾರಿ ಹೊರಲಾರರು. ರಾಜಕಾರಣಿಗಳು, ವಿಜ್ಞಾನಿಗಳಂಥ ತಜ್ಞರಿಗೆ ಸಮಾಜ ಕಲ್ಯಾಣದ ಬಗ್ಗೆ ಆಸ್ಥೆಯಿರುವುದಾದರೂ ಸಾಹಿತಿಯ ಅಂತರ್ದೃಷ್ಟಿಯಾಗಲಿ, ಸಂವೇದನ ಸಾಮರ್ಥ್ಯವಾಗಲಿ ಅವರಿಗಿರುವುದಿಲ್ಲ. ಈ ಕಾರಣಗಳಿಂದ ಸಾಹಿತಿಯ ಹೊಣೆ ಹೆಚ್ಚಿನದೆಂದೇ ಹೇಳಬೇಕು.

ಕುವೆಂಪು ನಿಸರ್ಗ ಹಾಗೂ ದಾರ್ಶನಿಕ ಕವಿ ಮಾತ್ರವಲ್ಲ ಸಾಮಾಜಿಕ ಪ್ರಜ್ಞೆಯ ಮಹತ್ವಪೂರ್ಣವಾದ ಕವಿಯೂ ಹೌದು ನಿಸರ್ಗೋಪಾಸನೆಯ ಮತ್ತು ಆಧ್ಯಾತ್ಮ ಸಾಧನೆಯ ಪ್ರಖರಪ್ರಭಾವ ಅವರ ಸಾಹಿತ್ಯದಲ್ಲಿ ಉದ್ದಕ್ಕೂ ಎದ್ದು ಕಾಣುವುದಾದರೂ, ಸಮಾಜದ ಸೂಕ್ಷ್ಮ ವೀಕ್ಷಣೆಯಿಂದ ಸಂಲಬ್ಧವಾಗುವ (ಲಭ್ಯ) ಲೋಕಾನುಭವದ ಶ್ರೀಮಂತತೆಯನ್ನು ಸಹ ಸಮ ಪ್ರಮಾಣದಲ್ಲಿ ಗುರುತಿಸಿಬಹುದು. ಅವರ ದೃಷ್ಟಿಯಲ್ಲಿ ಸಮಾಜವೆಂದರೆ, ಉತ್ತಮ ಕುಲದವರಿಗೆ ಮತ್ತು ಶ್ರೀಮಂತವರ್ಗಕ್ಕೆ ಮಾತ್ರ ಸಿಮಿತವಾದ ಪ್ರತಿಷ್ಠೆಯ ಕಿರುಪ್ರಪಂಚ. ಬಹು ಸಂಖ್ಯೆಯ ಶ್ರೀಸಾಮಾನ್ಯರನ್ನೊಳಗೊಂಡ ಬೃಹತ್ ಪ್ರಪಂಚ. ಶ್ರೀಮಂತರಿಂದ ಬಡವರಿಗೆ ಭೂಮಾಲೀಕರಿಂದ ಜೀತದವರಿಗೆ, ಬ್ರಾಹ್ಮಣರಿಂದ ಶೂದ್ರರಿಗೆ ಆಗುತ್ತಿರುವ ಅನ್ಯಾಯ ಕಿರುಕುಳ ಕೋಟಲೆಗಳ ವಾಸ್ತವ ಚಿತ್ರ ಕುವೆಂಪು ಸಾಹಿತ್ಯದಲ್ಲಿ ಯಥೇಚ್ಚವಾಗಿ ದೊರೆಯುತ್ತದೆ. ಜನತೆಗೆ ದೇವತೆ ಹೆಸರಿನಲ್ಲಿ, ಪವಿತ್ರ ಗ್ರಂಥಗಳ ಹೆಸರಿನಲ್ಲಿ ತಂತ್ರ ಮಂತ್ರ ಪೂಜೆ ಪುನಸ್ಕಾರಾದಿ ಸಂಪ್ರದಾಯಗಳ ಹೆಸರಿನಲ್ಲಿ, ಮತಧರ್ಮದ ಹೆಸರಿನಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಶೋಷಣೆಯ ಯಥವತ್ತಾದ ಬಣ್ಣನೆ ಕುವೆಂಪು ಸಾಹಿತ್ಯದಲ್ಲಿ ಹೇರಳವಾಗಿದೆ. ಅಕೃತಕವೂ ನಿರಾಡಂಬರವೂ, ಅನಾಮಧೇಯವೂ ಆದ ರಿಕ್ತ ಸ್ಥಿತಿಯ ಸಾಮಾನ್ಯ ಜೀವನದ ಸಮಗ್ರ ಚಿತ್ರ ರಾಶಿ ರಾಶಿಯಾಗಿ ದೊರೆಯುತ್ತದೆ. ಅಜ್ಞಾನ ದಾರಿದ್ರ್ಯ ಮೌಢ್ಯಗಳಿಂದ ಕುಸಿದು ಕುಗ್ಗಿ ಕಂಗಾಲಾಗಿರುವ ರೈತರ, ಜೀತಗಾರರ, ಹಾಗೂ ಪಂಚಮರ ದಾರುಣ ಜೀವನದ ಹೃದಯ ವಿದ್ರಾವಕ ಚಿತ್ರವಂತೂ ಕಣ್ಣಿಗೆ ಕಟ್ಟಿದಂತೆ ವರ್ಣಿತವಾಗಿದೆ. ಅಂತೆಯೇ ಪುರುಷನ ಹಿಂಸೆ ಕ್ರೌರ್ಯ ಲಂಪಟತನಗಳಿಗೊಳಗಾದ ಅಬಲೆಯರ ಸಂಕಟಮಯ ಭೀಕರ ಪರಿಸ್ಥಿತಿಯ ವರ್ಣನೆಯೂ ಇಲ್ಲಿ

ಮಡುಗೊಂಡಿದೆ. ಬ್ರಾಹ್ಮಣರು, ಗೌಡರು, ಕ್ರಿಶ್ಚಿಯನ್ನರು. ಮುಸಲ್ಮಾನರು, ಪಂಚಮರು, ಹಳೇಪೈಕದವರು, ಸೇರೆಗಾರರು, ಬೇಲರು, ಕಮ್ಮಾರರು ಆಬಾಲವೃದ್ಧರು ಸಮಸ್ತ ಗ್ರಾಮ ಜೀವನವನ್ನು ಪ್ರತಿನಿಧಿಸುವ ಎಲ್ಲ ವೃತ್ತಿಗಳ ಜನರು ಕುವೆಂಪು ಸಾಹಿತ್ಯದಲ್ಲಿ ಸುಳಿಯುತ್ತಾರೆ.[2] ಎಂದು ದೇ. ಜವರೇಗೌರು ಅಭಿಪ್ರಾಯಿಸಿದ್ದಾರೆ.

ಕಾವ್ಯ ಜೀವನದ ಪ್ರಾರಂಭದಲ್ಲೆ ಕುವೆಂಪು ಅವರ ಸಾಮಾಜಿಕ ಪ್ರಜ್ಞೆ ಸಾಮಾನ್ಯ ಜೀವನದ ಸರ್ವಾಂಗಗಳನ್ನು ಬಾಚಿ ತಬ್ಬಿಕೊಳ್ಳತ್ತದೆ. ಸಾಮಾನ್ಯ ಜನತೆಯನ್ನು ಬಲ್ಲವರ ಮತ್ತು ಬಲಿಷ್ಠರ ಬೌದ್ಧಿಕ ಹಾಗೂ ಆರ್ಥಿಕ ದಾಸ್ಯದಿಂದ ಅವರ ಪಾಶವಿಕ ಶೋಷಣೆಯಿಂದ ಪಾರುಮಾಡುವ ಸಲ್ಲುವಾಗಿ ಕುವೆಂಪು ಅವರ ಲೇಖನ, ಭಾಷಣಗಳ ಮೂಲಕ ಜನತೆಯನ್ನೆಚ್ಚರಿಸಲು, ಅವರಲ್ಲಿ ನಿರಂಕುಶ ಮತಿತ್ವವನ್ನೂ, ವೈಚಾರಿಕ ಬುದ್ಧಿಯನ್ನೂ, ವೈಜ್ಞಾನಿಕ ಮನೋಧರ್ಮವನ್ನೂ, ರೂಢಿಸಲು ಪ್ರಯತ್ನಿಸುತ್ತಾರೆ. ಬಹುಕಾಲದ ಧೀರ್ಘ ಮಂಥನದಿಂದ ಪ್ರಶಾಂತ ಧ್ಯಾನದಿಂದ ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ ನಮ್ಮ ದೇಶ ನಮ್ಮನಾಡು, ಭಾಷೆ, ಸಂಸ್ಕೃತಿ, ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಸಮಾಜದಲ್ಲಿ ರೂಢಮೂಲವಾಗಿದ್ದ ಹಾನಿಕಾರಕ ಮೌಢ್ಯ ಸಂಪ್ರದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ. ಮತದ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಕಟ್ಟುಕಟ್ಟಲೆಗಳನ್ನು ಹಂಗಿಸುತ್ತಾರೆ. ನೂರಾರು ದೇವರುಗಳನ್ನು ಗುಡಿಯಿಂದಾಚೆ ದಬ್ಬಿ ಒಬ್ಬ ಸರ್ವೇಶ್ವರನನ್ನು ಪೂಜಿಸುವಂತೆ, ಆಧ್ಯಾತ್ಮ ಸಾಧನೆಯಲ್ಲಿ ತೊಡುಗುವಂತೆ ಜನರಿಗೆ ಕರೆ ಕೊಡುತ್ತಾರೆ. ಬಾಲ್ಯವಿವಾಹ, ಮಧ್ಯಪಾನ, ದುಂದುವೆಚ್ಚ ಮೊದಲಾದ ಅನಿಷ್ಟಗಳನ್ನು ತ್ಯಜಿಸಿ, ಶ್ರೇಯಸ್ಸಾಧಕವಾದ ಸುಜ್ಞಾನವನ್ನು ಸಂಪಾದಿಸುವಂತೆ ಮಲೆನಾಡಿನ ಯುವಕ ಸಂಘದ ಮೂಲಕ ನಾಡನ್ನು ಎಚ್ಚರಿಸುತ್ತಾರೆ.

ಅಂದಿನ ಸಮಕಾಲೀನತೆಯ ಸಂದರ್ಭದ ಹಿನ್ನೆಲೆಯಲ್ಲಿ ಕುವೆಂಪು ಅವರು ಮುಚ್ಚುಮರೆಯಿಲ್ಲದೆ ನಿರ್ದಾಕ್ಷಿಣ್ಯವಾಗಿ ರೈತರ ಕಲ್ಯಾಣದ ಬಗ್ಗೆ ಕಾತರತೆಯನ್ನು ಅವರ ಅನಾಥ ದುಸ್ಥಿತಿಯ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತಾರೆ. ''08-12-1974 ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದ ಸಮಯದಲ್ಲಿ ತಾವು ಮಾಡಿದ ಭಾಷಣದಲ್ಲಿ ರೈತರ ಅಸಹಾಯಕ ಪರಿಸ್ಥಿತಿಯ ಕಡೆಗೆ ಅಲ್ಲಿದ್ದವರೆಲ್ಲರ ಗಮನ ಸೆಳೆಯುತ್ತಾರೆ. ಪ್ರಾಯಶಃ ಪ್ರಪಂಚದ ವಿಶ್ವವಿದ್ಯಾನಿಲಯಗಳ ಇತಿಹಾಸದಲ್ಲಿಯೇ ರೈತನ ಪರವಾಗಿ ಮಾಡಿದ ಘಟಿಕೋತ್ಸವ ಭಾಷಣ ಮತ್ತೊಂದಿಲ್ಲವೆಂದೇ ಹೇಳಬಹುದು''. ಹೀಗೆ ಅನೇಕ ರೀತಿಯ ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ಬಡ ರೈತರ ತೆರಿಗೆಯ ಧನವನ್ನು ವ್ಯಯ ಮಾಡಿದೆವು. ದೊಡ್ಡ ದೊಡ್ಡ ಪಟ್ಟಣಗಳನ್ನು ಭೋಗ ಜೀವನ ನಡೆಸುವ ಶ್ರೀಮಂತರ ಸುಖಕ್ಕಾಗಿ, ಹಳ್ಳಿಗಳನ್ನೂ ರೈತ ವರ್ಗವನ್ನು ಮರೆತೇ

ಬಿಟ್ಟವು ಎಂಬ ದೂರಿನಿಂದ ಪಾರಾಗಲು ಮತ್ತು ಅವರು ಸಂಪೂರ್ಣವಾಗಿ ನಿರ್ಜೀವವಾದರೆ ನಮಗಾಗಿ ದುಡಿಯುವವರು ಯಾರೂ ಇಲ್ಲದಂತೆ ಆಗಬಾರದು ಎಂಬುದಕ್ಕಾಗಿ ಜೀವವಾಡುವಷ್ಟರ ಮಟ್ಟಿಗೆ ಅವರ ಬಿಕ್ಷಾ ಪಾತ್ರೆಗೂ ಕಾಸು ಎಸೆದದ್ದುಂಟು. ಬಡ ರೈತನನ್ನು ಹಿಂಡಿ ತೆಗೆದ ತೆರಿಗೆ ದವಸಧಾನ್ಯಗಳು ನಗರಗಳ ಶ್ರೀಮಂತ ವರ್ಗಕ್ಕೂ ಅಧಿಕಾರ ವರ್ಗದ ಥಾಳಾಧೂಳಿಗೂ ವ್ಯಯವಾಯಿತು. ಈ ದೃಷ್ಟಿಯಿಂದಲೇ ಅವರು ಏಷಿಯಾ ಕ್ರೀಡೆಗಳಿಗೆ, ಅಲಿಪ್ತ ಸಮ್ಮೇಳನಕ್ಕೆ, ವಿಶ್ವ ಕನ್ನಡ ಮೇಳಕ್ಕೆ ಮಾಡುವ ದುಂದುಗಾರಿಕೆಯನ್ನು ನಿರ್ಭೀತರಾಗಿ ಖಂಡ ತುಂಡವಾಗಿ ಖಂಡಿಸುತ್ತಾರೆ.

ಕುವೆಂಪು ತನ್ನ ವ್ಯಕ್ತಿ ವಿಶಿಷ್ಯವಾದ ಧ್ವನಿಯಿಂದ, ಉಜ್ವಲವಾದ ತೇಜಸ್ವಿನಿಂದ ವೈವಿಧ್ಯ ಹಾಗೂ ವಿಸ್ತಾರಗಳಿಂದ ಮತ್ತು ಲೋಕಾಕರ್ಷಕವಾದ ಲಕ್ಷಣಗಳಿಂದ ಕುವೆಂಪು ಅವರ ಕವಿತೆ ಇಪ್ಪತ್ತನೆಯ ಶತಮಾನದ ಕನ್ನಡ ಕಾವ್ಯದ ಒಂದು ಮಹತ್ವದ ಭಾಗವಾಗಿದೆ. ಮಲೆನಾಡಿನ ಅಪ್ರತಿಷ್ಠಿತ ಸಾಮಾಜಿಕ ನೆಲೆಯಿಂದ ಹುಟ್ಟಿಬಂದ ಮೊದಲ ಪ್ರತಿನಿಧಿಯಂತೆ ಕಾಣುತ್ತಾರೆ ಕುವೆಂಪು.

ಕುವೆಂಪು ನಮ್ಮ ಕಾಲದ ಮಹತ್ವದ ಕವಿ ಮಾತ್ರವಲ್ಲ, ಶ್ರೇಷ್ಠ ವಿಚಾರವಂತರೂ ಹೌದು. ಆದರೆ ಒಂದಡೆ ಕನ್ನಡ ಸಾಹಿತ್ಯ ವಿಮರ್ಶೆ ಕೇವಲ ತಮ್ಮ ಕಾವ್ಯದ ಭಾವ ಮುಖವಷ್ಟನ್ನೇ ಗಮನಿಸುವುದರಲ್ಲಿ ತೋರಿದ ಉತ್ಸಾಹವನ್ನು ತಮ್ಮ ಸಾಹಿತ್ಯದ ಹಿನ್ನೆಲೆಗಿರುವ ವೈಚಾರಿಕ ಮುಖವನ್ನು ಅರ್ಥಮಾಡಿಕೊಳ್ಳುವ ಕಡೆ ಅಷ್ಟಾಗಿ ತೋರಿಲ್ಲ ಎಂದು ಅರ್ಥಕೊರಗಿನ ಅರ್ಧ ಆಕ್ಷೇಪಣೆಯ ದನಿಯಲ್ಲಿ ಮಾತನಾಡಿದ್ದಾರೆ. '' ನನ್ನ ಕವಿ ಪ್ರತಿಭೆ ತನ್ನ ರಸಧರ್ಮಕ್ಕೆ ಒಂದಿನಿತೂ ಭಂಗ ಬರದಂತೆ ವೈಚಾರಿಕ ಬುದ್ದಿಯನ್ನು ವೈಜ್ಞಾನಿಕ ದೃಷ್ಟಿಯನ್ನೂ ಸಮಪ್ರಮಾಣದಲ್ಲಿ ಅಳವಡಿಸಿ ಕೊಂಡಿರುವುದನ್ನು ಸಹೃದಯರು ಗುರುತಿಸಲಾಗದಿದ್ದರೆ ನನ್ನನ್ನು ಅಂಶಿಕವಾಗಿ ಮಾತ್ರ ಪರಿಶೀಲಿಸಿದಂತಾಗುತ್ತದೆ. ನನ್ನ ಸಂಪೂರ್ಣತ್ವಕ್ಕೆ ಚ್ಯುತಿ ಬರುತ್ತದೆ''.[3] (ನೆನಪಿನ ದೋಣಿಯಲ್ಲಿ ಪುಟ 68, 1980) ಕುವೆಂಪು ಅವರ ಸಾಹಿತ್ಯವನ್ನು ಅವರ ನಿರ್ದೇಶನದ ದೃಷ್ಟಿಯಿಂದ ನೋಡುವುದು ಅಗತ್ಯವಾಗಿದೆ. ಈ ನಿಲುವಿನಿಂದ ಚರ್ಚಿಸಿದ ಪ್ರಯತ್ನ ಸ್ವಲ್ಪ ಮಟ್ಟಿಗೆ ನಡೆದಿದೆ ಎಂಬುದನ್ನು ಇಲ್ಲಿ ನೆನೆಯಬಹುದು. ಈ ಹಿನ್ನೆಲೆಯಿಂದ ಹೇಳುವುದಾದರೆ ಕುವೆಂಪು ಅವರ ಕವಿತೆಗಳು ಕೇವಲ ಸೌಂದರ್ಯ ನಿಷ್ಠೆಯ ಹಾಗೂ ಅವುಗಳ ರಚನಾ ಕೌಶಲದ ಬೆರಗಿನಲ್ಲಿ ಓದುಗರನ್ನು ನಿಲ್ಲಿಸುವ ಕವಿತೆಗಳಲ್ಲಿ. ಅವುಗಳ ಹಿಂದೆ ಗಟ್ಟಿಮುಟ್ಟಾದ ವೈಚಾರಿಕತೆಯೊಂದು ಕ್ರಿಯಾಶೀಲವಾಗಿದೆ. ಅದನ್ನು ಸ್ಥೂಲವಾಗಿ ತಾತ್ವಿಕ ವೈಚಾರಿಕತೆ, ಸಾಮಾಜಿಕ ವೈಚಾರಿಕತೆ ಎಂದು ಕರೆಯಬಹುದು. ಆದರೆ ಈ ಎರಡರ ನಡುವಣ ವ್ಯತ್ಯಾಸವೇನಿದ್ದರೂ

ವ್ಯಾಸಂಗಿಕವಾದದ್ದು. ಯಾಕೆಂದರೆ ಈ ಎರಡರ ಉದ್ದೇಶವೂ ಮನುಷ್ಯನ 'ಏಕತೆ' ಯ ಪರವಾಗಿ ತುಡಿಯುವ ಕಾಳಜಿಗಳಿಂದ ಕೂಡಿದ್ದಾಗಿದೆ. ಕುವೆಂಪು ಅವರ ಕವಿತೆಗಳಲ್ಲಿ ಸೌಂದರ್ಯ ನಿಷ್ಠೆ, ಆಧ್ಯಾತ್ಮಿಕ ನಿಲುವು ಮತ್ತು ವೈಚಾರಿಕತೆಗಳು ಒಂದರಿಂದ ಮತ್ತೊಂದನ್ನು ಬೇರ್ಪಡಿಸಲಾಗದಂತೆ ಹೆಣೆದು ಕೊಂಡಿದೆ.

ಕುವೆಂಪು ಅವರ ವೈಚಾರಿಕತೆಗೆ ಇರುವ ಇನ್ನೊಂದು ಮುಖ್ಯ ಲಕ್ಷಣ ವೈಜ್ಞಾನಿಕ ದೃಷ್ಟಿ. ಕುವೆಂಪು ಅವರಂತೆ ಆಧುನಿಕ ವಿಜ್ಞಾನದ ತಿಳುವಳಿಕೆಯನ್ನು ತಮ್ಮ ಕಾವ್ಯದ ವಸ್ತುವನ್ನಾಗಿ ಮಾಡಿಕೊಂಡವರು ತೀರಾ ವಿರಳ. ಖಗೋಳ ವಿಜ್ಞಾನ, ಯಂತ್ರ ವಿಜ್ಞಾನ, ಜೀವ ವಿಜ್ಞಾನ, ಮನೋವಿಜ್ಞಾನ, ಯೋಗ ವಿಜ್ಞಾನ ಇತ್ಯಾದಿಗಳಿಂದ ಬಂದ ತಿಳಿವಳಿಕೆ ಅವರ ಅನೇಕ ಕವನಗಳ ಮೂಲದ್ರವ್ಯವಾಗಿದೆ. ಅವರ 'ಕೂಸಿನ ಕನಸು' ಈ ಪರಿಣತಿಯ ಅತ್ಯುತ್ತಮ ಅಭಿವ್ಯಕ್ತಿಯಾಗಿದೆ. ಈ ದೃಷ್ಟಿಯಿಂದ ಅವರ ಮಹಾಕಾವ್ಯವಾದ 'ಶ್ರೀರಾಮಾಯಣದರ್ಶನಂ' ಇಪ್ಪತ್ತನೆ ಶತಮಾನದ ವೈಜ್ಞಾನಿಕ ಹಾಗೂ ವೈಚಾರಿಕ ಯುಗದ ಪ್ರತಿನಿಧಿಯಾಗಿದೆ ಆಧುನಿಕ ಯುಗದ ಎಲ್ಲ ಸಾಮಾಜಿಕ ಅನಿಷ್ಟಗಳ ಚಿಕಿತ್ಸೆಗೆ ಅಗತ್ಯವಾದ ವೈಜ್ಞಾನಿಕ ಮನೋಧರ್ಮವೊಂದನ್ನು ಅತ್ಯಂತ ಏರು ದನಿಯಲ್ಲಿ ಸಾರಿ ಹೇಳಿದವರು ಕುವೆಂಪು. ಗಾಂಧೀಜಿಯವರು ಯಂತ್ರ ವಿಜ್ಞಾನವನ್ನು ವಿರೋಧಿಸುತ್ತಿದ್ದ ಕಾಲದಲ್ಲಿ ಕುವೆಂಪು ಮನುಷ್ಯನ ಲೌಕಿಕ ಪ್ರಗತಿಗೆ ಅಗತ್ಯವಾದ ಯಂತ್ರ ವಿಜ್ಞಾನವನ್ನು ಸ್ವಾಗತಿಸುತ್ತಾರೆ. ಅವರ ದೃಷ್ಟಿಗೆಯಂತ್ರ ವಿಜ್ಞಾನಿಯಾದ ಎಂಜನಿಯರ್ 'ಯಂತ್ರರ್ಷಿ' ಯಾಗುತ್ತಾನೆ ''ಯಂತ್ರರ್ಷಿ ಮಾನವರೆ ಮಂತರ್ಷಿಗಳು ನಮಗೆ' ಎನ್ನುವುದು ಕುವೆಂಪು ಸಮಕಾಲಿನತೆಗೆ ಸ್ಪಂದಿಸಿದ ಪರಿಯನ್ನು ಸೂಚಿಸುತ್ತದೆ.

ರಾಷ್ಟ್ರೀಯತೆಯ ಆಂದೋಲನದ ಸಮುಯದಲ್ಲಿ, ಸಾಂಪ್ರದಾಯಿಕ ಮೌಲ್ಯಗಳು ಪುನುರುತ್ಥಾನಗೊಂಡು, ನಿಜವಾದ ಸಾಮಾಜಿಕ ವಾಸ್ತವಗಳು ನಿಚ್ಚಳವಾಗಿ ಕಾಣದೆ ಹೋಗುವಂಥ ಪರಿಸ್ಥಿತಿಯಲ್ಲಿ ಕುವೆಂಪು ಅವರ ಮನಸ್ಸು ಉಳಿದೆಲ್ಲರಿಗಿಂತ ಹೆಚ್ಚು ನಿಖರವಾಗಿ ಸಮಕಾಲಿನ ವಾಸ್ತವಗಳನ್ನು ಗುರುತಿಸಿ ವೈಚಾರಿಕ ಚಿಕಿತ್ಸೆಗೆ ಗುರಿ ಪಡಿಸಲು ಸಾಧ್ಯವಾದದ್ದು ಅವರಿಗೆ ಇದ್ದ ವೈಜ್ಞಾನಿಕ ಪ್ರಗತಿಪರ ಮನೋಧರ್ಮದಿಂದಲೇ. ಈ ಮನೋಧರ್ಮ ಕೇವಲ ಭಾರತೀಯವಾದದ್ದರ ಪರವಾಗಿ ಮಾತ್ರವಲ್ಲ ಜಾಗತಿಕವಾದ ಸಮಾಜವಾದಿ ಚಿಂತನೆಗಳಿಗೂ ಸ್ಪಂದಿಸಿದ್ದು ಅದರ ವಿಶೇಷತೆಯಾಗಿದೆ. ಲೆನಿನ್, ಟಾಲ್‌ಸ್ಟಾಯ್ ಕುರಿತು ಅವರು ಬರೆದ ಕವಿತೆಗಳು 'ಕಲ್ಕಿ, ಕೋಗಿಲೆ ಮತ್ತು ಸೋಟಿಯಟ್ ರಷ್ಯಾ' ದಂಥ ಕವಿತೆಗಳೂ ಮತ್ತು ಇದೇ ಬಗೆಯ ಸಮಾಜವಾದೀ ನಿಲುವುಗಳನ್ನು ಒಂದು ಬಗೆಯ ಪ್ರವಾದಿಯ ಧಾಟಿಯಲ್ಲಿ ಅಭಿವ್ಯಕ್ತಿಸುವ ಕವನಗಳೂ ಈ ಮಾತಿಗೆ ನಿದರ್ಶನವಾಗಿವೆ. ಸಮಕಾಲೀನ ಜಗತ್ತಿನಲ್ಲಿ ಸಂಭವಿಸುತ್ತಿರುವ

ಯುಗಪರಿವರ್ತನಕಾರಿಯಾದ ಅನೇಕ ಬದಲಾವಣೆಗಳ ಹಿನ್ನೆಲೆಯಲ್ಲಿ ಭಾರತದ ತರುಣರು ತಮ್ಮ ಹಳೆಯ ಜಡತೆಯಿಂದ ಮೇಲೆದ್ದು ನವ ಕ್ರಾಂತಿಗೆ, ಶಾಂತಿಗೆ ಕಣ್ ತೆರೆಯ ಬೇಕೆಂಬ ಸಂದೇಶವನ್ನು ಘೋಷಿಸುವ ಅವರ ಎಷ್ಟೋ ಕವನಗಳು ಈ ಕವಿಯ ಸಾಂಸ್ಕೃತಿಕ ಜವಾಬ್ದಾರಿಯನ್ನು, ನವ ಮಾನವತಾವಾದದ ಕಾಳಜಿಗಳನ್ನು ಪ್ರತಿನಿಧಿಸುತ್ತವೆ. ಅಷ್ಟೆ ಅಲ್ಲ. ಅವರ ನಲವತ್ತರ ದಶಕದ ಅನೇಕ ಸಮಾಜವಾದೀ ಕವಿತೆಗಳಲ್ಲಿ ಕಾಣಸಿಕೊಳ್ಳುವ ಕ್ರಾಂತಿಕಾರೀ ವೈಚಾರಿಕತೆಯಲ್ಲಿ, ಎಪ್ಪತ್ತರ ದಶಕದ ಕನ್ನಡದ ಸಂದರ್ಭದಲ್ಲಿ ಸ್ಫೋಟಗೊಂಡ ದಲಿತ -ಬಂಡಾಯ ಸಾಹಿತ್ಯ ಚಳುವಳಿಯ ಮೂಲಪ್ರೇರಣೆಗಳಿವೆ ಎಂದರೆ ಅತಿಶಯೋಕ್ತಿಯಲ್ಲ.

ಕುವೆಂಪು ಅವರ ಸಾಹಿತ್ಯ ಕ್ರಿಯೆಯನ್ನು ಗಮನಿಸುವಾಗ ದಟ್ಟವಾದ ಅನುಭವಗಳನ್ನು ಸಮಕಾಲೀನ ವಾಗಿಸುವುದರಲ್ಲಿ ಅದು ತೀವ್ರವಾಗಿರುವುದನ್ನು ಮರೆಯುವಂತಿಲ್ಲ ತೀರ ಸಮಕಾಲೀನವಾಗಿ ಸ್ಪಂದಿಸುವ ಅವರ ಹೆಚ್ಚಿನ ಕೃತಿಗಳು ಸಾಂಪ್ರದಾಯಿಕ ಅನಿಷ್ಟಗಳ ವಿರುದ್ಧ ಸೆಣೆಸುವುದರ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ಕಲ್ಪಿಸುತ್ತವೆ. ಅವರು ನವೋದಯದ ಆರಂಭ ಕಾಲದಲ್ಲಿ ಕೇವಲ ಪ್ರಕೃತಿ ಕವಿಯಾಗಿ ಉಳಿಯದೆ ಬಂಡೇಳುವ ಪ್ರವೃತ್ತಿಯಿಂದಾಗಿ ಸಮಕಾಲೀನ ಸಮಸ್ಯೆಯ ಅನ್ವೇಷಕರಾಗಿ ಸಾಹಿತ್ಯದಲ್ಲಿ 'ರಿಸ್ಕ್' ತೆಗೆದುಕೊಂಡು ಬರೆಯುವುದರಿಂದ, ಕೇವಲ ಕಾವ್ಯತಾದಾತ್ಮ್ಯಕ್ಕೆ ಮಾತ್ರ ಸೀಮಿತವಾಗುತ್ತಾರೆಂದು ಹೇಳುವಂತಿಲ್ಲ.

ಕುವೆಂಪು ಕೃತಿಗಳನ್ನು ಒಟ್ಟಾಗಿ ಗಮನಿಸಿದಾಗ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಅರ್ಥರಹಿತ ಸಾಮಾಜಿಕ ಪದ್ಧತಿಯ ವಿರುದ್ಧ ಬಂಡಾಯಗಾರರಾಗಿ ಸಮಕಾಲೀನರಾಗಿರುತ್ತಿದ್ದಂತೆ, ವೈಜ್ಞಾನಿಕ ಅಂಶಗಳನ್ನು ಸೂರೆಗೊಂಡು ಕಾವ್ಯದ ಪರಿಕರಗಳನ್ನಾಗಿಸಿಕೊಳ್ಳುವಿಕೆಯಿಂದಾಗಿ ಸಾಮಾಜಿಕ ಅರಿವಿನೊಂದಿಗೆ ಬೆಸೆದು ಕೊಳ್ಳುತ್ತಾರೆ. ಜೊತೆಗೆ ಸಾಕಷ್ಟು ವ್ಯಾಪಕವಾದ ಉಪನಿಷತ್ತಿನ ಸಾರವನ್ನು ಅರಗಿಸಿಕೊಂಡು ಹೊಸ ದರ್ಶನವನ್ನು ಕಾವ್ಯ ಕ್ರಿಯೆಯ ಮೂಲಕ ಅನ್ವೇಷಿಸುವ ನಿಖರ ದೃಷ್ಟಿ ಅವರ ಸಾಹಿತ್ಯದುದ್ದಕ್ಕೂ ಎದ್ದು ಕಾಣುವಂಥದ್ದು.

ಸಾಮಾಜಿಕ ಮತ್ತು ವೈಜ್ಞಾನಿಕವಾಗಿ ನಿರ್ದಿಷ್ಟ ಭಾವನೆಗಳನ್ನು ಹೊಂದಿದ ಇವರು ಬದಲಾಗುತ್ತಿರುವ ಸಾಮಾಜಿಕ ಪದ್ಧತಿಯ ಹಿನ್ನಲೆಯಲ್ಲಿ ಹೆಪ್ಪುಗಟ್ಟಿದ ಕಂದಾಚಾರಗಳನ್ನು ಸರಿದೂಗಿಸುವಲ್ಲಿರುವ ನಿಷ್ಠೆ ಬದುಕಿಗೆ ನಿಕಟವಾದ ವೈಜ್ಞಾನಿಕ ಬೆಳವಣಿಗೆಗಳನ್ನು ಕಾವ್ಯ ಕ್ರಿಯಾ ಶಕ್ತಿಯಾಗುವಂತೆ

ಅಳವಡಿಸಿಕೊಳ್ಳುವುದರಿಂದಾಗಿ ಸ್ವೀಕೃತ ಧೋರಣೆಯ ಅನ್ವೇಷಣೆ ವ್ಯಕ್ತಿಗಳ ಬದುಕಿನ ಪ್ರಬಲ ಅನ್ವೇಷಣೆಯಾಗುವಂತೆ ಎಚ್ಚರ ವಹಿಸುವುದರಿಂದ ನಿಜವಾದ ಅರ್ಥ ಕಟ್ಟಿಕೊಂಡು ಸಾಮಾಜಿಕ ಅರಿವಿನಲ್ಲಿ ಒಂದಾಗುತ್ತಾರೆ. ತಾತ್ವಿಕವಾಗಿ ಭಾಷೆಯಲ್ಲಿ ಸಾಕಾರಗೊಳಿಸುವ ಅನುಭವದಿಂದಾಗಿ ಮಿಕ್ಕ ಕವಿಗಳಿಂದ ಭಿನ್ನರಾಗಿ ಉಳಿಯುತ್ತಾರೆ ಎಂಬುದಕ್ಕೂ ಇದು ಕಾರಣವಾಗುತ್ತದೆ.

ಸ್ವಾತಂತ್ರ್ಯದ ಆಂದೋಲನದಲ್ಲಿ ಜೊತೆ ಜೊತೆಗೆ ಮತೀಯ ಆಂದೋಲನವು ನಡೆಯುತ್ತಿದ್ದ ಕಾಲದಲ್ಲಿ ಪಟ್ಟಭದ್ರ ಸಾಮಾಜಿಕ ಮಾಲಿನ್ಯವನ್ನು ಪತ್ತೆ ಮಾಡುವುದರಲ್ಲಿ ಸಾಹಿತ್ಯ ಮಾಧ್ಯಮ ಅತ್ಯಂತ ಸಮರ್ಥವಾಗಿ ಕೆಲಸ ನಿರ್ವಹಿಸಿರುವುದನ್ನು ಕಾಣಬಹುದು. ಜೊತೆಗೆ ಉಪನಿಷತ್ತುಗಳು ಸಾಮಾನ್ಯನ ಜೀವನದ ಕೊಂಡಿಯನ್ನು ಕಳಚಿಕೊಂಡು ಬದುಕಿನಿಂದ ಹೊರಗುಳಿಯುವ ಸ್ಥಿತಿಯಲ್ಲಿದ್ದಾಗ ಕೇವಲ ತಾತ್ವಿಕ ಸಿದ್ಧಾಂತಗಳಾಗಿದ್ದಾಗ ಪರಮಹಂಸ, ವಿವೇಕಾನಂದ, ಅರವಿಂದ ಮುಂತಾದವರು ಬದುಕಿಗೆ ನೇರವಾಗಿ ಸಂಬಂಧಿಸುವಂತೆ ಹೆಣೆಯುತ್ತಿದ್ದ ಹರೆಯದಲ್ಲೆ ವ್ಯಾಪಕವಾಗಿ ಸಾಹಿತ್ಯದಲ್ಲೂ ತಾದಾತ್ಮ್ಯಗೊಳ್ಳುವ ಕಾಲದಲ್ಲಿ ಕುವೆಂಪು ಅವರು ಕನ್ನಡದಲ್ಲಿ ದರ್ಶನವನ್ನು ಕಾವ್ಯದ ಮೈಯಾಗಿಸಿಕೊಳ್ಳುವುದನ್ನು ತೀವ್ರವಾಗಿ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ.

ಸಾಹಿತ್ಯವನ್ನು ಬದುಕಿನ ಸಕ್ರಿಯ ಭಾಗವಾಗಿ ಸ್ವೀಕರಿಸುವ ಇವರು ಸಾಹಿತ್ಯದ ಮೂಲಕ ಬದುಕಿಗೊಂದು ನಿರ್ಧಿಷ್ಟ ರೂಪವನ್ನು ಕೊಡಲು ಪ್ರಯತ್ನಿಸಿರುವುದನ್ನು ಕಾಣಬಹುದು. ಅಸ್ಪೃಶ್ಯತೆ, ಮಡಿವಂತಿಕೆ, ಪುರೋಹಿತ ಶಾಹಿಯ ವಿರುದ್ಧ ಬಂಡೇಳುವ ಇವರು ಅಂದಿನ ಸಾಮಾಜಿಕ ಸಮಸ್ಯೆಗೆ ನೇರವಾಗಿ ಸಾಹಿತ್ಯದಲ್ಲಿ ತಮ್ಮನ್ನು ಒಡ್ಡಿಕೊಳ್ಳುತ್ತಾರೆ.

ಅಡಿ ಟಿಪ್ಪಣಿ

2

1. ಸಮಕಾಲೀನತೆ - ಸಮಗ್ರ ಗದ್ಯ - ಜಿ.ಎಸ್. ಶಿವರುದ್ರಪ್ಪ. ಪುಟ ಸಂಖ್ಯೆ - 25
2. ಕುವೆಂಪು ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ - ದೇ. ಜವರೇಗೌಡ, ಪುಟ ಸಂಖ್ಯೆ 27
3. ನೆನಪಿನ ದೋಣಿ - ಪುಟ ಸಂಖ್ಯೆ 68

ಅಧ್ಯಾಯ -4

ಅಸಮಾನತೆ - ಶೋಷಣೆ ವಿರುದ್ಧ ಬಂಡಾಯ

ಕುವೆಂಪು ಕನ್ನಡ ಸಾಹಿತ್ಯದ ಅತಿ ದೊಡ್ಡ ಸಾಹಿತಿಯಾಗಿರುವುದು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃತಿಗಳನ್ನು ರಚಿಸಿದ್ದಾರೆ ಎಂಬ ಸಂಖ್ಯಾ ಬಾಹುಳ್ಯದ ಕಾರಣಕ್ಕಾಗಿ ಮಾತ್ರಅಲ್ಲ. ಅವರ ಎಲ್ಲಾ ಬರಹಗಳ ಒಳಹರಿವು ಅಥವಾ ಅಂತರ್ಜಲಜೀವ ಪರತೆ ಜನಪರತೆಯಾಗಿರುವುದರಿಂದ ಇವರ ಅಭಿವ್ಯಕ್ತಿಯ ನೆಲೆ ಪ್ರಗತಿದಾರನಿಗೆ ಮಾನವೀಯ ನೆಲೆಯಾಗಿರುವುದು. ಜೊತೆಗೆ ಇವರ ಬರಹಗಳ ಸತ್ವ ವೈಚಾರಿಕತೆ ಮತ್ತು ಆಧ್ಯಾತ್ಮಿಕತೆ ವಿದ್ಯುದಾಲಿಂಗನದಿಂದಾಗಿ ಸದರಿ ಇವುಗಳನ್ನು ತಮ್ಮ ಕಾವ್ಯ ನೆಲೆಯಲ್ಲಿ ಜನಪರತ್ವದೆಡೆಗೆ ಸಾಗಿಸುವ ಪ್ರಯತ್ನಶೀಲತೆಯಿಂದ ಕವಿ ಪರಂಪರಾಗತ ಸತ್ವವನ್ನು ವಾಸ್ತವಿಕತೆಯ ನೆಲೆಗೆ ಇಳಿಸುತ್ತಾರೆ. ಈ ದೇಶದ ಮತೀಯ ಜಾತೀಯ ಕೋಮುಭಾವನೆಗಳನ್ನು ತಿರಸ್ಕರಿಸಿ ಅವುಗಳನ್ನು ಮೀರುವ ಪರ್ಯಾಯವಾಗಿ ವಿಶ್ವಮಾನವ ಸಂದೇಶಕೊಟ್ಟು ರಾಷ್ಟ್ರಕವಿಯಾಗಿ ಅತೀ ಪ್ರಸುತ್ತರಾಗಿದ್ದಾರೆ. ಕುವೆಂಪುರವರ ವಿಚಾರ ಪ್ರಧಾನವಾದ ಕವನಗಳಲ್ಲಿ ''ಹಾಳೂರು'' ಎಂಬ ದೀರ್ಘ ಕವನವನ್ನು ಅದರ ಸಾರ್ವಕಾಲೀಕ ಪ್ರಸ್ತುತ ಗುಣಕ್ಕಾಗಿಯೇ ಇಲ್ಲಿ ವಿಶ್ಲೇಷಣೆಗಾಗಿ ಎತ್ತಿಕೊಂಡಿದ್ದೇವೆ.

ಪ್ರತೀ ಕಾಲಘಟ್ಟದಲ್ಲೂ ಒಂದು ದೇಶದ ಜನತೆ ಆಧುನಿಕ ನಗರದ ಯಾಂತ್ರಿಕ ಜೀವನಕ್ಕೆ ಆಕರ್ಷಿತರಾಗುತ್ತಾ ನವ-ನಾಗರೀಕತೆಯ ಬೆನ್ನು ಬಿದ್ದು ತಮ್ಮ ವ್ಯಕ್ತಿತ್ವದ ಅನನ್ಯತೆ, ದೇಶೀಯತೆ, ನೆಲದ ಪ್ರಾಕೃತಿಕ ಸಹಜ- ಸರಳ-ನಿರಾಳ ಜೀವನ ವಿಧಾನಗಳಿಂದ ದೂರವಾಗುತ್ತಾ, ಸ್ವಾವಲಂಬನೆ- ಸ್ವಾತಂತ್ರ್ಯ ಕಳೆದುಕೊಳ್ಳುತ್ತಾ ಹೋಗುತ್ತಾರೆ ಈ ಸ್ಥಿತ್ಯಂತರ ಪ್ರಗತಿ ದೇಶದ ದುರಂತವನ್ನೇ ಅಪ್ಪುವಂತೆ ಮಾಡುತ್ತಿರುತ್ತದೆ.ಇವುಗಳ ವಿರುದ್ಧವಾಗಿ ಆಯಾಯಾಕಾಲದ ಮಹತ್ಮರು, ಪ್ರಗತಿಪರ ಚಿಂತಕರು 'ಜನಜಾಗೃತಿ' ಮೂಡಿಸುವ ಚಿಂತನೆ- ಸಂಘಟನೆ- ಹೋರಾಟಗಳನ್ನು ರೂಪಿಸುತ್ತಾ ದೇಶಿಯತೆ ಮತ್ತು ಸ್ವಾತಂತ್ರ್ಯ ಸ್ವಾವಲಂಬನೆಗಳನ್ನು ಬೆಳೆಸಲು ಹೋರಾಡುವ ಜನಜಾಗೃತಿಯನ್ನು ಉಳಿಸಿಕೊಳ್ಳಬೇಕೆಂಬ ಪ್ರಕ್ರಿಯೆಯ ಅಭಿವ್ಯಕ್ತಿಯಾಗಿ ಹಾಳೂರು ಕವನವನ್ನು ವಿವೇಚಿಸಲಾಗಿದೆ.

ಈ ಕವನವನ್ನು ಕುವೆಂಪು ಸ್ವಾತಂತ್ರ್ಯ ಪೂರ್ವದ 1926ರಲ್ಲಿ ಬರೆದರು. ಅಂದಿನ ಭಾರತದ ಹಳ್ಳಿಗಳ ದುಸ್ಥಿತಿ ಗತಿಗಳೆ ಇದಕ್ಕೆ ಪ್ರೇರಣೆ. ವಸಾಹತು ಶಾಹಿಯದಬ್ಬಾಳಿಕೆ, ಕೈಗಾರಿಕೀಕರಣ, ಪ್ರಕ್ರಿಯೆಗಳಿಂದಾಗಿ ಹಳ್ಳಿಗಳ ದೇಶವಾಗಿದ್ದ ಭಾರತ 'ಹಾಳೂರು' ಆಗಿ ಸ್ಥಿತ್ಯಂತರ ಹೊಂದುತ್ತಿದ್ದ ದುರಂತದ ನಮೂದೆ ಈ ಕವನವಾಗಿದೆ.

1908 ರಷ್ಟು ಹಿಂದೆಯೇ ಗಾಂಧಿ ಈ ಅಪಾರವಾದ ಪರಿಣಾಮದ ಬಗ್ಗೆ ಮನುಕುಲಕ್ಕೆ ಎಚ್ಚರಿಕೆಯಿತ್ತರು. ತತ್ತ್ವರಹಿತ ಬೆಳೆವಣಿಗೆ ಮನುಕುಲವನ್ನು ಅಪಾಯದ ಅಂಚಿಗೆ ಒಯ್ಯುತ್ತದೆ ಎಂದು 'ಹಿಂದ್ ಸ್ವರಾಜ್' ನಲ್ಲಿ ಬರೆದರು. ಆಧುನಿಕ ನಾಗರೀಕತೆ ನಿಸರ್ಗವನ್ನು ಪೋಷಿಸಬೇಕು. ಮಾನವನು ಪ್ರಕೃತಿಗೆ ಅನುಗುಣವಾಗಿ ಬದುಕಲು ಯತ್ನಿಸಬೇಕು. ತನ್ನ ಆಗತ್ಯಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಇಲ್ಲವಾದರೆ ಸಾಮಾಜಿಕ, ರಾಜಕೀಯ ತಳಮಳ ಉಂಟಾದೀತು. ಪರಿಸರ ನಾಶ ಮತ್ತಿತರ ದುರಂತ ಸಂಭವಿಸಿತು. ಅಪರಿಮಿತ ಉಪಯೋಗ ಪ್ರವೃತ್ತಿ, ಮೌಲ್ಯಗಳ ಬಗ್ಗೆ ದಿವ್ಯ ನಿರ್ಲಕ್ಷ್ಯಗಳು ಮನುಕುಲವನ್ನು ಶಾಂತಿಯತ್ತ ಒಯ್ಯಲಾರವು ಎಂದರು. ಕುವೆಂಪು ಅವರ 'ಹಾಳೂರು' ಕವನದ ಕೇಂದ್ರ ಆಶಯವೂ ಇದೇ ಆಗಿದೆ.

19ನೇ ಶತಮಾನದಲ್ಲಿ ಬ್ರಿಟೀಷರು ಜವಳಿ ತಂತ್ರಜ್ಞಾನದ ಮೂಲಕ ಭಾರತವನ್ನು ಪ್ರವೇಶಿಸಿದ ಭಾರತದಲ್ಲಾದ ಕೈಗಾರಿಕೀಕರಣ ಪಾಶ್ಚಿಮಾತ್ಯರ ಹಿತಕ್ಕೆ ಅನುಗುಣವಾಗಿತ್ತೇ ಹೊರತು, ಭಾರತ ದೇಶದ ಸ್ಥಿತಿ - ಗತಿಗೆ ಅನುಗುಣವಾಗಿ ಅಲ್ಲ. ಭಾರತದಲ್ಲಿ ಆಗ ಉಂಟಾದ ಆಧುನಿಕ ಬಡತನ - ಪಾರಂಪರಿಕ ಉದ್ಯೋಗಗಳ ವಿನಾಶಕ್ಕೆ, ಬ್ರಿಟೀಷ್ ಗಿರಣಿಗಳ ದಾಹವೇ ಕಾರಣ. ಬದುಕಿನ ವಿಧಾನಗಳನ್ನು ಅಥವಾ ಜೈವಿಕ ಶಕ್ತಿಗಳನ್ನು ದೇಶೀಯರಿಗೆ ಇಲ್ಲದಂತೆ ಮಾಡಿ ಸ್ಥಳೀಯ ಸ್ವಾವಲಂಭನೆಯ ಮಾರ್ಗಗಳನ್ನು ಹಾಳುಮಾಡಲಾಯಿತು. ಕುವೆಂಪು ಈ ದುರಂತದ ಸ್ಥಿತ್ಯಂತರವನ್ನು 'ಹಾಳೂರು' ಕವನದಲ್ಲಿ ದೀರ್ಘವಾಗಿ ವಿವೇಚಿಸಿದ್ದಾರೆ.

ಭಾರತದಲ್ಲಿ ಬೆಳವಣಿಗೆಯಾಗಿದ್ದ ದಾರಿದ್ರ್ಯವನ್ನು ನಿವಾರಿಸಲು, ಭಾರತವನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸಲು ಇಲ್ಲಿಯ ಜನಜೀವನ ಮಾರ್ಗಗಳನ್ನು ಪುನರ್ ರೂಪಿಸಲು, ಅಭಿವೃದ್ಧಿ ಸಾಧಿಸಲು ಗ್ರಾಮ ಸ್ವರಾಜ್ಯದ ಆಶಯವಾಗಿ ಈ ಸಮಸ್ಯೆಗಳಿಗೆ 'ಪರಿಹಾರ ಚರಕ' ಎಂದು ಗಾಂಧಿ ವರ್ಣಿಸಿದರು. "1908 ರಲ್ಲೇ ಗಾಂಧಿ ಟ್ರ್ಯಾಕ್ಟರ್‌ಗಳ ಆಮದುನ್ನು ವಿರೋಧಿಸಿದ್ದರು. ಟ್ರ್ಯಾಕ್ಟರ್ ಕಾರ್ಮಿಕರ ಅನ್ನವನ್ನು ಕಸಿಯುತ್ತದೆ ಎಂಬುದು ಅವರ ವಾದವಾಗಿತ್ತು".[1]

ಈ ಮೇಲಿನ ಚಾರಿತ್ರಿಕ ಪ್ರಕ್ರಿಯೆಗಳನ್ನು ಗಮನಿಸಿದಾಗ ಆ ಕಾಲದ ವಸಾಹತುಶಾಹಿ ದಬ್ಬಾಳಿಕೆ, ರಾಷ್ಟ್ರೀಯತೆ ನಾಶ, ಕೃಷಿ- ನೇಯ್ಗೆಗಳಂತಹ ಕಸುಬುಗಾರಿಕೆಗಳ ನಾಶ, ಸಂಪನ್ಮೂಲಗಳ ನಾಶ ಮುಂತಾದವುಗಳನ್ನು ವಿರೋಧಿಸಿ ರಾಷ್ಟ್ರದಾದ್ಯಂತ ನಡೆಯುತ್ತಿದ್ದ ಚಿಂತನೆ - ಹೋರಾಟ - ಸುಧಾರಣೆ -ಚಳುವಳಿಗಳ ರಾಷ್ಟ್ರೀಯ ಮುಖ್ಯ ವಾಹಿನಿಗೆ ಕುವೆಂಪು ಈ ಕಾವ್ಯಾಭಿವ್ಯಕ್ತಿಯ ಮೂಲಕ ಕನ್ನಡದ ಒಂದು

ಸಂವೇದನೆಯನ್ನು ಕಟ್ಟಿಕೊಟ್ಟಿದ್ದಾರೆ. ಹಾಳೂರು ಕವನದ ವಿಶ್ಲೇಷಣೆಯ ಮೂಲಕ ಈ ಸಂವೇಧನೆಯ ಸ್ವರೂಪವನ್ನು ನೋಡಬಹುದು.[2]

ಕವನ ಆರಂಭದಲ್ಲಿ 'ಪುರದ ಗೆಳೆಯ' ನಿಗೆ ಹಾಳಾದ ಊರನ್ನು ಬಂದು ನೋಡೆಂದು ಕರೆ ಕೊಡುತ್ತಾರೆ. ಇದು ಕೇವಲ ಊರಲ್ಲ; ದೇಶಕ್ಕೆ ಅನ್ನ ಕೊಡುವ ರೈತರ ಬೀಡು. ಆದರೆ ಇಂದು ಹಳ್ಳಿಗರು 'ಪುರ' ವೆಂಬ ಮಾರಿಗೆ ಉಣಸಾಗಿ, ಹಳ್ಳಿ ನಿರ್ಜನವಾಗಿ, ಪಾಳು ಬಿದ್ದು ಹಾಳೂರಾಗಿದೆ. ಊರಿನವರು ಪುರ ಸೇರಿದ್ದಾರೆ. ಊರು ಹಾಳಾಗಿದೆ. ಅವರೂ........ ಅವರ ಈ ಓಟಕ್ಕೆ ಒಂದು ಕಾರಣ ಕಾರ್ಖಾನೆಗಳ ಕೂಲಿಯಾಸೆ. ಆ ಮೂಲಕ ಕೈಗಾರಿಕೀಕರಣ ಸೃಷ್ಟಿಸಿದ ನಗರ ಬದುಕಿನ ಭೋಗಮಯ ಆಕರ್ಷಣೆಗಳು ಇಲ್ಲಿಗೆ ಬಂದು ಅವರು ಕಲಿತದ್ದು ದುರ್ವ್ಯಸನಗಳು - ಕುಡಿತ, ಜೂಜಾಟ, ಬಟ್ಟೆಯಾಡಂಬರ, ಸಿನಿಮಾ, ನಾಟಕಗಳ ದುರ್ನಡತೆ. ಇದರಿಂದ ಅವರ ಸ್ಥಿತಿ ''ಹಳ್ಳಿಯೂ ಸುಖವಿಲ್ಲ ; ಪುರದಲ್ಲಿಯೂ ಸುಖವಿಲ್ಲ''ದ ತ್ರಿಶಂಕು ಸ್ಥಿತಿ. ಈ ನಗರದಾಕರ್ಷಣೆಗಳ ಪೊಳ್ಳುತನ ದೂರದ ಬೆಟ್ಟ....., ಹೊಳೆಯಾಚೆಗಿನ ಹಸುರು, ಮೇಲೆಬೆಳಕು, ಒಳಗಿಳಿಯ ಕೊಳಕು, ಹಳ್ಳಿ- ಪುರಗಳ ಬದುಕುಗಳಲ್ಲಿ ಯಾವುದು ಒಳಿತು ; ಯಾವುದು ಕೆಡಕು[3] ಎಂದು ವಿವೇಚಿಸುತ್ತಾ ಹಳ್ಳಿಯಲ್ಲಿ ಗಂಜಿ ಹುಂಡರು. ರಾಜನ್ಹಾಗಿರುವ, ದಾಸ್ಯವಿಲ್ಲದ ಸ್ವಾತಂತ್ರ್ಯ, ಗಲಿಬಿಲಿಯಿಲ್ಲದ ಶಾಂತಿ ಈ ಶ್ರಮಜೀವಿ ಸ್ವಾವಲಂಬಿ ನಿರ್ಗರ್ವಿ, ನಿರಾಡಂಬರಿ ಪುರದಲ್ಲಿ ಅನ್ನಕ್ಕೆ ಕೈಯೊಡ್ಡುವ ದಾಸ್ಯ, ಆಶಾಂತಿ, ಸೋಮಾರಿತನ, ಷೋಕಿಗಳ ನರಕ ಹಣವಿದ್ದರೂ ಪುರ ಗೋಳು ಪಾರತಂತ್ರ್ಯ ಎಂದು ವಿವರಿಸಿ ಕಿವಿಮಾತು ಹೇಳುತ್ತಾರೆ. - '' ಹಳ್ಳಿಗನೆ, ಪುರದವನ ಅನುಸರಿಸಬೇಡ ; ಹಳ್ಳಿಯೇ ಸ್ವರ್ಗವೇ, ಅದ ಬಿಡಲು ಬೇಡ .....,''[4]

ಕುವೆಂಪು ಅವರ ಹಳ್ಳಿಗಳ ಈ ವೈಭವೀಕರಣವನ್ನು ಅಂದಿನ 'ಆತ್ಮಾಭಿಮಾನ ಜಾಗೃತಿ'-'ಸ್ವದೇಶಿ ಚಳುವಳಿಯ ಸ್ಫೂರ್ತಿ' ಗಳ ಹಿನ್ನೆಲೆಯಲ್ಲಿ ಗಮನಿಸಬಹುದು ಈ 'ಮರಳಿ ಮಣ್ಣಿಗೆ ಆಶಯ ಆ ದಶಕದಾಚೆಗೂ ಸಾಮಾಜಿಕ ಚಳುವಳಿ, ಸಾಹಿತ್ಯ ಸಿನಿಮಾರಂಗಗಳಲ್ಲೂ ಗುರುತಿಸಬಹುದು.

ಈ ಅಭಿವ್ಯಕ್ತಿಯ ಜೊತೆಯಲ್ಲಿ ಕುವೆಂಪು ತಮ್ಮ ಸಮಕಾಲೀನರಿಗೆ ಹಾಕುವ ಪ್ರಶ್ನೆ-ಇವೆಲ್ಲ

''....ಎನ್ನ ಮನವ ಪೀಡುತಿಹುದು ಪೀಡಿಸದೆ ನಿನ್ನ?'.

'ಅಂದು ಸಂತಸದಿ ನಲಿದಾಡಿದ ನಮ್ಮೂರು ಇಂದು ಮಸಣವಾಗಿ ಹಾಳೂರಾಗಿದೆ ?

ಹಾಗಾಗಿರೋದಕ್ಕೆ ಕಾರಣಗಳನ್ನು ಬಿಡಿಸುತ್ತಾ ಆಧುನಿಕ ಶಿಕ್ಷಣ ಪದ್ಧತಿಯಿಂದ ಕಲಿಕೆಯಲ್ಲಾದ

ಬುದ್ಧಿ-ಹೃದಯ ಬೆಸೆಯದ ಒಂದು ಕೆಟ್ಟ ಬದಲಾವಣೆಯನ್ನು ಗುರುತಿಸುತ್ತಾರೆ. ಮರಳ ಮೇಲೆ ಅಕ್ಷರ ಕಲಿಸೋ ಮಠದ ಬಡ ಗುರು ವಿದ್ವಾಂಸರಲ್ಲವಾದರೂ ಕರಗುವ ಮನವುಳ್ಳ ಹೃದಯವಂತ ನಮಗಿರಬೇಕಾದ್ದು. ಆ ಗುರುಗಳ ಮಲತರ ಜೀವ ಭಾವ; ಈ ಪ್ರಾಥಮಿಕ ಶಿಕ್ಷಣ ಮುಗಿಸಿ ಮುಂದೆ ಪುರಕ್ಕೆ ಹೋಗಿ ಕಲಿತವರೆಲ್ಲ ನಗರದ ಚಾಕರಿ ಹಿಡಿದು ಅಲ್ಲೆ ನೆಲೆಯಾದರು. ಊರ ಜಾಣರು ಪುರದ ಪಾಲಾದರು ಹಳ್ಳಿಯನ್ನು ಮರೆತರು. ಕಲಿತ ಸಮಕಾಲೀನ ಯುವಕರಿಗೆ ಕುವೆಂಪು ಎಷ್ಟು ಅವಮಾನವೀಯುವೆಂದರೆ-ಹಳ್ಳಿಯನೆ ದೂರಿ, ಹಳ್ಳಿಯನೆ ಸುಲಿದು ಹಳ್ಳಿಗ ತಂದೆಯನು ನಮ್ಮೂರ ಆಳೆಂದು ಹೇಳುವಷ್ಟು.

ಹೀಗೆ ಹಳ್ಳಿಯ ತರುಣರ ಮನುಷ್ಯತ್ವವನ್ನೇ ನಾಶ ಮಾಡಿ ನಗರ ಬೆಳೆಯುತ್ತಾ ಹಳ್ಳಿ ನಾಶವಾಗುತ್ತದೆ. ಆದರೆ ನಮ್ಮ ದೇಶದ ಜೀವ-'ಭಾರತೀಯ' ಸಂಜೀವ ಬಳ್ಳಿ ಎಂದರೆ ಹಳ್ಳಿ. ಈ ಯಂತ್ರ ಘೋಷ ಮಾರಿಯಂತೆ ಕೃಷಿಯನ್ನು ನಾಶಮಾಡಿ ಹಸಿವು-ಬಡತನ ಹೆಚ್ಚಿಸುತ್ತದೆ. ಈ ಯಂತ್ರ ನಾಗರೀಕತೆಯೆನ್ನುವುದು ಪುಣ್ಯದ ವೇಷಧರಿಸಿರುವ ಪಾಪ; ದೇಶದ ಆ ದುಸ್ಥಿತಿಯಲ್ಲಿ ಸಾರ್ಥಕ ಕರ್ತವ್ಯವೆಂದರೆ ಹಳ್ಳಿಯುದ್ಧಾರ.

ಹೀಗೆ ನಗರೀಕರಣದ ಕೇಂದ್ರಿಕೃತ ಸಂಸ್ಕೃತಿಯಿಂದಾಗಿ ಗ್ರಾಮೀಣ ಸಂಸ್ಕೃತಿಯ ವೈವಿಧ್ಯತೆಗಳು ಮರೆಯಾಗುವ ದುರಂತವನ್ನು ಗ್ರಹಿಸಿದ್ದಾರೆ. ಅಲ್ಲದೆ ಈ ದುರಂತಗಳನ್ನು ಅತಿ ಮಾಡಿ ಹೇಳುವಲ್ಲಿ - ಇನ್ನಾದರೂ ವಸಾಹತು ಷಾಹಿ ದಬ್ಬಾಳಿಕೆಗೆದುರಾಗಿ ಮೂಲನೆಲೆಗಳನ್ನು ಉಳಿಸಿಕೊಳ್ಳುವ ಜಾಗೃತಿ ಮೂಡಲೆಂಬ ಮತ್ತು ನಗರಾಕರ್ಷಣೆಗಳ ದುಷ್ಪರಿಣಾಮಗಳ ವಿವೇಚನೆ ಮೂಡಲೆಂಬ ಕುವೆಂಪು ಅವರ ತೀವ್ರ ಕಾಳಜಿಗಳನ್ನು ಗುರುತಿಸಬಹುದು.

ಎಲೆ ಮುದ್ದು ಹಳ್ಳಿ ನಿನ್ನ ಕೈಗಾರಿಕಗಳೆಲ್ಲಿ? ಅಕ್ಕಸಾಲಿಗ, ಕಮ್ಮಾರ, ನೇಯ್ಗೆಯವರೆಲ್ಲಿ! ಅಂದಿನ ಕುಶಲ ಕಲೆಗಳು ಮಾಯವಾದವೆಲ್ಲಿ, ನಿನ್ನ ಜೀವನದನ್ನವನು ಕಸಿದವರಾರು? ನಿನ್ನವರ ಕೈ ಬೆರಳ ಕಡಿದವರಾರು? ಹಾಲೆಂದು ವಿಷ ವೂಡಿದವರಾರು? ಎಂದು ಪ್ರಶ್ನಿಸುತ್ತಾರೆ.

ಕುವೆಂಪು ಅವರ ಈ ಅಭಿವ್ಯಕ್ತಿಯನ್ನು ಆ ಕಾಲದ ಚಾರಿತ್ರಿಕ ಘಟನೆಗಳ ಹಿನ್ನೆಲೆಯಲ್ಲಿ ಗಮನಿಸಿದರೆ, ಕವನದ ಪ್ರಸ್ತುತಗುಣ ಹೆಚ್ಚು ಸ್ಪಷ್ಟವಾಗುತ್ತದೆ. ಅಂದು " ಭಾರತದ ದೇಶಿಯ ಕೈಗಾರಿಕೆಗಳನ್ನು ನಾಶ ಮಾಡುವುದಕ್ಕೆ ಮುಂಚೆ ದೇಶಿಯ ಕರಕುಶಲತೆ ಮತ್ತು ಕಸುಬುದಾರಿಕೆ ಹಾಗೂ ನೇಕಾರರ ಸ್ವಾಯುತ್ತತೆಗಳನ್ನು ನಾಶ ಮಾಡುವುದು ಬ್ರಿಟಿಷ್‌ರಿಗೆ ಅವಶ್ಯಕವಾಗಿತ್ತು. ಬ್ರಿಟೀಷರ ಇಂತಹ ಕಸುಬು ನಾಶ ತುಂಬಾ ಹಿಂಸಾತ್ಮಕವಾಗಿತ್ತು. ಬ್ರಿಟಿಷ್ ಗಿರಿಣಿಗಳ ಉತ್ಪಾದನೆಗಳು ಭಾರತದ ದೇಶಿಯ ಕೈಮಗ್ಗದ ಜವಳಿಯ

ಜೊತೆ ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ದಿಸಲು ಸೋತಾಗ, ಬಂಗಾಳದ ನೇಕಾರರ ಹೆಬ್ಬೆರಳುಗಳನ್ನು ಕತ್ತರಿಸಲಾಯಿತು. ಒಟ್ಟಾರೆಯಾಗಿ ಬ್ರಿಟೀಷರ ದೌರ್ಜನ್ಯದಿಂದ ಭಾರತದ ನೇಯ್ಗೆ -ಕೃಷಿ ಹಾಳಾಗಿ, ಆದಾಯವಿಲ್ಲದಿದ್ದರೂ ಕಂದಾಯ ಕಟ್ಟುವುದು ತಪ್ಪಲಿಲ್ಲ. ಕೆಲವು ವೇಳೆ ಮಕ್ಕಳನ್ನು ಮಾರಿ ಕಂದಾಯ ಕಟ್ಟುವ ಪರಿಸ್ಥಿತಿ ಒದಗುವಷ್ಟು ದೇಶ ದ್ವಂದ್ವದಲ್ಲಿ ಮುಳುಗಿತ್ತು. ಹಳ್ಳಿಯ ದುಡಿವ ಜನ ನೆಲೆಯಿಲ್ಲದವರಾಗಿ ದಿಕ್ಕಪಾಲಾದರು. ಇಂಥ ಘಟನೆಗಳು ದೇಶಾದ್ಯಂತ ನಡೆಯುತ್ತಿರುವಾಗ ಕನ್ನಡದ ಕವಿ ಈ ದುರಂತ ಪ್ರಕ್ರಿಯೆಗಳನ್ನು 'ಹಾಳೂರು ' ಪ್ರತಿಮೆಯಾಗಿ ಕಂಡಿರಿಸಿದ್ದಾರೆ.

ಕೊನೆಯಲ್ಲಿ ಮುದ್ದಾಗಿ ಸಮೃದ್ಧವಾಗಿದ್ದ ಹಳ್ಳಿ ಹಾಳೂರಾದ ಪ್ರಕ್ರಿಯೆಗಳನ್ನು ವರ್ಣಿಸುತ್ತಾರೆ. ಹಳ್ಳಿಯ ನಲಿವ ತೋಟ, ವನ, ಹೊಲ ಗದ್ದೆಗಳ ಸೌಂದರ್ಯ, ಅದರೊಳಗೆ ಸುಖದಿಂದ ಜೀವಿಸುತ್ತಿದ್ದ ಜನಜೀವನದ ಗೀತೆ - ಉಳುಮೆ - ಉತ್ಸವಗಳು ಈಗಿಲ್ಲ ಕಡೆಗಣ್ಣ ಚಲ್ಲಾಟ, ಬೇಟ, ಪ್ರಣಯದಾಟ ಕೂಟಗಳಂಥ ಸಹಜ ರಸಿಕ ಲೀಲೆಯ ಬದುಕು ಈಗಿಲ್ಲ. ಕೌಟುಂಬಿಕ ಸಂಬಂಧಗಳ ನಂಟುಗಳೂ ಇಲ್ಲ. ಹಕ್ಕಿಗಳೊಂದಿಗೆ ಆಡುವರಿಲ್ಲ. ಮಲ್ಲಿಗೆ - ಸೇವಂತಿಗೆ - ತಾವರೆಗಳ ಕೇಳುವವರಿಲ್ಲ. ಇವರನ್ನೆಲ್ಲ ಪಟ್ಟಣದ ಮಾರಿ ನುಂಗಿದೆ. ಈ ಹಾಳಾದ ಸುದ್ದಿಯನ್ನು ಎಲ್ಲರಿಗೂ ಸಾರಿ ಎಂದು ಕವಿ ವಿಹಂಗಮಗಳಿಗೆ ವಿಷಾದದಿಂದ ಕರೆ ಕೊಡುತ್ತಾರೆ.

ಈ ದೀರ್ಘ ಕವನದ ಕೊನೆಯಲ್ಲಿ ಕವಿಯು ಪುರಗಳಲ್ಲಿರುವ ಅತಿ ಭೋಗದ ರೋಗ ಹಳ್ಳಿಗಳಿಗೂ ಬಂದು ವೇಗವಾಗಿ ಕೊಲ್ಲುತ್ತದೆ. ಈ ಮಿತಿ ಮೀರಿದ ಅತಿಭೋಗ ಘೋರ ವಿಷದಂತೆ ನೀತಿ ನಾಶ, ಕೀರ್ತಿನಾಶ, ದೇಶಗಳ ನಾಶ, ಹಳ್ಳಿಗಳ ಸಾಮಾನ್ಯಜೀವನ ಪರಸುಧೆಗಳ ಸಮನ್ವಯ ಸಾಧ್ಯ. ಆದರೆ ಹಳ್ಳಿಗಳಿಲ್ಲದ ದೇಶ ಸದಾ ಭೋಗಿ, ನಿತ್ಯರೋಗಿ, ನಿರ್ಜೀವ ಶವದಂತೆ, ಹಾಗಾಗಿ ಹಳ್ಳಿಗಳ ಮಹಾತಾಯಿ ಭಾರತೀಯ ಹಳ್ಳಿಗಳು ಹಾಳಾಗದಂತೆ ಸಲಹವ್ಮ' ಎಂದು ಕವಿಯ ಆರ್ತತೆ - ಅಸಹಾಯಕತೆಯ ಮೊರೆಯಿಂದ ಪದ್ಯ ಮುಕ್ತಾಯವಾಗುತ್ತದೆ. ಒಟ್ಟಾರೆ ಹಳ್ಳಿಗಳು ಹಾಳೂರಾದದ್ದಕ್ಕೆ ಕಾರಣಗಳು - ಅದರ ಪರಿಹಾರೋಪಾಯ ಗಳನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ.

ಕುವೆಂಪು ಎಷ್ಟು ತೀವ್ರವಾಗಿ ತಮ್ಮ ಸಮಕಾಲೀನ ಬದುಕಿನ ಆಗು - ಹೋಗುಗಳಿಗೆ ಸ್ಪಂದಿಸಿರುವರೆಂಬುದು ತಿಳಿಯುತ್ತದೆ. ಸಾಹಿತಿಗೆ ಇರಬೇಕಾದ ಸಾಮಾಜಿಕ ಜವಬ್ದಾರಿ ಜನಪರ ಕಾಳಜಿ - ಪ್ರಸ್ತುತ ಪ್ರಶ್ನೆಗಳಿಗೆ 'ಹಾಳೂರು' ಕವನ ನಿದರ್ಶನವಾಗಿದೆ.

ಇಲ್ಲಿ 'ಸಂತಸದಿ ನಲಿದಾಡಿತಂದು ನಮ್ಮೂರು

ಮಸಣವಾಗಿಹು ದಿಂದು : ಈಗ ಹಾಳೂರು '[5]

ಈ ದುರಂತಾತ್ಮಕ ಸ್ಥಿತ್ವಂತರವನ್ನು ಎಷ್ಟು ಎಷ್ಟು ವಿವರಿಸಿದರೂ ಕವಿಗೆ ಸಮಾಧಾನವಿಲ್ಲ. ಅವರ ಈ ನೆಲದ ಬದುಕನ್ನು ಕುರಿತ ಆಸೆ, ಕೆಡುಕಿನ ನಡೆಯನ್ನು ಕುರಿತ ಆತಂಕ, ಒಳಿತಾಗಿಸಲೇಬೇಕೆಂಬ ತೀವ್ರ ತುಡಿತಗಳೇ ಕವನವನ್ನು ಸುದೀರ್ಘಗೊಳಿಸಿದೆ. ಕವನದ ಶೀರ್ಷಿಕೆ 'ಹಾಳೂರು' ಎಂಬುದು ಕೂಡ ಅತ್ಯಂತ ಅರ್ಥಪೂರ್ಣವಾಗಿದೆ. ಇಲ್ಲೆಲ್ಲ ಕುವೆಂಪು ತಮ್ಮ ಬರಹದ ಶಕ್ತಿಯನ್ನು ನೆಲವನ್ನು ನಂದನವಾಗಿಸುವ ತಿಳುವಳಿಕೆಯ ಸಾಧನವಾಗಿಸಿಕೊಳ್ಳುತ್ತಾರೆ. ಅವರ ಈ ಹಂಬಲ ಮತ್ತು ಒಟ್ಟು ಭಾರತದ ಬದುಕಿನ ಸ್ಥಿತ್ಯಂತರವನ್ನು ಕುರಿತ ಈ ರೀತಿಯ ಕಾಳಜಿಪೂರ್ವಕ ಅಭಿವ್ಯಕ್ತಿ ' ರಾಷ್ಟ್ರಕವಿ ' ಸ್ಥಾನಕ್ಕೆ ಮತ್ತೆ - ಮತ್ತೆ ಅರ್ಹಗೊಳಿಸುತ್ತವೆ.

ಇಪ್ಪತ್ತರ ದಶಕದಿಂದ ಹಸಿರು ಕ್ರಾಂತಿ, ಪಂಚವಾರ್ಷಿಕ ಯೋಜನೆಗಳು, ಗ್ಯಾಟ್ - ಡಂಕೆಲ್ ಒಪ್ಪಂದಗಳು, ಮುಕ್ತ ಆರ್ಥಿಕ ನೀತಿ, ಜಾಗತೀಕರಣ, ಖಾಸಗೀಕರಣ ಸರಕು - ಸಂಸ್ಕೃತಿ ಮುಂತಾದವುಗಳ ಒಟ್ಟು ಪರಿಣಾಮಗಳ ಹಿನ್ನೆಲೆಯಲ್ಲಿ ಇಂದು ಭಾರತಕ್ಕೆ ಭಾರತವೇ 'ಹಾಳೂರು' ಸ್ಥಿತಿಯಲ್ಲಿದೆ. ಹೀಗಾಗಿ ಕುವೆಂಪು ಅವರ 'ಹಾಳೂರು' ಕವನದ ಪ್ರಸ್ತುತತೆ ಎಂದಿಗಿಂತ ಇಂದು ಹೆಚ್ಚಾಗಿದೆ.

ಹಳ್ಳಿಗಳು ಹಾಳೂರಾಗಿದ್ದು ಪರಕೀಯರ ದಬ್ಬಾಳಿಕೆ - ಶೋಷಣೆಗಳಿಂದ ಇದು ಸಾಧ್ಯವಾದದ್ದು ನಮ್ಮೊಳಗಿರುವ ಅವೈಜ್ಞಾನಿಕ - ಅಮಾನವೀಯ ಜಾತಿಪದ್ಧತಿ - ಧಾರ್ಮಿಕ ಮೌಢ್ಯಚರಣೆಗಳಿಂದ ಎಂದು ತಲಸ್ಪರ್ಶಿಯಾಗಿ, ಸ್ವವಿಮರ್ಶಾತ್ಮಕವಾಗಿ ವಿಡಂಬಿಸಿದ್ದಾರೆ. ಇದು ಇಂದಿನ ಮತೀಯತೆ ಕೋಮು ಘರ್ಷಣೆಗಳ ದಳ್ಳುರಿಯಲ್ಲಿರುವ ಭಾರತದ ಪರಿಸ್ಥಿತಿಗೂ ಅತೀ ಪ್ರಸ್ತುತವಾಗಿರುವ ವಿಚಾರ ಸರಣಿಯಾಗಿದೆ.

ವಾಸ್ತವ ಜಗತ್ತಿನಿಂದ ನೇರವಾಗಿ ಕಲೆ ಜನ್ಮವೆತ್ತುವುದಿಲ್ಲ. ವಾಸ್ತವಿಕತೆಯ ತುತ್ತ ತುದಿಯಲ್ಲಿ ನಿಂತು ಬೇರೊಂದು ಪ್ರಪಂಚವನ್ನು ಕಣ್ಣು ಕಂಡಾಗ ಆದ ಪ್ರತಿಕ್ರಿಯೆ ಹೊರಚಿಮ್ಮಿದಾಗ ಕಲೆ ನಿರ್ಮಾಣವಾಗುತ್ತೆ ಆ ಬೇರೊಂದು ಪ್ರಪಂಚವೇ ಕವಿ ಪ್ರಪಂಚ, ಆ ಪ್ರತಿಕ್ರಿಯೆ ಒಬ್ಬ ಶಿಲ್ಪಿಯಾಗಿ ಹೊರಬರಬಹುದು. ಕವಿಯಾಗಿ ಜನ್ಮವೆತ್ತಬಹುದು.

''ಪ್ರೇಕ್ಷಕನೊಬ್ಬನಿಗೆ'' ಎಂಬ ಕವನದಲ್ಲಿ ಕಲೆಯ ಸೋಗು ಹಾಕಿಕೊಂಡು ಅದರ ನೆಳಲಲ್ಲಿ ತಮ್ಮ ಭೋಗಾಪೇಕ್ಷೆಗಳನ್ನು ತೋರಿಸಿಕೊಳ್ಳುವವರನ್ನು ಕಾಣಿಸಿದ್ದಾರೆ. ನಿತ್ಯವೂ ಬೆಳಗು -ಸಂಜೆಗಳ

ಸೌಂದರ್ಯಾರಾಧನೆಯನ್ನು ಬಿಟ್ಟು ತಮ್ಮ ಇಂದ್ರಿಯ ಚಾಪಲ್ಯಕ್ಕೆ ಕನ್ನಂಬಾಡಿಗೆ ಬರುವವರು ಗುಂಪನ್ನು ಬಯಲಿಗೆಳೆದಿದ್ದಾರೆ. ನಮ್ಮ ನಿತ್ಯ ಜೀವನದಲ್ಲಿ ಇಂತಹ ಕಪಟಗಳನ್ನು ಎಷ್ಟು ನೋಡುತ್ತಿಲ್ಲ! ಹೆಣ್ಣು ಗಂಡಾದಿಯಾಗಿ ಬಾಹ್ಯಾಡಂಬರಕ್ಕೆ ಮನಸೋತು ಒಬ್ಬರನ್ನೊಬ್ಬರು ಸಂದಿಸಲಿಕ್ಕೆ ಬರುವುದ ಎಲ್ಲರಿಗೂ ತಿಳಿದ ವಿಷಯ. ಹಾಗೇ ಬಂದ ಪ್ರೇಕ್ಷಕನೊಬ್ಬನಿಗೆ 'ನಿನ್ನ ಎದೆಗೆಲ್ಲ ಕಣ್ಣು, ನಿನ್ನಾಸೆ ಕಲೆಯಲ್ಲವೊ ಕಲೆಯ ಜಾರೆ! ಎಂದು ಜರಿದಿದ್ದಾರೆ.

ಕನ್ನಂಬಾಡಿಯ ಕಲೆಗೆ ಮಾರು ಹೋಗಿ ಅಲ್ಲಿ ಸೃಷ್ಟಿ ಮಾನವನ ಹೊಂದಾಣಿಕೆಯಿಂದ ಉದ್ಭವಿಸಿರುವ ಕಲೆಗೆ ಮನಸೋತು ನಿಸರ್ಗದೊಡನೆ ಬೆಸುಗೆ ಹಾಕಿಕೊಂಡು ಕವಿ ಅದರ ಸಲಿಲದಲ್ಲಿ ಭಾವನಾ ಪರವಶರಾಗಿ ಆತ್ಮಾನಂದದಿಂದ ಹೂವಾಗಿ, ಹೊಳೆಯಾಗಿ, ಗಿರಿಯಾಗಿ, ವನವಾಗಿ ಪ್ರಕೃತಿಯ ಎಲ್ಲ ನಾಡಿಗಳಲ್ಲೂ ಒಂದಾಗಿ ಸವಿ ಕಂಡು ಉಂಡು ಬೆರಗಾಗಿ ತೃಪ್ತಿ ಪಟ್ಟು ಎದೆಯೊಲವನ್ನು ಸುತ್ತೆಲ್ಲವೂ ಪ್ರಸರಿಸಿ ಕಾವ್ಯವಾಗಿ ಹರಿಸಿ ಜನರೆದೆಯನ್ನು ತಣಿಸಿದ ಮರುಗಳಿಗೆಯಲ್ಲೇ ದಾರಿಯ ಹಳ್ಳಿಯನ್ನು ನೆನೆಸಿಕೊಂಡು ಕರ್ಮಕಾಂಡಕ್ಕೆ ದುಮ್ಮಿಕ್ಕುತ್ತಾರೆ. ಹಳ್ಳಿ ಹರಿದು ಹಂಚಿರುವುದನ್ನು ಕಂಡು ಕನಿಕರದಿಂದ, ದುಃಖದಿಂದ ಕರಗಿ ನೀರಾಗಿದ್ದಾರೆ. ಅದೇ ತಾನೇ ಮನಮೋಹಕ ದೃಶ್ಯಗಳಿಂದ ಮನಸ್ಸು ಗರಿಗೆದರಿ ಹಾರುತ್ತಿದುದ್ದು ಹಳ್ಳಿಯೆಲ್ಲಾ ನೆಲಸಮವಾಗಿರುವುದನ್ನು ನೆನೆದು ಬಗೆಗಾಣದೆ ತತ್ತರಿಸಿದ್ದಾರೆ. ಹಳ್ಳಿಯ ಜನರ ರಕ್ತಕಣಗಳೂ ಇಂದು ಮಣ್ಣ ಕಣಗಳಾಗಿ ಕಾಣುತ್ತಿದ್ದ ಭೀಕರ ದೃಶ್ಯದಿಂದ ಬೆರಗಾಗಿ ಕವಿ ಹೃದಯ ಅಯ್ಯೋ ಎಂದು ಚೀರುತ್ತದೆ. ಇಷ್ಟು ದುರಸ್ಥಿಗೆ ಕಾರಣರಾದ ಧನಿಕರು ಕಣ್ಣಿಗೆ ಬಿದ್ದಲ್ಲೆ ಕೋಪದಿಂದ;

ಧನಿಕರನ್ನು ದೂಷಿಸಿ ಬಡವರ ಬಗ್ಗೆ ಕರುಣೆ ತೋರಿಸಿದ್ದಾರೆ. ಬಂಜರು ಹಳ್ಳಿಯನ್ನು ನೋಡಿ, ಸರ್ವ ಸುಖ ಸಂತಸಗಳ ಆಗರವಾದ ಕನ್ನಂಬಾಡಿಯನ್ನು ಬಿಟ್ಟು ಇದು ಇರಲಿ! ಅದನು ನೆನೆ! ಎಂದು ದಾರಿಯಲ್ಲಿ ಉಸಿರಾಡಲು ತಿಣುಕುತ್ತಿರುವ ಹಳ್ಳಿಯನ್ನು ಬೊಬ್ಬಿಟ್ಟು ತೋರಿಸಿದ್ದಾರೆ. ಕವಿ ಮನದ ವೀಣೆ ಬರಿ ಭಾವನಾ ಲೋಕದ ಪ್ರಕೃತಿಯ ಸವಿಯುಂಡು ಸಂಚರಿಸುವ ಸ್ವರ್ಗೀಯ ಆನಂದದ ನಾದವನ್ನೇ ಮಿಡಿದಿಲ್ಲ. ಬಾಳಿನ ಬವಣೆಯನ್ನು ಮಿಡಿದಿದೆ. ಬಾಳಿನ ಬಹು ಮುಖಗಳನ್ನು ಕಂಡು ತಮ್ಮ ಅನುಭವದ ಕಾವ್ಯದ ಮೂಸೆಯಲ್ಲಿಟ್ಟು ಅವಕ್ಕೆ ತಕ್ಕಂತೆ ರೂಪ ಕೊಟ್ಟು ಕೆತ್ತಿದ್ದಾರೆ. ಅವರ ಕಾವ್ಯದಲ್ಲಿ ನಿರ್ಮಿಸದಿರದ ವಸ್ತುವಿಲ್ಲ.

ಅವರು ಹರಿಯದಿರುವ ತಾಣವಿಲ್ಲ. ಸೃಷ್ಟಿಯನ್ನು ಕಂಡು ಸಂತೋಷ ಪಟ್ಟಂತೆ, ಹಿರಿಯ ಚೇತನಗಳನ್ನು ನಮಸ್ಕರಿಸುವಂತೆ, ಬಾಳಿನ ಕಷ್ಟ ಕಾರ್ಪಣ್ಯಗಳನ್ನು ಕಂಡು ಕರಗಿದ್ದಾರೆ. ಕ್ರೌರ್ಯ ದರ್ಪಗಳನ್ನು ನೋಡಿ

ರೊಚ್ಚಿಗೆದಿದ್ದಾರೆ. ಮೂಢತೆಗೆ ಮಾರುಹೋದ ಜನಕ್ಕಾಗಿ ಮರುಗಿದ್ದಾರೆ.

ಮಾದೇಶ್ವರನ ಬೆಟ್ಟಕ್ಕಂತೆ, ಅದೊ ನೋಡಲ್ಲಿ
ನಡುಹಗಲಿನೊಂಬಿಸಿಲಿನಲಿ ಕೂಗಿಕೊಳ್ಳುತ್ತೆ
ಬಿಡು ಮುಡಿಯ ಪರಿದುಡೆಯ ಹೊಟ್ಟೆಗಿಲ್ಲದ ಹಳ್ಳಿ
ಹೋಗುತ್ತಿದೆ! ಕೂಸುಗಳೂ ಬಿರುಸೆಕೆಗೆ ಸೀಯುತ್ತೆ
ತಾಯ್ಗಳೆದೆ ಗೂರಲುತಿವೆ ![6]

ಎಂತಹ ಹೃದಯ ವಿದ್ರಾವಕವಾದ ಚಿತ್ರ ! ಇಂದಿನ ಲೌಕಿಕ ವ್ಯವಹಾರ ಹದಗೆಟ್ಟು. ದೀನ ದಲಿತರ ರಕ್ತದ ಕಣಗಳು ನಿರ್ಮಿಸುವ ಹಣ. ಸೌಕರ್ಯವೆಲ್ಲವೂ ಹೀಗೆ ಧನಿಕನ ಡೊಳ್ಳು ಹೊಟ್ಟೆ ತುಂಬುತ್ತಿರುವುದನ್ನು ಚಿತ್ರಿಸುವ ಕವನವೆಂದರೆ 'ಬೆಕ್ಕು-ಇಲಿ'

ಊರಿನ ಕೊಳೆಯನೆಲ್ಲ ತೊಳೆವ ನಿನಗೆಯೆ ತೊಳೆಯೆ
ನೀರಿಲ್ಲ ಓ ತೊಟ್ಟಿ ! ಹಣವಂತರಿಗೆ ತೊಟ್ಟ
ಮನೆಗಳನು ಕಟ್ಟುವ ನಿನಗೆ ಮಲಗೆ ಬಡಹಟ್ಟು
ಗತಿಯಲ್ಲ, ಓ ಕೂಲಿಕಾರ ! ಪೈರನು ಬೆಳೆಯೆ[7]

ಸಮಗ್ರ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸುವ ನಿನಗೆ ಕೊರತೆಯ ಬಾಳು ಆವರಿಸಿಕೊಂಡಿದೆಯಲ್ಲಿ ಎಂಬ ನೋವಿನ ದನಿಯಾಗಿ, ಶೋಷಣೆಯ ವಿರುದ್ಧದ ಜ್ವಾಲಾರೂಪವನ್ನು ನೋಡಬಹುದು.

ಹಿಂದಿನ ಕವಿತೆಯಲ್ಲಿ ಹೇಳಿದ ವಿಷಯವನ್ನು 'ಶ್ರೀ ಸಾಮಾನ್ಯ''ರ ದೀಕ್ಷಾ ಗೀತೆ ಕವಿತೆಯಲ್ಲಿ ಇನ್ನೂ ವಿಸ್ತಾರವಾಗಿ ಹೆಚ್ಚಿನ ಸ್ಫೂರ್ತಿಯಿಂದ ವಿವರಿಸಿದ್ದಾರೆ. ಈ ಕವಿತೆಯು ಸರ್ವೋದಯ ತತ್ವವನ್ನು ತಿಳಿಸುತ್ತದೆ. ಸರ್ವರ ಉದಯವೇ ಸರ್ವೋದಯ. 'ಕೊನೆಗಂಡಿತೊ ಓರ್ವರೂರ್ವರ ಗರ್ವದ ಕಾಲ; ಇದು ಸರ್ವರ ಕಾಲ' ಎಂದು ಘೋಷಿಸಿ ಸರ್ವೋದಯ ಎನ್ನುವುದು ಯುಗದಮಂತ್ರ, ಎಂದಿದ್ದಾರೆ.೧೯೫೦ ನೇ ಇಸವಿ ಜನವರಿ ೨೬ ರಂದು ಭಾರತವು 'ರಿಪಬ್ಲಿಕ್' ರಾಷ್ಟ್ರವಾಯಿತು. ಅಂದಿನಿಂದ ಅದು ''ಸರ್ವತಂತ್ರ ಸ್ವತಂತ್ರ ಗಣರಾಜ್ಯ''ವಾಯಿತು. ತನ್ನದೆ ಆದ ಸಂವಿಧಾನವನ್ನು ಹೊಂದಿತು. ಈಗ ನಾವೆಲ್ಲರೂ ಸಂವಿಧಾನಕ್ಕೆ ಬದ್ಧರಾಗಿ ಜೀವನ ನಡೆಸುತ್ತಿದ್ದೇವೆ ಎಂಬುದು ಗೊತ್ತಿಲ್ಲದಿರಬಹುದು. ಆದರೇನಂತೆ ಅದು ಇರುವ ವಿಷಯವೇ ಆಗಿದೆ. ಜಲಗಾರನಿಂದ ಹಿಡಿದು ರಾಷ್ಟ್ರಪತಿಯವರೆಗೆ ಎಲ್ಲರಿಗೂ ಇರುವುದು ಒಂದೇ ವೋಟು, ಒಂದೇ ಹಕ್ಕು ಯಾವ ಉದ್ಯೋಗವೂ ಮೇಲಲ್ಲ ಯಾವುದೂ ಕೀಳಲ್ಲ. ಜಾತಿಗೆ ಯಾವ ಬೆಲೆಯೂ ಇಲ್ಲ. ಚರ್ಮದ ಬಣ್ಣಕ್ಕಿಲ್ಲ. ಆಡುವ ಭಾಷೆಗೆ ವಿಶೇಷ ಬೆಲೆಯೇನೂ ಇಲ್ಲ. ಉಡುಪು ಊಟ

ಯೂವುದದರೂ ವಿಶೇಷವೇನೋ ಇಲ್ಲ. ಸಂವಿಧಾನದ ಅರಿವಿಲ್ಲದವರಿಗೆ ಸತ್ಯ ತಿಳಿಯದೆ ಹೋಗಬಹುದು. ಓದಿ ಕೇಳಿ ಅನುಭವಿಸಿ ಹೇಗೋ ಅಂತೂ ತಿಳಿದವರಿಗೆ ಸಂವಿಧಾನದ ಕವಚ ತೊಡುವುದು ಗೊತ್ತಿದೆ. 'ರಿಪಬ್ಲಿಕ್ ಡೇ' ಎಂದು ನಾವು ಆಚರಿಸುವ ದಿನವನ್ನೇ ಕವಿಯು ಸರ್ವೋದಯದ ದಿನ ಎಂದು ಭಾವಿಸುತ್ತಾರೆ. (ಈಗ ಗಾಂಧೀಜಿಯವರ ಕಾಲ ಆದ ದಿನವನ್ನು ಸರ್ವೋದಯ ದಿನ ಎನ್ನುತ್ತಾರೆ.) ಕವಿಯ ದೃಷ್ಟಿಯಲ್ಲಿ ಜನವರಿ ೨೬ ಸರ್ವೋದಯ ದಿನ. ಬ್ರಿಟೀಷರು ಭಾರತವನ್ನು ಬಿಟ್ಟು ಹೋದ ನಂತರ ನಾವು ಸ್ವತಂತ್ರರಾದೆವು. ಆದರೂ ನಮ್ಮ ದೇಶಕ್ಕೆ ಒಂದು ಸಂವಿಧಾನವಿರಲಿಲ್ಲ. ಡಾ|| ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿಯು ಸಿದ್ಧಪಡಿಸಿದ ಉತ್ತಮವಾದ ಸಂವಿಧಾನವನ್ನು ನಾವು ಒಪ್ಪಿಕೊಂಡೆವು. ನಿಂತನೆಲ, ಮೇಲಿನ ಆಕಾಶ, ಕಾಣುವ ವನ ವಿಪಿನ ಬೆಟ್ಟ ಪರ್ವತಗಳು, ಹರಿಯುವ ಹೊಳೆ, ಬೆಳೆಯುವ ಬೆಳೆ ಎಲ್ಲವೂ ಎಲ್ಲರದು ಅಥವಾ ಯಾರದೂ ಅಲ್ಲ. ಇದು ವಿಚಿತ್ರವಾಗಿ ಕೇಳಿಸಿದರೂ ಸತ್ಯವೂ ಹಾಗೆಯೇ ಇದೆ. ಭಗವಂತನೇ ಸರ್ವೋತ್ತಮ ಸಾಮಾನ್ಯ ವ್ಯಕ್ತಿಯಾಗಿರುವಾಗ ಎಲ್ಲರೂ ಸಾಮಾನ್ಯರೇ ಆಗುತ್ತಾರೆ. ಯಾರಿಗೂ ಮೇಲರಿಮೆ, ಕೀಳರಿಮೆ ಸಲ್ಲದು. ಮತ, ಅಧಿಕಾರ, ಹಣ ಇತ್ಯಾದಿಗಳಾವುವೂ. ಅಸಾಮಾನ್ಯನನ್ನಾಗಿ ಮಾಡಲಾರವು. ಆದ್ದರಿಂದ ಕವಿಯು

'ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಿ'
'ಶ್ರೀ ಸಾಮಾನ್ಯ'ವೆ ಭಗವತ್ ಮಾನ್ಯಂ ;
'ಶ್ರೀ ಸಾಮಾನ್ಯ'ವೆ ಭಗವದ್ ಧನ್ಯಂ !
ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ದಿಟ್ಟ ಭಗವತ್ ಪ್ರೀತಿ!
ಸಾಮಾನ್ಯರೋ ನಾವು;
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ದೀಕ್ಷೆಯ ಕೊಳ್ಳಂ ನೀವೂ !
ಸರ್ವರಿಗಾಗಿಯೆ ಸರ್ವವ ತನ್ನಿಂ;
''ಸರ್ವರಿನೆನಗೆ ! ಸರ್ವರಿಗೆನ್ನಿಂ !
ಸರ್ವರಿಗಾಗಿಯ ಸರ್ವಂ!'' ಎನ್ನಿಂ
ಓ ಬನ್ನಿಂ, ಓ ಬನ್ನಿಂ
ಸಾಮಾನ್ಯದ ಪೂಜೆಗೆ ಶ್ರೀ ದೀಕ್ಷೆಯ ಕೊಳ್ಳಂ ![8]

ಎಂದು ಕರೆಯುತ್ತಾರೆ.

ಒಲುಮೆಯ ಬಾಳಿನ ನಲುಮೆಯ ಸೇವೆಯ ಶ್ರೀಸಾಮಾನ್ಯನ ಜೀವನ ಮಾರ್ಗವೂ ಆಗಿದೆ. ಶ್ರೀ ಸಾಮಾನ್ಯನನ್ನು ಯಾವುದೂ ಶೋಷಿಸಲಾರದು, ಭಕ್ಷಿಸಲಾರದು, ಹೆದರಿಸಲಾರದು ಎಲ್ಲರೂ ನನಗಾಗಿ, ನಾನು ಎಲ್ಲರಿಗಾಗಿ ಎನ್ನುವ ಆದರ್ಶವನ್ನು ಹಿಡಿದು ಬದುಕಬೇಕು. ಎಲ್ಲರೂ ಸಮಾನರು ಎನ್ನುವ ಸತ್ಯವನ್ನು ತಿಳಿದು ಬದುಕಬೇಕು ಎಂಬುವುದು ಈ ಕವಿತೆಯ ಆಶಯವಾಗಿದೆ. ಆದರೆ ಭಾರತದಲ್ಲಿ ಇದು ವಾಸ್ತವಕ್ಕೆ ಬಾರದ ಆದರ್ಶವಾಗಿದೆ. ಎನ್ನಿಸುವುದಿಲ್ಲವೆ. ಯೋಚಿಸಿ ನೋಡಿ ರಾಜಕಾರಣಿಗಳು, ಅಧಿಕಾರಿ ವರ್ಗ, ಕೋಟ್ಯಾಧಿಪತಿಗಳು ಹೇಗೆ ನಡೆದು ಕೊಳ್ಳುತ್ತಾರೆಂಬುದು ನಿಮಗೆ ತಿಳಿದಿದೆ. ಅವರಿಗೆ ಶ್ರೀಸಾಮಾನ್ಯ ಕಾಣಿಸುವುದೇ ಇಲ್ಲ. ಭಾರತವೂ ಕಾಣಿಸುವುದಿಲ್ಲ. ಲೋಕದ ಅಸಹನೀಯ ಕಷ್ಟ- ಸಂಕಟಗಳೂ ಕಾಣಿಸುವುದಿಲ್ಲ. ಇದಕ್ಕೆ ಪರಿಹಾರವನ್ನು ನೀವು ಸೂಚಿಸುವಿರಾ? ಎನ್ನುತ್ತಾರೆ ಕವಿ ಕುವೆಂಪು.

ಪ್ರತಿಯೊಂದು ಸಮಾಜದಲ್ಲಿ ಶ್ರೀಮಂತ ವರ್ಗ ಮತ್ತು ದಲಿತ ವರ್ಗ ಎಂಬ ಎರಡು ಗುಂಪುಗಳನ್ನು ಕಾಣಬಹುದು. ಪ್ರತಿ ರಾಷ್ಟ್ರಗಳ ಒಡಲಿನಲ್ಲೂ ಬಡತನದ ಬೊಕ್ಕೆಗಳು ಎಲ್ಲೆಂದರಲ್ಲಿ ಎದ್ದು ಒಡೆದೊಡೆದು ನೋವನ್ನು ಮಿಡಿಯುತ್ತಿವೆ ಯೆಂದರೆ ಅದು ನಿಜಕ್ಕೂ ಆದೇಶಗಳ ಅಧೋಗತಿಯ ಪ್ರತೀಕವೆಂದು ಹೇಳಬಹುದು. ಬಡತನವನ್ನೇ ಶೋಷಣೆಯ ಸಾಧನವಾಗಿಸಿಕೊಂಡ ಶ್ರೀಮಂತರು ಸುಖದ ಸಿಂಹಾಸನವನ್ನೇರಿ ಮೆರೆಯುತ್ತಾರೆ. ಇತಂಹ ಶ್ರೀಮಂತರ ರಕ್ತಸನ ಸಂಹಾರಕ್ಕಾಗಿ ಬಡತನದ ಕರಾಳ ರೌದ್ರರೂಪದ ಅವತಾರ ಅನಿವಾರ್ಯವಾಗುತ್ತದೆ. ಸುವ್ಯವಸ್ಥಿತ ಸಮಾಜದ ನಿರ್ಮಾಣ ಕಾರ್ಯಕ್ಕೆ ಕ್ರಾಂತಿ ಕಹಳೆ ಮೊಳಗಬೇಕಾಗುತ್ತದೆ. ರಕ್ತಪಾತವೂ ಅನಿವಾರ್ಯವಾಗುತ್ತದೆ.

ಬಡತನಕ್ಕೆ ಹತ್ತೆಂಟು ಕಾರಣಗಳಿರುತ್ತವೆ. ಕೆಲವು ಸ್ವಾರ್ಥಿಗಳು ಹಾಗೂ ತಾವು ಮೇಲು ಜಾತಿಯವರೆಂದು ಉಳಿದವರು ಕೀಳು ಜಾತಿಯವರೆಂದು ಹೇಳಿ ಅವರು ಸಮಾಜದ ಮೇಲು ಹಂತಕ್ಕೆ ಬಾರದಂತೆ ತುಳಿದಿರಬಹುದು ಅಥವಾ ತಾವು ಇತರ ವರ್ಗಗಳಿಗಿಂತ ಭಿನ್ನರೂ ಬುದ್ಧಿಜೀವಿಗಳೂ ಎಂಬುದಾಗಿ ಹೇಳಿ ಕೊಂಡು ಮುಗ್ಧ ಜನಸಮೂಹವನ್ನು ವಂಚಿಸಿ ಅವರನ್ನು ತಮ್ಮ ದಾಸರನ್ನಾಗಿ ನೇಮಿಸಿಕೊಂಡು ದುಡಿಸಿಕೊಂಡಿರಬಹುದು. ಮಳೆ, ಗಾಳಿ, ಚಳಿ, ಬಿಸಿಲುಗಳನ್ನು ಲೆಕ್ಕಿಸದೆ ದುಡಿದ ಬಡವನಿಗೆ ಹಿಡಿ ಕೂಳಿಗೆ ಗತಿಯಿಲ್ಲ. ಬೆಳೆ ಬೆಳೆಯುವವನು ಅವನೇ ಆದರೂ ಅದನ್ನು ಬಳಸಿಕೊಳ್ಳುವ ಅಧಿಕಾರ ಅವನಿಗಿಲ್ಲ ಮನೆಗಳನ್ನು ಕಟ್ಟಿಕೊಡುವ ಬಡವನಿಗೆ ವಾಸಿಸಲು ಮನೆಯಿಲ್ಲ. ಶ್ರೀಮಂತರಿಗಾಗಿ ದುಡಿದು ಬಡವ ಒಂದು ಕ್ಷುದ್ರ ಪ್ರಾಣಿಗಿಂತಲೂ ಕಡೆಯಾಗಿ ಬದುಕುತ್ತಿದ್ದಾನೆ ಹೊರತು ಮನುಷ್ಯನಾಗಿ ಅಲ್ಲ. ಆದರೆ ಅವನ ಹೃದಯದಲ್ಲಿ ಕುದಿಯುತ್ತಿರುವ 'ಲಾವಾ'ಸ್ಫೋಟಗೊಂಡರೆ? ಸ್ಫೋಟಗೊಳ್ಳುವವರೆಗೂ ಶ್ರೀಮಂತನಿಗೆ

ಅರಿವಿಲ್ಲ. ಸ್ಫೋಟಗೊಂಡ ಮೇಲೆ ಅರಿತುಕೊಳ್ಳುವುದಕ್ಕೂ ಅವನಿರುವುದಿಲ್ಲ. ಕಲಿಯುಗದಲ್ಲಿ ವಿಷ್ಣುವಿನ ಅವತಾರವೆಂದು ಹೇಳ ಬಹುದಾದರೆ ಅದು ಬಡವರ ಪ್ರತಿನಿಧಿಯಾಗಿ ಕಲ್ಕಿಯೇ ಹೊರತು ಬೇರೆ ಯಾವ ರೂಪವು ಅಲ್ಲ ಎಂಬುದನ್ನು ಕುವೆಂಪು ಅವರ ಸಮಕಾಲೀನ ಕಾಂತ್ರಿಕಾರಿ ಕವನ 'ಕಲ್ಕಿ' ಅತ್ಯಂತ ಮಾರ್ಮಿಕವಾಗ ಚಿತ್ರಿಸಿದೆ ಕ್ರಾಂತಿದರ್ಶಿ ಕಲಿಯು ಕಂಡ ಕನಸಿನ ರುಪದಲ್ಲಿ 'ಕಲ್ಕಿ' ನಿರೂಪಿತವಾಗಿರುವುದಲ್ಲದೆ ಬಡಜನತೆ ಸಿಡಿದೆದ್ದರೆ ನಡೆಯಬಹುದಾದ ಪರಂಪರೆಯನ್ನು ಸಾಂಕೇತಿಕವಾಗಿ ಹೇಳವಲ್ಲಿ ಕವಿತೆ ಯಶಸ್ವಿಯಾಗಿದೆ. [9] ಎಂಬುದನ್ನು ಪಿ.ಕೆ. ರಾಜಶೇಖರ ಬಹಳ ಚೆನ್ನಾಗಿ ಗುರುತಿಸಿದ್ದಾರೆ.

ಅನಂತವಾದ ವನ ವಿಸ್ತೀರ್ಣದಲ್ಲಿ ಕಿಕ್ಕಿರಿದ ಹೆಮ್ಮರಗಳಲ್ಲಿ ಮುಳ್ಳಿನ ಪೊದೆಗಳ ನಡುವೆ ಕತ್ತಲು ಅಲ್ಲದ ಬೆಳಕೂ ಇಲ್ಲದ ಅರಣ್ಯದಲ್ಲಿ ಸಂಚರಿಸುತ್ತಿದ ಕವಿಗೆ ದಾರಿತಪ್ಪುತ್ತದೆ. ಶ್ಮಶಾನ ಮೌನದ ಆ ಕಾಡಿನಲ್ಲಿ ದಾರಿ ಹುಡುಕತ್ತ ಮುಗಿಲು ಮುಟ್ಟಿ ನಿಂತಿದ್ದ ಶಿಖರದ ಈ ತುದಿಗೆ ಬಂದು ನಿಂತು ಸುತ್ತಲು ನೋಡುತ್ತಿರುವಾಗ ಆ ಸ್ವಪ್ನ ಪ್ರಪಂಚದಲ್ಲಿ ಅವರಿಗೊಂದು ಊರು ಕಾಣುತ್ತದೆ. ಆ ಊರು ಒಂದು ಮಾಯಾನಗರಿ

ಧನಿಕರ ಮನೆಗಳು ಒಂದೆಡೆ ನಿಂತಿವೆ,
ಬಡವರ ಗುಡಿಸಲು ಬಂದೆಡೆ ನಿಂತಿವೆ
ಜ್ಯೋತಿಯ ಮಣಿದೀಪಗಳಲ್ಲಿ;
ಕತ್ತಲು, ಕಗ್ಗತ್ತಲು ಇಲ್ಲಿ!
ಹಾಡಿನ ನುಣ್ದನಿಯತ್ತ,
ಗೋಳಿನ ನೀಳ್ದನಿಯಿತ್ತ
ಕೂಳನು ಹೆಮ್ಮೆಗೆ ಬಿಸುಡುವರಲ್ಲಿ,
ಹೊಟ್ಟೆಗೆ ಇಲ್ಲದೆ ಕೊರಗುವರಿಲ್ಲ!
ಆ ಕಡೆ ಉದ್ಯಾನ,
ಈ ಕಡೆ ಶ್ಯಶಾಸ! [10]

ಊರು ಒಂದೇ ಆದರೂ ರೀತಿ ಎರಡು ನೋಡುತ್ತ ನಿಂತಿದ್ದ ಕವಿ ಬೆಚ್ಚಿ ಬೀಳುವ ಘಟನೆ ನಡೆದು ಹೋಗುತ್ತದೆ ಬಡಬಗ್ಗರ ಜಠರಾಗ್ನಿಯು ಎದ್ದು ಗುಡಿಸಲುಗಳಿಗೇ ಬೆಂಕಿ ಬಿದ್ದು ಧಗ ಧಗ ಎಂದು ಕಿಚ್ಚು ಮುಗಿಲಿನವರೆಗೆ ಆವರಿಸಿತೆಂದ ಮೇಲೆ ಶ್ರೀಮಂತರನ್ನು ಬಿಡುತ್ತದೆಯೇ? ಬಡವರ ಬೆಂಕಿಯ ನಾಲಿಗೆ ಚಾಚಿ ಸೊಕ್ಕಿ ಮೆರೆದ ಸಮಾಜ ಘಾತಕರ ಶ್ರೀಮಂತರ ಸೌಧಗಳ ಸುಟ್ಟಿ ಶಿಖರದ ಮೇಲೆ ನಿಂತ ಕವಿಗೂ ತಟ್ಟಿತು ಬೆಂಕಿಯ ಜ್ವಾಲೆ. ಅದರಲ್ಲಿ ಶ್ರೀಮಂತರು ಮಕ್ಕಳು, ಹೆಂಗಸರು, ಬಡವರ ಹಸಿವೆಗೆ ಮೌಢ್ಯವನ್ನು ತುಂಬಿದ

ಮಹಾನುಭಾವರು, ಗುರುಗಳು, ಶಿಷ್ಯರು, ಮನೆಗಳು, ಮಠಗಳು ಎಲ್ಲರೂ ಬಡವರ ಬಗ್ಗರ ಜಠರಾಗ್ನಿಗೆ ತುತ್ತಾದರು "ಬಡವನೆ ಕಲಿಯುಗದಂತ್ಯದ ಕಲ್ಕೀ" ಎಂಬ ತೀರ್ಮಾನಕ್ಕೆ ಬಂದ ಕವಿ ಮತ್ತೊಂದು ಕಡೆ ತಿರುಗಿದರೆ ಅಲ್ಲಿ ಕೆಂಡದಂತಾ ಭಯಾನಕ ದೃಶ್ಯ, ರಕ್ತದ ಜಲಪಾತ! ನರಮಾಂಸದ ನಾತ! ಧಮುಕುತ್ತಿರುವ ರಕ್ತ ಪ್ರವಾಹದಲ್ಲೂ ನರರ ಆರ್ತಧ್ವನಿ, ಹಾಹಾಕಾರ, ಚೀತ್ಕಾರ! ನರರ ರುಂಡಗಳು, ಮುಂಡಗಳು ಬಿಸಿನೆತ್ತರು, ಸಿರಿವಂತರ ನೆಣದುಂಡೆಗಳು ಸುಂದರಿಯರ ತಲೆಮಂಡೆಗಳು,ಪಾಪ ಪುಣ್ಯದ ದೇಹಗಳು, ಗುಡಿ ಗೋಪುರಗಳು ಧರ್ಮದ ಗೇಹ ಎಲ್ಲವು ಕಸಕಡ್ಡಿಯ ರೀತಿಯಲ್ಲಿ ತೇಮಿತ್ತಿದ್ದವು ಇಂತಹ ರಕ್ತಪಾತದ ಕಡೆಗೆ ನುಗ್ಗಿ ಬರುತ್ತಿದ್ದ ಕಲ್ಕಿಯ ಚಿತ್ರ ಭಯಾನಕ

ಅಸ್ಥಿಪಂಜರದಶ್ವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ
ಅಸ್ಥಿ ಪಂಜರದಾಳವನು!
ಪ್ರೇತ ಸ್ವರೂಪಿ ಆದಾರವನು?
ಬಲಗಡೆ ಕೈಯಲಿ ಮಿಂಚಿನ ಕತ್ತಿ!
ಎಡಗಡೆ ಕೈಯಲಿ ಸಿಡಿಲಿನ ಬುತ್ತಿ!
ಎಲುಬಿನ ಕುದುರೆ! ಎಲುಬಿನ ಆಳು !
ಇವನೆಯೆ ಕಲ್ಕಿ? ಬಡವರ ಗೋಳು !
ಮೂರ್ತಿವೆತ್ತಿಹ ಬಡವರ ಗೋಳು!
ನೋಡುತಲಿದ್ದೆ,
ಕೇಳುತಲಿದ್ದೆ!
" ಹಸಿವೇ! ದಾಹಾ!" ಎನ್ನುತ ಬಂದು,
"ರಕ್ತಾ! ರಕ್ತಾ! ರಕ್ತಾ!" ಎಂದು[11]

ಹೀಗೆ ಬರುತ್ತಿರುವನೇ ಕಲ್ಕಿ ಅವನು ಬಡವರ ಪ್ರತಿನಿಧಿ ಬಡವರ ಬಾಳು, ಮೂರ್ತಿವೆತ್ತಿರುವ ಬಡವರ ಗೋಳು, ಹಸಿವೇ! ದಾಹ! ರಕ್ತಾ ರಕ್ತಾ ರಕ್ತಾ! " ಎಂದು ಅಬ್ಬರಿಸುತ್ತ ಬಂದ ಅವನು ನೆತ್ತರ ಹೊಳೆಯಲ್ಲಿ ಕುದುರೆಯೊಡನೆ ಧುಮ್ಮಿಕ್ಕಿದ.

"ಕುಡಿದನು ರಕ್ತವ ಮೊಗೆದು
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯೂ ಕೆನೆಯುತ್ತಿತ್ತು;
ನಾದವು ಬೊಮ್ಮವ ಬಿರಿವಂತಿತ್ತು!

ಎಲುಬಿನ ಮೂರ್ತಿಯು ಗಹಗಹಿಸಿತ್ತು;
ಗುಡುಗಿನ ಮಾಲೆಯೆ ಪೊರಮಡುತಿತ್ತು!
ಕುದುರೆಯು ಕುಡಿದೂ, ಆಳೂ ಕುಡಿದೂ,
ತಿಂದರು ಶವಗಳ ಲರಿಲರಿ ಕಡಿದೂ
ಬತ್ತಿತು ರಣಧುನಿ: ಇನ್ನೂ ದಾಹ !
ಮುಗಿದುವು ಹೆಣಗಳು: ಇನ್ನೂ ಹಸಿವೆ !
ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ [12]

ಬಡವರ ಹೊಟ್ಟೆಯ ಬೆಂಕಿ, ಬಡವರ ಗಂಟಲು ಬೇಗೆ ಎಷ್ಟೇ ತಿಂದರೂ ಎಷ್ಟೇ ಕುಡಿದರೂ ಅತೃಪ್ತಿ.

ಅದು ಎಂದೆಂದೂ ಆರದ ಬೆಂಕಿ ಎಂದೆಂದೂ ನೀಗದ ಬೇಗೆ ಕಲ್ಕಿಯ ದೃಷ್ಟಿ ಈಗ ಶಿಖರದ ಮೇಲೆ ಪ್ರೇಕ್ಷಕನಾಗಿ ನಿಂತಿರುವ ಕವಿಯ ಕಡೆಗೆ ಹರಿಯುತ್ತದೆ. ಅವನು ನುಗ್ಗಿ ಬರುವುದನ್ನು ಕಂಡು ತತ್ತರಿಸಿ ಹೋದ ಕವಿ ಕಂಪಿಸಿ " ಕಲ್ಕಿ! ಕಲ್ಕಿ!" ಎಂದು ಚೀರಿ ಕನಸೊಡೆಯುತ್ತದೆ. ಈ ಬಗೆಯ ರುದ್ರಬೀಕರ ಸ್ವಪ್ನವನ್ನು ಕಂಡು ನಿದ್ರೆಯಿಂದೆಚ್ಚತ್ತ ಕವಿಯ ಹೃದಯದಲ್ಲಾದ ಪರಿಣಾಮದ ಅಭಿವ್ಯಕ್ತಿ ಧ್ವನಿಪೂರ್ಣವಾಗಿ ಹೊಮ್ಮಿರುವುದನ್ನು ಈ ಹಿಂದೆ ತೀನಂಶ್ರೀಯವರು ತಮ್ಮ ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಗುರುತಿಸಿ ವ್ಯಾಖ್ಯಾನಿಸಿದ್ದಾರೆ.

"ಕಲ್ಕಿ! ಕಲ್ಕಿ!" ಎನ್ನುತ್ತ ಚೀರಿ
ಕನಸೊಡೆದೆದ್ದೆ!
ಇನ್ನೆಲ್ಲಿಯ ನಿದ್ದೆ?[13]

ಎಂಬ ನುಡಿಯಲ್ಲಿ ಕಲ್ಕಿಯು ಕವಿಯಿದ್ದೆಡೆಗೆ ನುಗ್ಗಿ ಬಂದಾಗ ಕವಿ ಚಿಟ್ಟನೆ ಚೀರಿ ನಿದ್ದೆಯಿಂದ ಎಚ್ಚೆತ್ತನು; ಕನಸು ಒಡೆಯಿತು, ಭಯಂಕರ ಕನಸನ್ನೂ ಕಂಡದ್ದರಿಂದ ಇನ್ನು ನಿದ್ರೆ ಬರುವುದಾದರೂ ಹೇಗೆ ಎಂಬುದು ಇಲ್ಲಿಯ ವಾಚ್ಯಾರ್ಥ ಇದು ಸಂದರ್ಭಕ್ಕೆ ಹೊಂದಿದರೂ ಇಷ್ಟಕ್ಕೆ ವಾಕ್ಯದ ಅರ್ಥವೆಲ್ಲ ಮುಗಿದಿದ್ದರೆ ಈ ಉಜ್ವಲವಾದ ಕವನಕ್ಕೆ ಸಪ್ಪೆಯಾದ ಮುಕ್ತಾಯವಾಗುತ್ತಿತ್ತು ಕನಸಿನ ವೃತ್ತಾಂತವನ್ನೆಲ್ಲಾ ಅನುಶೀಲನ ಮಾಡಿಕೊಂಡು ಬಂದವರಿಗೆ ಇಲ್ಲಿ ಉದಾತ್ತವಾದ ಬೇರೊಂದು ಅರ್ಥ ನಿಸ್ಸಂದೇಹವಾಗಿ ಧ್ವನಿತವಾಗುತ್ತದೆ. ಇಲ್ಲ "ನಿದ್ದೆ" ಎಂದರೆ ನಿಜವಾಗಿ "ಮನಸ್ಸಿನ ನೆಮ್ಮದಿ" ಜಗತ್ತಿನ ವಿಷಯ ಸ್ಥಿತಿಯನ್ನು ಕಲ್ಕಿಯ ರೂಪದಲ್ಲಿ ಹೊಸದಾಗಿ ದರ್ಶನ ಪಡೆದ ಕವಿಗೆ ಇನ್ನು ಮನಸ್ಸು ನೆಮ್ಮದಿಯಾಗಿ ನಿಶ್ಚಿಂತೆಯಾಗಿ ಉಳಿಯುವುದೆಲ್ಲಿ ಬಂತು! ಇದುವರೆಗೆ ಕನಸಿನ ನಾಡಿನಲ್ಲಿ ವಿಹರಿಸುತ್ತಿದ್ದವನ ಕಣ್ಣಿಗೆ ಲೋಕದ ದುಃಖ ದುರಿತಗಳ ಸ್ವರೂಪ ಚನ್ನಾಗಿ

ಕಟ್ಟಿತು ಸ್ವಚ್ಛಂದವಾಗಿದ್ದ ಮನಸ್ಸು ಕದಡಿ ಹೋಯಿತು! ಇದೇ ಕಲ್ಕಿಯ ವಸ್ತು ಧ್ವನಿ

'ಕಲ್ಕೀ' ಕವಿತೆ ಒಂದು ರೀತಿಯಲ್ಲಿ 'ಕಾಲಜ್ಞಾನ' ದಂತಿದೆ ಎಂದು ಹೇಳಬಹುದು ಶ್ರೀಮಂತರು ಬಡವರನ್ನು ಬೇಕಾಬಟ್ಟೆ ಗೋಳು ಹೊಯ್ದುಕೊಳ್ಳುತ್ತಿದ್ದರೆ ಮುಂದೆ ಸಂಭವಿಸಬಹುದಾದ ಅನಾಹುತದ ಎಂಥದಿರಬಹುದು ಎಂಬುದರ ಮುನ್ನುಡಿಯಂತಿದೆ.

ಹೊಸ ದೃಷ್ಟಿಕೋನದಿಂದ ರಷ್ಯಾ, ಜಪಾನ್, ತುರ್ಕಿಗಳೆಲ್ಲವೂ ತಮ್ಮ ಹಳೇಯ ಕಂದಾಚಾರ ಮೌಢ್ಯತೆಗಳನ್ನು ಕಳಚಿ ಹೊಸಪಯಣಕೆ ಹೊಸ ದಾರಿಯಲ್ಲಿ ಹೊರಟಿವೆ ತಮ್ಮ ಜ್ಞಾನದ ಹೊಸ ಬೆಳಕಿನಲ್ಲಿ ಹೊಸ ಬದುಕನ್ನೂ ಕಟ್ಟಿಕೊಳ್ಳುತ್ತಿದ್ದಾರೆ ಹಳೇಯ ಕೊಳಕು ಬಣಗು ತೃಣಕೆ ಬೆಂಕಿ ಇಟ್ಟು ಸುಟ್ಟಿ ರಾಷ್ಟ್ರಿಕರಣಕ್ಕೆ ಮನಸ್ಸು ಮಾಡಿ ಸೋದರರರೆ ಬೇಗ ಬನ್ನಿ. ನಮ್ಮದು ಶೇಷ್ಟ ಮತವೆಂಬ ಅಜ್ಞಾನಕ್ಕೆ ಸಿಲುಕದೆ ಲೋಕದ ಹಿತಕೋಸ್ಕರ ದುಡಿಯುವ ಸದ್ಬುದ್ಧಿ ನಮ್ಮದಾಗಬೇಕು ಆಮತ ಈ ಮತ ಎಂಬ ಸಹವಾಸದಿಂದ ಹೊರ ಬಂದು ನಾವೆಲ್ಲರು ಒಂದೇ ಮತದವರು ಅಮತ ಯಾವುದೆಂದರೆ ಅದೇ 'ಮನುಜಮತ' ನಮ್ಮೆಲರ ದಾರಿಯಾವುದೆಂದರೆ ಅದು 'ವಿಶ್ವಪಥ' ಎಂಬ ಐಕ್ಯತೆಯ ಸಂದೇಶವನ್ನು ಸಾರಿದ್ದಾರೆ.

ಶ್ರೀಮಂತರ ಶೋಷಣೆ, ದಾರಿದ್ರ್ಯಭಾರ ವರ್ಣ ವರ್ಗವ್ಯವಸ್ಥೆಗಳ ತುಳಿತಗಳಿಗೆ ಸಿಲುಕಿದವರಿಗೆ ತಿಳಿವುಹೇಳಿ ಹುರಿದುಂಬಿಸುವ ಪ್ರಯತ್ನವನ್ನು ಕವಿ ಹೊಸಬಾಳಿನ ಗೀತೆ ಕವನದಲ್ಲಿ ಮಾಡಿದ್ದಾರೆ . ಸಮಕಾಲೀನ ಪ್ರಜ್ಞೆಯ ಕುರುಹಾಗಿರುವ ಸರ್ವೋದಯ ಸಮಾನತೆಯ ಕವನಗಳಲ್ಲಿ ಇದು ಒಂದು.

''ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ! [14]

ಯುಗಯುಗದಿಂದ ಶ್ರೀಮಂತರ ಶೋಷಣೆಗೆ ಒಳಗಾಗಿ ದಾರಿದ್ರ್ಯದಿಂದ ಕುಸಿದು ಕುಗ್ಗಿದ ಬಡಜನರಿಗೆ ಬದಲಾಗುತ್ತಿರುವ ಸಮಕಾಲೀನ ಸಂದರ್ಭದ ಸಂತಸದ ಸುದ್ಧಿಯನ್ನು ತಿಳಿಸುತ್ತಿದ್ದಾರೆ ರಾಜಪುಭುತ್ವದ ಕಾಲ ಮುಗಿದು ಪ್ರಜಾಪ್ರಭುತ್ವದ ಕಾಲ ಬಂದಿದೆ. ಹಣದ ಬಲದಿಂದ ಜಾತಿಯ ಬಲದಿಂದ ನೀತಿ ನಿಯಮಗಳನ್ನು ಬದಲಾಯಿಸುತ್ತಿದ ಕಾಲವು ಅಳಿದು ಬುದ್ಧಿವಂತಿಕೆಯು ಆಜಾಗವನ್ನು ತುಂಬಿಕೊಂಡು ಹಿಂದಿನ ಸಂಪ್ರದಾಯಗಳನ್ನು ತಿದ್ದಿ ನಮಗೆ ಬೇಕಾದ ನಾಕವನ್ನು ಸೃಷ್ಟಿಸಿಕೊಳ್ಳವ ಕಾಲ ಬಂದಿದೆ. ನಾವು ಕೈಲಾಗದವರು ನಾವು ಜಾತಿಯಲ್ಲಿ ಕೀಳು ನಮ್ಮ ಹಣೆಬರಹವೇ ಇಷ್ಟು ಈ ರೀತಿಯ ಮೌಢ್ಯತೆಯಿಂದ ಹೊರಗೆ ಬಂದು ಬದಲಾಗುತ್ತಿರುವ ಸಮಾಜದ ಜೊತೆ ನಾವು ಸೇರಿ ಸರ್ವರ ಉದ್ಧಾರಕ್ಕೆ ದುಡಿಯಬೇಕಾದ

ಅನಿವಾರ್ಯತೆಯನ್ನು ತಿಳಿಸುತ್ತಾರೆ ನಮ್ಮ ಶ್ರಮದ ಫಲವನ್ನು ಬೇರೆಯುವರು ಅನುಭವಿಸಲು ಬಿಡದೆ ಬೇರೆಯವರ ತಂತ್ರಗಳಿಗೆ ಬಲಿಯಾಗದೆ ಎಚ್ಚರವಹಿಸುವುದು ಅನಿವಾರ್ಯವಾಗಿದೆ.

ಈ ಹೋರಾಟದ ದಾರಿಯಲ್ಲಿ ಇಂದು ನಮಗೆ ನೋವಾದರೂ ಸರಿ ಅಥವಾ ನೆತ್ತರನ್ನು ಚೆಲ್ಲಿ ಸಾವಾದರೂ ಸರಿ ಮುಂದಿನ ನಮ್ಮ ಮಕ್ಕಳಿಗೆ ಪ್ರಾಥಮಿಕ ಅವಶ್ಯಕ ತೆಗಳಾದ ಅನ್ನ ಬಟ್ಟೆಗಳನ್ನು ನೀಡಿ ಅವರ ಮುಂದಿನ ಬಾಳು ನೆಮ್ಮದಿಯಿಂದ ಕೂಡಿರಬೇಕು . ಇಂದು ನಾವು ಈ ಹೋರಾಟಕ್ಕೆ ಮುಂದಾಗದಿದ್ದರೆ ನಾವುಗಳು ಎಂದೆಂದಿಗೂ ಹೇಡಿಗಳಾಗುತ್ತೇವೆ. ಇದು ಸುಸಂದರ್ಭ

''ಇಂದು ರಕ್ತದ ಬಿಂದು ಮುಂದೆ ಸೌಖ್ಯ ಸಿಂಧು ''
ಎಂದು ಸಾಹಸಕೇಳಿ, ಹಿಂಜರಿಯ ಬೇಡಿ! [15]

ಎಂಬುದೇ ತರುಣರ ಹೊಸಬಾಳಿನ ಗೀತೆಯಾಗ ಬೇಕು ಎಂದಿದ್ದಾರೆ ಕುವೆಂಪು.

ಅಡಿ ಟಿಪ್ಪಣಿ

1. ಪರ್ಯಾಯ ಚಿಂತನೆ-ಉಪಭೋಗವಾದ ಲೇಖನ "ಹೆಗಲನ್ನೇರುವ ಪ್ರಯತ್ನ" ಮಾದವ ಮಾಳ ಪುಟ ಸಂಖ್ಯೆ - 225.
2. ಜನಪದ ವಿಚಾರ, ವೈಚಾರಿಕತೆ, ತಿಂಗಳ ಡೈಜೆಸ್ಟ್ ಸಂಪುಟ - 4, ಸಂಚಿಕೆ -1 2003, ಪು.ಸ. -30
3. ಹಾಳೂರು -ಕುವೆಂಪು ಸಮಗ್ರಕಾವ್ಯ- ಸಂಪುಟ-2 ಪುಟ ಸಂಖ್ಯೆ 733
4. ಹಾಳೂರು- ಕುವೆಂಪು ಸಮಗ್ರಕಾವ್ಯ -ಸಂಪುಟ -2 ಪುಟ ಸಂಖ್ಯೆ733
5. ಹಾಳೂರು - ಕುವೆಂಪು ಸಮಗ್ರ ಕಾವ್ಯ -ಸಂಪುಟ - 2 ಪುಟ ಸಂಖ್ಯೆ 733
6. ಬೆಕ್ಕು ಮತ್ತು ಇಲಿ - ಕೃತ್ತಿಕೆ, ಕುವೆಂಪು ಸಮಗ್ರ ಕಾವ್ಯ -ಸಂಪುಟ -1 ಪುಟ ಸಂಖ್ಯೆ 498.
7. ಮಾಯ ಮುಕ್ತಿ - ಕೃತ್ತಿಕೆ ಕುವೆಂಪು ಸಮಗ್ರ ಕಾವ್ಯ -ಸಂಪುಟ -1 ಪುಟ ಸಂಖ್ಯೆ 452.
8. ಕಲ್ಕಿ ಒಂದು ವಿವೇಚನೆ- ಪಿ.ಕೆ. ರಾಜಶೇಖರ- ಸಹ್ಯಾದ್ರಿ, ಪುಟ ಸಂಖ್ಯೆ 1043
9. ಶ್ರೀ ಸಾಮಾನ್ಯರ ದೀಕ್ಷಾ ಗೀತೆ -ಇಕ್ಷು ಗಂಗೋತ್ರಿ -ಸಂಪುಟ-2 ಪುಟ ಸಂಖ್ಯೆ 75
10. ಕಲ್ಕಿ -ಪಾಂಚಜನ್ಯ -ಕು.ಸ.ಕಾ.ಸಂಪುಟ - 1 ಪುಟ ಸಂಖ್ಯೆ 167
11. ಕಲ್ಕಿ- ಪಾಂಚಜನ್ಯ- ಕು.ಸ.ಕಾ.ಸಂಪುಟ - 1 ಪುಟ ಸಂಖ್ಯೆ 171
12. ಕಲ್ಕಿ -ಪಾಂಚಜನ್ಯ -ಕು.ಸ.ಕಾ.ಸಂಪುಟ-1 ಪುಟ ಸಂಖ್ಯೆ 172
13. ಕಲ್ಕಿ- ಪಾಂಚಜನ್ಯ -ಕು.ಸ.ಕಾ. ಸಂಪುಟ-1 ಪುಟ ಸಂಖ್ಯೆ 172
14. ಹೊಸಬಾಳಿನ ಗೀತೆ ಕೋಗಿಲೆ ಮತ್ತು ಸೋವಿಯಟ್ ರಷ್ಯಾ -ಕು.ಸ.ಕಾ.ಸಂ.-1 ಪುಟ ಸಂಖ್ಯೆ -373
15. ಹೊಸಬಾಳಿನ ಗೀತೆ ಕೋಗಿಲೆ ಮತ್ತು ಸೋವಿಯಟ್ ರಷ್ಯಾ -ಕು.ಸ.ಕಾ.ಸಂ.-1 ಪುಟ ಸಂಖ್ಯೆ -374

ಅಧ್ಯಾಯ - 5

ಮೌಢ್ಯ-ಸಂಪ್ರದಾಯಗಳ ವಿರುದ್ಧ ಆಕ್ರೋಶ

ಕುವೆಂಪು ಅವರ ಸಾಹಿತ್ಯವನ್ನು ಮೊದಲಿಂದ ಗಮನಿಸಿದ ಯಾರಿಗಾದರೂ ಅವರು ಮೂಢನಂಬಿಕೆಯ ಕಟ್ಟು ವಿರೋಧಿ ಎಂಬುದನ್ನು ಗುರುತಿಸುವುದು ಸಾಧ್ಯ. ದಯ್ಯ, ದೇವರು, ಶಕುನ, ಆಚಾರ ಭಾರತೀಯ ಜನ ಜೀವನದಲ್ಲಿ ಇವು ನಡೆಸಿದಂಥ ಹಾವಳಿ ಅಪಾರ ಅಮಾಯಕರಾದ ಅನಕ್ಷರಸ್ಥ ಹಳ್ಳಿಯ ಜನರಂತೂ ನಂಬಲಸದಳವಾದಂಥ ಶೋಷಣೆಗೆ ಒಳಗಾದುದನ್ನು ನಿಚ್ಚಳವಾಗಿ ಕಾಣುತ್ತೇವೆ. ಇದನೆಲ್ಲ ಕುವೆಂಪು ಅವರು ತಮ್ಮ ಜೀವನದುದ್ದಕ್ಕೂ ವಿರೋಧಿಸಿಕೊಂಡು ಬಂದರು. ವಿದ್ಯಾರ್ಥಿಯಾಗಿದ್ದಾಗಲೇ ಮಲೆನಾಡು ಯುವಕರ ಸಂಘವನ್ನು ಸ್ಥಾಪಿಸಿ ಅಲ್ಲಿನ ಜನರಲ್ಲಿ ಮನೆಮಾಡಿ ಕೊಂಡಿದ್ದ ಮೂಢ ನಂಬಿಕೆಗಳನ್ನು ಹೋಗಲಾಡಿಸಲು ಸತತ ಹೋರಾಟ ನಡೆಸಿದರು. ಅದರ ಫಲವನ್ನು ಇಂದಿಗೂ ಮಲೆನಾಡಿನ ಜನಜೀವನದಲ್ಲಿ ಗುರುತಿಸಬಹುದು. ಮಕ್ಕಳಿಗೆ ಹೆಸರಿಸುವುದರಿಂದ ಹಿಡಿದು ಮನೆಯ ಸ್ವಚ್ಛತೆ ಮತ್ತು ಧರಿಸುವ ಉಡುಪಿನವರೆಗೆ ಕುವೆಂಪು ಪ್ರಭಾವ ಮಲೆನಾಡಿನಲ್ಲಿ ಕೆಲಸ ಮಾಡಿದೆ. ಶ್ರೀ ಕುವೆಂಪು ಅವರು ತಮ್ಮ ತಾರುಣ್ಯದಲ್ಲಿಯೇ ತಮ್ಮ ಯುವಕರಿಗೆ ಕರೆಕೊಟ್ಟರು.

ಹೋಗುತಿದೆ ಹಳೆಕಾಲ, ಹೊಸ ಕಾಲ ಬರುತಲಿದೆ
ಬರುತಲಿದೆ ಹೊಸ ದೃಷ್ಠಿ ಹೊಸ ಬಯಕೆಗಳಲಿ
ಹೋಗುತಿದೆ ಹಳೆ ಬಾಳು, ಹೊಸ ಬಾಳು ಬರುತಲಿದೆ.
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಕೇಳಿ![1]

ನಮ್ಮ ಜನರು ಶತಶತಮಾನಗಳಿಂದ ಆರ್ಯರು ಹೇರಿದ ವರ್ಣಧರ್ಮದ ಅಡಿಯಲ್ಲಿ ಸಿಕ್ಕಿ ಸಿಕ್ಕಿ ನರಳಿದ್ದಾರೆ. ಮುಂದೆ ಅವು ಜಾತಿ, ಮತ, ಪಂಗಡಗಳಾಗಿ, ನಮ್ಮ ಸಮಾಜವನ್ನು ಛಿದ್ರ ಛಿದ್ರಗೊಳಿಸಿವೆ. ವೇದಶಾಸ್ತ್ರಗಳ ಹೆಸರಿನಲ್ಲಿ ಆಗಬಾರದ ಅನ್ಯಾಯಗಳು ಆಗಿ ಹೋಗಿವೆ. ಕುವೆಂಪು ಈ ವೇದ ಉಪನಿಷತ್ತುಗಳನೆಲ್ಲಾ ಓದಿದರು. ಅವುಗಳಲ್ಲಿರುವ ಲೋಕ ಕಲ್ಯಾಣ ಭಾವನೆಗಳನ್ನು ಒಪ್ಪಿಕೊಂಡರು. ಮಿಕ್ಕ ಸ್ವಾರ್ಥದ ಸೇರ್ಪಡೆಗಳನ್ನು ಖಂಡ ತುಂಡವಾಗಿ ನಿರಾಕರಿಸಿದರು.

ಆದುದರಿಂದ ವೇದಶಾಸ್ತ್ರಗಳನ್ನು ಪ್ರಮಾಣವಾಗಿ ತೆಗೆದುಕೊಳ್ಳಬೇಡಿರೆಂದು ಜನರಿಗೆ ವಿಶೇಷವಾಗಿ ಯುವಕರಿಗೆ ಕರೆ ನೀಡಿದರು.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?
ನಿನ್ನೆದೆಯೆ ದನಿಯೆ ಋಷಿ! ಮನು ನಿನಗೆ ನೀನು ! [2]

ಧರ್ಮಶಾಸ್ತ್ರವನ್ನು ಕುರಿತು ಕುವೆಂಪು ಅವರು ಅತ್ಯಂತ ನಿಶ್ಚಿತವಾದ ಅಭಿಪ್ರಾಯ ಹೊಂದಿದವರು. ಅಸ್ಪೃಶ್ಯತೆಯ ಪ್ರತಿಪಾದನೆಯನ್ನು ತಿರಸ್ಕರಿಸಿದರು. ಮನು ಧರ್ಮಶಾಸ್ತ್ರವನ್ನು ಬರೆದ. ಅವನು ತನ್ನ ಕಾಲದ ಮಿತಿಯಲ್ಲಿ ಬರೆದ ಜೊತೆಗೆ ಅವನೂ ಆರ್ಯನಾದುದರಿಂದ ವರ್ಗಧರ್ಮವನ್ನು ಎತ್ತಿ ಹಿಡಿದು ಬ್ರಾಹ್ಮಣಿಕೆಯನ್ನು ಪ್ರತಿಪಾದಿಸಿದ. ಆದರೆ ಈ ಜಾತಿ ಪಂಥವನ್ನು ಎತ್ತಿ ಹಿಡಿಯುವ ಭಾಗಗಳನ್ನು ಮನು ಬರೆಯಲಿಲ್ಲ. ಅವುಗಳು ಅನಂತರದ ಸೇರ್ಪಡೆ ಎಂಬವಾದವೂ ಇದೆ.

ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತಿರೆ
ದಡದಲ್ಲಿ ಮೀಯುತ್ತ ನಿಂತಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟು ಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?

ಈ ಪ್ರಜ್ಞೆಗೆ ಕವಿಯೇ ಸೂಕ್ತ ಉತ್ತರವನ್ನೂ ಹೇಳಿದ್ದಾರೆ.

ಅಂತು ಮನು ತಾನು ಹೇಳಿರಲಾರನಯ್ಯಯ್ಯೊ!
ಹೇಳಿದ್ದರವನನೂ ಶಾಸ್ತ್ರ ದೊಳೆಸುತ್ತಿ
ಸ್ವಗ ಹೋಗಲಿ, ಮತ್ತೆ ಸರಕ ಬಂದರು ಬರಲಿ
ಎದೆಯ ಧೈರ್ಯವ ಮಾಡಿ ಬಿಸುಡಾಚೆಗೆತ್ತಿ! [3]

ದೇವರು ಮತ್ತು ಆ ಹೆಸರಿನಲ್ಲಿ ನಮ್ಮ ಸಮಾಜದ ಮೇಲೆ ಪುರೋಹಿತ ವರ್ಗ ನಡೆಸಿದ ಅನ್ಯಾಯ, ಅತ್ಯಾಚಾರ ಮತ್ತು ಶೋಷಣೆ ಅಪಾರ. ವಾಸ್ತವಿಕವಾಗಿ ಈ ಜನರ ಆಂತರ್ಯವನ್ನು ಅರಿಯುವ ಶಕ್ತಿ ನಮ್ಮ ಸಮಾಜದ ಜನರಿಗೆ ಇದ್ದಿದ್ದರೆ ರಕ್ತ ಕ್ರಾಂತಿಯಾಗಬೇಕಾಗಿತ್ತು. ಆದರೆ ಈ ಜನರು ಯುಕ್ತಿಹೀನ ಭಾರತೀಯ ಅನಕ್ಷರಸ್ಥ ಬಡಜನರ ಮೇಲೆ ಕರ್ಮ ತತ್ತ್ವವನ್ನು ಹೇರಿಬಿಟ್ಟರು. ತಾವು ಮಾಡವ ಎಲ್ಲಾ ಬಗೆಯ ಅನ್ಯಾಯಗಳಿಗೂ ದೇವರನ್ನು ಮತ್ತು ಪೂರ್ವಜಿತ ಕರ್ಮವನ್ನು ಕಾರಣವಾಗಿ ಒಡ್ಡಿದರು. ಇದು ಎಲ್ಲಿಯವರೆಗೆ ಹೋಯಿತೆಂದರೆ ತನಗೆ ಆದ ಅನ್ಯಾಯಕ್ಕೆ ಯಾರು ಕಾರಣ ಎಂಬುದು ಎದುರಿಗೆ ಕಾಣುತ್ತಿದ್ದರೂ ಇದೆಲ್ಲಾ ನನ್ನ ಕರ್ಮಫಲ ಎಂದು ಆಕಾಶದ ಶೂನ್ಯತೆಯನ್ನು ನೋಡುವ ಮಟ್ಟವನ್ನು ತಲುಪಿತು. ಈ ಹೊತ್ತಿಗೂ ನಮ್ಮ ಸಮಾಜ ಅದರಿಂದ ಮುಕ್ತವಾಗಿಲ್ಲ. ಕುವೆಂಪು ಈ ಅನ್ಯಾಯವನ್ನು

ಪುರೋಹಿತಶಾಹಿಯನ್ನು ಉಗ್ರವಾಗಿ ಖಂಡಿಸಿದರು. ವಿರೋಧಿಸಿದರು. ಇದರಿಂದ ಅವರಿಗೆ ನಾಸ್ತಿಕ ಹಾಗೂ ಜಾತಿವಾದಿ ಪಟ್ಟವು ದೊರೆಯಿತು. ಆದರೆ ಅವರು ಜಗ್ಗಲಿಲ್ಲ. ಕುವೆಂಪು ದೇವರು ಅಥವಾ ಒಂದು ಶಕ್ತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡವರು. ಅವರು '' ಸೂರ್ಯೋದಯ ಚಂದ್ರೋದಯ ದೇವರದಯೆ'' ಎಂದವರು. ಬೆಟ್ಟ ದೇವತೆಗೆ ಪೂಜೆಗೆ ಹೊರಟಿದ್ದು ಪತ್ನಿಗೆ ಮನೆಗೆ ಬಿಕ್ಷೆಗೆ ಬಂದ ಮುದುಕಿಯನ್ನು ತೋರಿಸಿ ''ಮೊದಲನೆ ದೇವರು ಈ ಹೆಣ್ಣು ಮುದುಕಿ'' ಎಂದು ಹೇಳಿ ಆ ದೇವತೆಗೆಂದು ಮೀಸಲಾಗಿದ್ದ ಹಣ್ಣು ಕಾಯಿಗಳನ್ನು ಈ ಮುದುಕಿಗೆ ಕೊಡಿಸಿದವರು. ಆದುದರಿಂದ ಅವರು ನಾಸ್ತಿಕರೆಂದಾಗಲಿ, ಜಾತಿವಾದಿಗಳೆಂದಾಗಲಿ ಹೇಳುವವರು ಪರಮ ಮೂರ್ಖರೇ ಸರಿ ದೇವರನ್ನು ಕುರಿತು ಕುವೆಂಪು ಹೇಳುತ್ತಾರೆ.

ದೇವರು ಸೆರೆಯಾಳ್, ದೇಗುಲ ಸೆರೆಮನೆ,
ಕಾವಲು ಪೂಜಾರಿ
ನೀನಾವಾಗಲು ನನ್ನಯ ಬಳಿಯಿರೆ
ಬಲು ತೊಂದರೆ ಎಂದು
ಗಿರಿಶಿಖರದೊಳತಿದೂರದಿ ಕಟ್ಟಿದೆ
ಗುಡಿಯನು ನಿನಗೊಂದು
ಕಲ್ಲಿನ ಗೋಪುರ, ಕಲ್ಲಿನ ಗೋಡೆ,
ದುರ್ಗದವೊಲೆ ಬಲು ದುರ್ಗಮ ನೋಡೆ !
ಸೆರೆಯನು ತಪ್ಪಿಸಿಕೊಳ್ಳದ ತೆರದಲಿ
ಅರ್ಚಕ ರಕ್ಷೆಯಿದೆ;
ತೆಂಗಿನ ಕಾಯೊಳೆ ತಲೆಯನು ಬಡಿಯುವ
ಪೂಜೆಯ ಶಿಕ್ಷೆಯಿದೆ !
ಪುರಸತ್ತಾದರೆ ಕೆಲಸದೊಳಿಲ್ಲಿ
ಬೇಸರ ಪರಿಹಾರಕ್ಕೆ ಬಹೆನಲ್ಲಿ ! [4]

ಎಂದು ''ದೇವರು ಸೆರೆಯಾಳ್'' ಎಂಬ ಕವನದಲ್ಲಿ ತಿಳಿಸಿದ್ದಾರೆ.

ದೇವರು ಹೃದಯ ಮಂದಿರದಲ್ಲಿರ ಬೇಕೆಂದು ಋಷಿಗಳು, ಸಂತರು ಸಾರಿದರು. ಆದರೆ ನಮ್ಮ ಪುರೋಹಿತರು ದೇವರನ್ನು ತಮ್ಮ ಜೀವನಯಾಥನೆಯ ಸಾಧನವಾಗಿ ಮಾಡಿಕೊಂಡರು. ಆದಾಯ ಕಂಡ ಈ ಜನ ಹಾದಿ ಬೀದಿಯಲ್ಲೆಲ್ಲಾ ನೂರಾರು ದೇವರುಗಳನ್ನು ಹುಟ್ಟಿ ಹಾಕಿದರು. ಅಮಾಯಕ ಜನರನ್ನು ಸುಲಿಗೆ ಮಾಡಿದರು. ಆದುದರಿಂದಲೇ ಕವಿ ತನ್ನ ಜನರಿಗೆ ಕರೆಕೊಡುತ್ತಾರೆ.

ಕುವೆಂಪು ದೃಷ್ಟಿಯಲ್ಲಿ ದೇವರು ಲೋಕಕಲ್ಯಾಣಕಾರಿಯಾದ ಒಂದು ಶಕ್ತಿ. ಅದು ಹೃದಯ ಸಂವಾದಿ ಅವರು ತಮ್ಮ ಅನೇಕ ಪ್ರಾರ್ಥನಾ ಪದ್ಯಗಳಲ್ಲಿ ಇದನ್ನು ಹೇಳಿದ್ದಾರೆ. ಅವರ ಈ ಅಭಿಪ್ರಾಯವನ್ನು ಕುಹಕಿಗಳಾ ದ್ವಂದ್ವ ಎಂದೆಲ್ಲಾ ಟೀಕಿಸಲು ಯತ್ನಿಸಿದ್ದಾರೆ ಆದರೆ ಕುವೆಂಪು ಅವರಿಗೆ ದೇವರೆಂದರೇನೆಂಬ ಸ್ಪಷ್ಟಕಲ್ಪನೆ ಇದೆ.

ಸನಾತನ ಭರತ ಖಂಡದ ಅವನತಿಗೆ ಭಾರತೀಯರ ಮೌಢ್ಯಗಳೇ ಕಾರಣ. ಭಾರತೀಯರ ಆತ್ಮ ಪ್ರತ್ಯಯ ಆತ್ಮ ಗೌರವಗಳ ವಿನಾಶಕ್ಕೆ ಜಾತಿ ಮತಗಳ ಗೊಂದಲವೇ ಮೂಲ. ಮತದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ಅಸಂಖ್ಯಾತ ಮೂಢ ಸಂಪ್ರದಾಯಗಳೂ ಅರ್ಥ ಶೂನ್ಯವೂ ವಿಚಾರ ರಹಿತವೂ ಆದ ಹಲವಾರು ಶಾಸ್ತ್ರ ಪರಂಪರೆಗಳೂ ಬೆಳೆದು ದೇಶದ ಬಹುಭಾಗದ ಜನರನ್ನು ಅಜ್ಞಾನ ಕೂಪಕ್ಕೆ ದಾಸ್ಯದ ಪಂಕಕ್ಕೆ ಅಸ್ಪೃಶ್ಯತೆಯ ಕಗ್ಗತ್ತಲೆಗೆ ನೂಕಿದವು. ಜಾತಿ ಗರ್ವಾಂಧರ, ಶಾಸ್ತ್ರ, ಸಂಮೂಢರ ಹೇಯವರ್ತನೆ, ನೀಚಕರ್ಮಗಳು ಕವಿಯ ನಿರ್ಮಲಾಂತಃ ಕರಣವನ್ನು ಕಲಕಿ ಆತನು ನಿಷ್ಟುರ ಸತ್ಯವನ್ನು ಹೊರಗೆಡಹಿ ಶುಷ್ಕ ವೇದಾಂತಿಗಳ ಮೇಲೆ ಅಪಹಾಸ್ಯದ ಖಡ್ಗವನ್ನು ಎಸೆಯುವಂತೆ ಮಾಡಿರುವುದನ್ನು ಈ ಕವಿತೆಯಲ್ಲಿ ಕಾಣಬಹುದು.

ಉತ್ತರದ ರಾಜಸ್ಥಾನದಲ್ಲಿ ಘಜ್ನಿ ಮಹಮದನ ಹಣದಾಸೆಯಿಂದ ಯುದ್ಧದ ಪೈಶಾಚಿಕ ಕೃತ್ಯದಿಂದ ಗುಡಿಗಳೆಲ್ಲ ಬಿದ್ದು ಮಸೀದಿಗಳೆದ್ದವು. ಇದ್ದರಿಂದ ವೈಧಿಕರ ಶಾಂತಿ ಕದಡಿತು. ಆದರೂ ಗುಜರಾತಿನಿಂದ ಬಹುದೂರದಲ್ಲಿದ್ದ ಸೋಮನಾಥ ದೇವಾಲಯ ಸಾಕ್ಷಾತ್ ಕೈಲಾಸವೆಂಬಂತೆ ಲಕ್ಷ್ಮಿ ಸ್ವರಸ್ವತಿ ಪಾರ್ವತಿಯರೆಲ್ಲರು ವೈಧಿಕರ ಮಂತ್ರದ ಬಲದಿಂದ ಸುಖವಾಗಿದ್ದರು. ಘಜ್ನಿಯ ಕಣ್ಣಿಗೆ ತಾವು ಬೀಳುವುದೆಲ್ಲವೆಂದು ಮಂತ್ರಗಿಂತ್ರಗಳ ಪಠಿಸುತ್ತ ಆಲಸ್ಯದಿಂದಿದ್ದರು. ''ಆ ನಿಲಯದ ಪೂಜಾರಿಗಳು ದೇವರ ಸೋಮಾರಿಗಳು![5] ಒಂದು ದಿನ ತುರುಕರ ದಾಳಿಯ ಸುದ್ದಿ ತಿಳಿದು ನಡುಗಿತು ಪಾರ್ವರ ಶ್ರೀರುದ್ರಾಕ್ಷಿ, ತಲೆಗಾವರಿಸಿತು ಬೆಪ್ಪು ಒಡನೆ ಅರ್ಚಕರೆಲ್ಲ ಸೇರಿ ಮಂತ್ರಲೋಚನೆ ಮಾಡಿ ಶಾಸ್ತ್ರವನ್ನೆಲ್ಲ ಕೇರೀ ಸಂಶೋಧನೆ ನಡೆಸಿ ಕಡೆಗೊಬ್ಬ ಪೂಜಾರಿಗೆ ಸಿಕ್ಕಿತು ಭೀಷಣ ಮಂತ್ರ. ಅದಾವುದೆಂದರೆ 'ಧ್ರಾಂ ಧ್ರೀಂ ಧ್ರೂಂ! ಅಸ್ತ್ರಶಸ್ತ್ರಗಳನ್ನು ಸೇರಿಸದೆ ರಣದಾಳಗಳನ್ನು ಕೂಡಿಸದೇ ಮೌಢ್ಯದಿಂದ ಮಂತ್ರವೊಂದನೆ ನಂಬಿ, ಓ ಸೋದರರೆ ಬೆದರುವುದೇತಕೆ ಖಡ್ಗಗಿಡ್ಡಗಳ ನೆರವೂ ಏತಕೆ ಈ ಮಂತ್ರದ ಬಲವೊಂದೆ ಸಾಕೆಂದು ತಿಳಿದು ಒಂದೇ ಮಂತ್ರದಿಂದ ಎಲ್ಲರನ್ನು ಕೊಂದು ನಮ್ಮ ವೈದಿಕ ಧರ್ಮದ ಯುಕ್ತಿ, ಪುರೋಹಿತ ವರ್ಗದ ಭಕ್ತಿ ಮತ್ತು ಸುಧಾಕರ ಮೌಳಿಯ ಶಕ್ತಿಯನ್ನು ಮೆರೆಯೋಣ ಎಂದು ಪುರೋಹಿತರು ದೇವರಿಗೆ ಮಣಿದು ಹಿಗ್ಗಿದರು.

ಘಜ್ನಿಯ ದಾಳಿಯ ಸುದ್ದಿ ಬಂದೆ ಬಂದಿತು. ದಾಳಿಯ ಸದ್ದು ಅರ್ಚಕರನ್ನೆಲ್ಲ ನಡುಗಿಸಿತು. ಯೋಚಿಸುವುದಷ್ಟರಲ್ಲೇ ಬಂದೆರಗಿತು ಸೈನ್ಯ ವೀರ ಕರಾಳ ಭಯಂಕರ ಭಟರು. ಮೃತ್ಯುದೇವತೆಯ ಕೆಚ್ಚಿನ ನಟರು. ಖಡ್ಗ ಭಲ್ಲೆಗಳ ಸಮೆತ ಗುಡಿಗೆ ನುಗ್ಗಿ ಬಂದರು. ಆಗ ಶ್ರದ್ಧಾಪೂರ್ವಕ ಅರ್ಚಕರ ಹಿಂಡು ಮಂತ್ರಾಕ್ಷತೆಯನ್ನು ಕೈಯಲ್ಲಿಡಿದು ಒಕ್ಕೊರಲಿನಿಂದ ಧ್ರಾಂ ಧ್ರೀಂ ಧ್ರೂಂ ಮಂತ್ರ ಪಠಿಸಿದರು. ಗುಡಿಯ ಗೋಡೆಗಳು ಕಲ್ಲಿನ ಗೊಂಬೆಗಳ ಮಾರ್ದನಿಗೈಯ್ದವು. ಆದರೂ ತುರುಕರು ಮಡಿಯಲಿಲ್ಲ. ಸತ್ತರು ಪಾಪ ಪುರೋಹಿತರು. ಹೀಗೆ ಅವರ ಸಮಕಾಲೀನ ಸಂದರ್ಭದ ಮೂಢ್ಯತೆಯನ್ನು ತಮ್ಮ ಕವಿತೆಯ ಮೂಲಕ ಖಂಡಿಸಿದ್ದಾರೆ.

ಗುಡಿ ಹಾಳಾದರೆ ಏನಂತೆ?
ವೈದಿಕ ಧರ್ಮಕೆ ಅದೆ ಚಿಂತೆ?
ನಶ್ವರ ಕಾಂಚಾನ ಹೋದರೆ ಹೋಯಿತು!
ಮಂತ್ರದ ಸಾಮರ್ಥ್ಯವು ಸ್ಥಿರವಾಯಿತು!
ಎಂತನೆ,-ಮಂತ್ರಕೆ ಕುಂದೆಲ್ಲಿ?
ಅಖಿಲ ಮ್ಲೇಚ್ಛರು ಸತ್ತೇ ಸತ್ತರು !
ಬಹು ಕಾಲಾನಂತರದಲ್ಲಿ.[6]

ಈ ಕೊನೆಯ ಸಾಲುಗಳು ಎಷ್ಟು ಧ್ವನಿ ಪೂರ್ಣವಾಗಿದೆ

ಮತ್ತೊಂದು ಕವನ ದೇವರು -ಪೂಜಾರಿ ಭಗವದ್ಗೀತೆಯಲ್ಲಿ ಸಂಭವಾಮಿ ಯುಗೇ ಯುಗೇ ಎಂಬ ಮಾತಿದೆ. ಭೂಮಿಯಲ್ಲಿ ಅನ್ಯಾಯ ಹೆಚ್ಚಿದಾಗ ದೇವರು ಅದನ್ನು ಸರಿಪಡಿಸಲು ಅವತಾರವೆತ್ತುತ್ತಾನೆಂಬುದು ನಂಬಿಕೆ. ರಾಮ,ಕೃಷ್ಣ, ಬುದ್ಧ, ಬಸವ ಗಾಂಧಿ ಇವರೆಲ್ಲಾ ಹಾಗೆ ಬಂದವರೆಂಬುದು ನಂಬಿಕೆ. ದಿಗಂತದಿಂದ ದಿಗಂತಕ್ಕೆಗೆ ಹಬ್ಬಿದೆ ದೇಶದ ಸ್ಥಿತಿ.

ಹುಸಿಯಮತೆ
ಇಂದ್ರಿಯಲೋಲುಪತೆ
ಮೌಢ್ಯದ ಸಂತೃಪ್ತಿ
ಅಜ್ಞಾನದ ಸುಪ್ತಿ
ಭಕ್ತಿಯ ಹೆಸರನು ಧರಿಸುತೆ ಮೆರೆಯುವ ಚಿತ್ತದ ದಾಸ್ಯ;
ದೇವರ ಗುಡಿ ಎಂಬುವ ಸೆರೆಯಲ್ಲಿ
ಸ್ವಾತಂತ್ರ್ಯದ ಶವಸಂಸ್ಕಾರದ ಪರದೆಯ ಮರೆಯಲ್ಲಿ

ಪೂಜೆಯ ನಕಲಿಯ ಪರಿಹಾಸ್ಯ!
ಶಾಸ್ತ್ರದ ಆಚಾರದ ಧರ್ಮದ ಕಬ್ಬಿಣನೇಣು,
ಸಿಲುಕ್ಕಿಹುದದರಲ್ಲಿ ಮಾನವನಮೃತಾತ್ಮದ ಗೇಣು!
ನಿದ್ರೆಯ ಕದಡಿದೆ ಅವತಾರನ ತೂರ್ಯದವಾಣಿ;
ಕಂಪಿಸುತಿದೆ ಜಡತೆಯೂಳದ್ದಿದ ಕ್ಷೋಣಿ!
ದಕ್ಷಿಣ ಹಸ್ತದಿ ಪ್ರಜ್ವಲಿಸುತ್ತಿದೆ ಉರಿವಹಿಲಾಲು
ಕತ್ತಲೆಯನು ಕತ್ತರಿಸುವ ಬೆಂಕಿಯಕರವಾಳು!
ಮೌಢ್ಯ ಕಾನನಕೆ ಬೆಂಕಿಯ ಹೊತ್ತಿಸಿ
ತಿಮಿರ ಸಮುದ್ರವ ಶೋಷಿಸಿ ಬತ್ತಿಸಿ
ಪ್ರಸರಿಸಿ ಜ್ವಾಲಜ್ಯೋತಿಯ ನಡೆದಿರೆ ಅವತಾರನು ಮುಂದೆ. [7]

ಜನರು ಈ ಅವತಾರದ ಕ್ರಾಂತಿಯ ಬೆಂಕಿಯ ಬೆಳಕನ್ನು ಕಂಡು ಇನ್ನು ತಮ್ಮ ಕತ್ತಲೆ ಕಳೆಯಿತೆಂದು ಬೆಳಕಿನತ್ತ ನುಗ್ಗಿದರು. ಆದರೆ ಅಲ್ಲಿ ಅವರು ಕಂಡದ್ದೇನು? ಆಗಿದ್ದೇನು?

ಅದೊ ಹೊರಟನು ಪೂಜಾರಿಯು ಹಿಂದೆ
ಪಂಚ ಪಾತ್ರೆಯಲಿ ಪಾವನ ತೀರ್ಥವ ಬಂಧಿಸುತೆ
ವಂದನೆ ಆರಾಧನೆ ಅಭಿಷೇಕ ನೆವದಿಂದೆ
ಅವತಾರನು ಹೊತ್ತಿಸಿದುರಿಯನು ಅಗ್ರೋದಕದಿಂ ನಂದಿಸುತೆ
ಬೆಂಕಿಯನಾರಿಸಿ ಭೂದಿಯ ಮಾಡಿ
ಆ ಭೂದಿಯ ಮಹಿಮೆಯ ಕೊಂಡಾಡಿ.[8]

ಹೀಗೆ ಮಾನವ ಸಮಾಜದಲ್ಲಿನ ಶೋಷಕರ ಹಿಡಿತವನ್ನು ಇಷ್ಟು ಸಮರ್ಥವಾಗಿ ಕಂಡು ಚಿತ್ರಿಸಿದ ಮತ್ತೊಂದು ಉದಾಹರಣೆ ಅಪರೂಪ. ಇಲ್ಲಿ ಪೂಜಾರಿ ಸಮಾಜ ಕಂಠಕರ ಪ್ರತಿನಿಧಿ ಅಷ್ಟೆ. ನಮ್ಮ ಗಾಂಧೀತತ್ವದ ಬೆಂಕಿ ಆರಿ ಅದರಬೂದಿ ನಮ್ಮ ಜನರಿಗೆ ತಲುಪಿದ್ದು ಎಂಬುದು ನಮ್ಮ ಎದುರಿಗಿರುವ ಸತ್ಯ. ಕುವೆಂಪು ಅವರ ಮೇಲಿನ ಎರಡು ಕವನಗಳು ಅತ್ಯಂತ ಧ್ವನಿಪೂರ್ಣವಾಗಿದ್ದು ಇಂದಿಗೂ ಮುಂದೆಯೂ ನಮ್ಮ ಕಣ್ಣು ತೆರೆಸುವಂಥದಾಗಿವೆ.

'ಶ್ರೀ ಗೋಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥಂ' ಇದು ಕವಿಯ ಇನ್ನೊಂದು ಪ್ರಮುಖ ಪ್ರಗಾಥವಾಗಿದೆ. ಬಾಹುಬಲಿಯ ವಿಗ್ರಹಕ್ಕೆ ಜೀರ್ಣೋದ್ಧಾರವಾದ ತರುವಾಯ ನಡೆದ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ರಚಿತವಾದದ್ದು. ಆದಿಪುರಾಣದ ಕಂದ ಪದ್ಯಗಳು ಹಾಗೂ ವೃತ್ತವೊಂದನ್ನು ಯಥಾವತ್ತಾಗಿ ಕವಿ ಇಲ್ಲಿ ಬಳಸಿಕೊಂಡಿದ್ದಾರೆ. ವಿಗ್ರಹಕ್ಕೆ ಅದೂ ಬಾಹುಬಲಿಗೆ

ಜೀರ್ಣೋದ್ಧಾರ ಮಾಡುವ ಮನುಷ್ಯನ ಅವಿವೇಕವನ್ನು ಕವಿ ವಿಡಂಬಿಸುತ್ತಾರೆ.

ನಿನ್ನ ಜೀರ್ಣೋದ್ಧಾರಮಂ?
ನಗದಿಂ, ಮಹಾಗುರುವೆ; ನಮ್ಮದಿದು ಮತ್ತಾವಿವೇಕಂ!
ನಿತ್ಯ ನೂತನನಪ್ಪಿ ನೀಂ ಜೀರ್ಣನೆಂತಪ್ಪುಯಯ್?
ಸರ್ವಪರಿಪೂರ್ಣನಿಗೆ ನಿನಗೆ ಉದ್ಧಾರವೆಂದರರ್ಥವೇನಯ್? ಅಲ್ತಲ್ತು;
ನಿನ್ನ ಜೀರ್ಣೋದ್ಧಾರಮಲ್ತು
ನಿನ್ನ ಜೀರ್ಣೋದ್ಧಾರವೆಮ್ಮ ಜೀರ್ಣೋದ್ಧಾರವಾಗೆ ಆಶೀರ್ವದಿಸು ಬಾ! [9]

ಪ್ರಭುತ್ವದ ಅಟ್ಟಹಾಸದ ಎದಿರು ಸೆಟೆದು ನಿಂತ ಬಾಹುಬಲಿಯ ಪರಿಶುದ್ಧ ಜೀವನ, ತ್ಯಾಗ '' ಆತನ ಮೌಲ್ಯ ನಿಷ್ಠತೆ, ಸೌಹಾರ್ದತೆ, ಲೋಕ ಕಲ್ಯಾಣತ್ವ, ಆತನ ಸಮತಾಭಾವದ ಸರ್ವೋದಯದ ಗುಣಗಳು ನಮ್ಮ ನಾಡಿನ ಪ್ರತಿಯೊಬ್ಬ ಪ್ರಜೆಯ ಬದುಕಿನ ಕನವರಿಕೆಯಾಗಬೇಕು ಸಾಮ್ರಾಜ್ಯಶಾಹಿತ್ವವನ್ನು ಧಿಕ್ಕರಿಸಿದ ಬಾಹುಬಲಿ ಬುದ್ಧ ಬಿತ್ತಿದ ವಿಶ್ವಮಾನವತೆಯ ಸಂದೇಶವನ್ನು ಸಾರುವ ಸರ್ವಚೇತನ ಆಧ್ಯಾತ್ಮಿಕ ರೂಪ ಅದು ಅದಕ್ಕೆ ಜೀರ್ಣೋದ್ಧಾರ ಮಾಡುವುದು ಮನುಷ್ಯ ತಿಳುವಳಿಕೆಯ ಮಿತಿ ವಾಸ್ತವವಾಗಿ ಜೀರ್ಣೋದ್ಧಾರವಾಗಬೇಕಿರುವುದು ಅಗತ್ಯವಾಗಿ ಸಮಾಜಕ್ಕೆ ಎಂಬುದು'' ಕವಿಯ ಆಶಯ.

ವೃಷಭಾದ್ರಿಯಲಿ ನೆಲ ನಿಲ್ಲುವವರಿಗೂ ಶಾಶ್ವತವಾಗಿರಲೆಂದು ಭರತ ಬರೆಸಿದ ನಶ್ವರ ಪ್ರಶಸ್ತಿಯ ಕೀರ್ತಿಶನಿ ಅನೇಕ ವಿಧಗಳಲ್ಲಿ ನಮ್ಮ ಬಾಳನ್ನು ಇಂದಿಗೂ ಕದಡುತ್ತದೆ. ಹೇ ಪೂಜ್ಯ ಬಾಹುಬಲಿ, ಶಾಂತಿಯ ಕಲ್ಪತರುವೆ, ನಿನ್ನ ಧವಳ ಸತ್ವದಿಂದ ಸರ್ವಜನರ ಮನೋವೃಷಭಗಿರಿ ಬಿತ್ತಿಯಲ್ಲಿ ಚಿರಂತನವಾಗಿ ನೀನು ನೆಲಸಿದ್ದಿಯೊ.

ನಿನ್ನ ನೆನೆವುದೆ ನಮಗೆ ಚೇತನೋದ್ಬೋಧನಂ
ನಿನ್ನ ಪೂಜೆಯೇ ನಮಗೆ ಆಧ್ಯಾತ್ಮ ಸಾಧನಂ.........
ನೆಲಸು ನಮ್ಮರ್ದೆಗಳಲಿ ನಿನ್ನಾ ತಪೋರೂಪದಿಂ;
ಜ್ಯೋತಿಯೆಡಗೆತ್ತು ನಮ್ಮಾತ್ಮಂಗಳಂ ಸ್ವಾರ್ಥತೆಯ ಈ ತಮಃ ಕೂಪದಿಂ;
ಭೂಮವಾಗಲ್ ನಮ್ಮ ಚೈತನ್ಯ ಮದನುದ್ಧರಿಸು ಈ ಅಲ್ಪತ್ವದ ಭೀ
ಶಾಪದಿಂ!.....[10]

ಹೀಗೆ ಬಾಹುಬಲಿಯ ಆದರ್ಶ ಘನವ್ಯಕ್ತಿತ್ವವನ್ನು ಪಂಪನ ತರುವಾಯ ಮತ್ತೊಮ್ಮೆ ಕಡೆದು ರೂಪಿಸುತ್ತಲೇ. ಅಂತಹ ದಿವ್ಯ ದರ್ಶನದೆ. ಸತ್ಯರೂಪದ ಮೂಲಕ ಮನುಷ್ಯ ಕಂಡು ಕೊಳ್ಳಬೇಕಾದ ಮಾನವ ಘಟನೆಗಳ ಘನತೆಯ ಬಗ್ಗೆ ಎಚ್ಚರಿಸುತ್ತಾರೆ. ಚಾರಿತ್ರಿಕ ನಿದರ್ಶನಗಳ ಮೂಲಕ ವಾಸ್ತವದಲ್ಲಿ ಇದರ

ಅಗತ್ಯವನ್ನು ನಿರೂಪಿಸಿದ್ದಾರೆ. ಇದೇ 'ಹಿನ್ನೆಲೆಯಲ್ಲಿ 'ಧರ್ಮಸ್ಥಲ' ಎಂಬ ಕಾವ್ಯ ಕೂಡ ಬಹಳ ಮುಖ್ಯವೆನಿಸುತ್ತದೆ. ಈಶ್ವರನು ನಮ್ಮೆಲ್ಲರಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ.... ಮೌಢ್ಯವೇ ಈಶ್ವರನಿಂದೆ'' ಎಂದು ಹೇಳುತ್ತಿದ್ದ ಪುಟ್ಟಪ್ಪನವರು ಗುಡಿಗೆ ಗುಂಡಾರಗಳಿಗೆ ಹೋಗದೆ. ವಿಗ್ರಹಾರಾಧನೆ ಮಾಡದೆ. ಪ್ರಕೃತಿಯನ್ನು ಶಿವನೆಂದು ತಿಳಿದು ಅದನ್ನೇ ಧ್ಯಾನ ಮಾಡುತ್ತ ಆರಾಧಿಸಿದವರು. ಅದೊಂದು ಆಧ್ಯಾತ್ಮದ ಸಾಧನೆಯ ಪಥ. ಲೌಕಿಕ ನೆಲೆಗಳನ್ನು ಪ್ರೀತಿಯಿಂದ -ತಾಳ್ಮೆಯಿಂದ ಸಹ್ಯಗೊಳಿಸಿಕೊಳ್ಳುವ ಜೀವನ ಕಲೆ ಅದು. ಆದರೆ ಧರ್ಮ, ದೇವರು ಅದಕ್ಕೆ ಸಂಬಂಧಿಸಿದ ನಂಬಿಕೆ ಶ್ರದ್ಧೆಗಳು ವ್ಯಾಪಾರೀಕರಣ ಹೊಂದುವುದನ್ನು ಅವರು ಎಂದೂ ಸಹಿಸರು.

ಎಲ್ಲ ಮತ್ಸರವಳಿದು ಮೈತ್ರಿ ಮೂಡುವುದಲ್ಲಿ
ಮೂಡಿತೆಂದೇ ತಿಳಿಯೊ ಧರ್ಮಸ್ಥಲ.
ಸುಲಿಗೆ ವಂಚನೆ ಹಿಂಸೆಗಳನುಳಿದವನ ಮನವೆ
ಮಂಜುನಾಥನ ಮಂಚ, ಹೃದಯ ಕಮಲ ;

ನ್ಯಾಯ ಸಮ್ಮತವಲ್ಲ ಎಂಬುದದು ಸಮ್ಮತವಲ್ಲ;
ನ್ಯಾಯ ನರನದು; ಧರ್ಮ ಈಶ್ವರನದು.
ಹೆಮ್ಮೆಯನು ಬಿಡು, ಹಿರಿಯ ! ದಮ್ಮಯ್ಯನಿಡು ಜನಗೆ !
ನಿನ್ನಂತೆ ಸಂಸ್ಥೆಯೂ ನಶ್ವರವದು ! [11]

ಮೌಢ್ಯವನ್ನು ಬಿತ್ತಿ ಗಾಢಾಂಧಕಾರವನ್ನು ಬೆಳೆದು, ಭಗವಂತನನ್ನು ಸೃಷ್ಟಿಸಿ ಕಾಣಿಕೆಯ ಹೆಸರಿನಲಿ ಕೋಟಿ ಕೋಟಿ ಬಾಚಿಕೊಳ್ಳುತ್ತಿರುವ ಧಾರ್ಮಿಕ ಸಂಸ್ಥೆಗಳು ಈ ದಿನ ಸಮಾಜದಲ್ಲಿ ಅಸಮಾನತೆಯ ಅನ್ಯಾಯದ ಹೆಚ್ಚಳಕ್ಕೆ ಕಾರಣವಾಗಿವೆ.

ಈ ಧರ್ಮ ಸೃಷ್ಟಿಸಿರುವ ವಿಕಾರಕ್ಕೆ ಕೊನೆ ಮೊದಲಿಲ್ಲ. ಅದು ಗೈದಿರುವ ವಿದ್ರೋಹಗಳ ಸಾಲು ಸಾಲೇ ನಮ್ಮ ಮುಂದಿದೆ. ವರ್ತಮಾನದಲ್ಲೂ ಅದು ದೈತ್ಯ ನರ್ತನಗೈಯುತ್ತಿದೆ. ಪುರೋಹಿತಶಾಹಿ ವ್ಯವಸ್ಥೆ ಮತ್ತು ಪಂಚಾಂಗ ಈ ದೇಶದ ಖಳನಾಯಕರು ಎನ್ನುವ ಕವಿ ಜೀವ ವಿರೋಧಿಯಾದ ಸಾಂಸ್ಥಿಕ ಧರ್ಮವನ್ನು ಮತ್ತು ಧಾರ್ಮಿಕ ಸಂಸ್ಥೆಗಳನ್ನು ಧಿಕ್ಕರಿಸುತ್ತಾರೆ. ಅಲ್ಲದೆ ಧರ್ಮವೆನ್ನುವುದು ಜೀವಪರವಾದ ಒಂದು ಆಚಾರ. ಇದು ಸಕಲ ದೀನ ದಲಿತರ ಉದ್ಧಾರದ ಕ್ರಿಯಾತ್ಮಕ ರೂಪವಾಗಬೇಕೆಂದು ಅವರ ಹಂಬಲ. ಅದು ಅನಿಕೇತನ ತತ್ವದ ಸಾಕಾರ ರೂಪವೂ ಹೌದು ಅದಕ್ಕಾಗಿಯೇ.

ಧರ್ಮಕ್ಕೆ ಧರ್ಮ ಸಂಸ್ಥೆಗೆ ನಿಂದೆ ನನ್ನದಲ್ಲಿ!
ಧರ್ಮ ವೇಷದ ಅಧರ್ಮಕ್ಕೆ ಮುನಿದೆ
ನಿಜದ ಧರ್ಮಸ್ಥಳಕ್ಕೆ ನಿಜದಧರ್ಮಕೆ ಇದೇಕೊ
ಕೈ ಮುಗಿದೆ ಮಣಿದ ಹಿರಿದು ಕಿರಿದೆನದೆ''[12] ಎನ್ನುತ್ತಾರೆ.

ಮನುಷ್ಯ ಪರಿಸರವನ್ನು ವಿಕಾರಗೊಳಿಸಿರುವ ಜಾತಿ, ಮತಗಳು ಧರ್ಮದ ಉತ್ಪನ್ನಗಳು ಈ ಧರ್ಮ ಪುರೋಹಿತನೊಬ್ಬನ ಕೊಳಕು ಮನಸ್ಸಿನ ಸೃಷ್ಟಿ. ಇಲ್ಲಿಂದ ಪ್ರತಿಯೊಂದು ಸಾಂಸ್ಕೃತಿಕ ಕ್ರಿಯೆಗಳೆಲ್ಲವೂ ವ್ಯಾಪರಕ್ಕೆ ಒಳಗಾಗುತ್ತವೆ. ಕವಿ ಇದನ್ನು ವಿರೋಧಿಸುತ್ತಾರೆ ಬದಲಾಗಿ ದೈವ ಸಾಕ್ಷಾತ್ಕಾರಕ್ಕೆ ಯಾವ ಮಧ್ಯಸ್ಥಗಾರನ ಅವಶ್ಯಕತೆ ಇಲ್ಲವೆಂಬ ಉಪನಿಷತ್ತಿನ ಮಾತನ್ನು ಪ್ರತಿಪಾದಿಸುತ್ತಾರೆ. ತಮ್ಮ ಎರಡೂ ಕವಿತೆಗಳಲ್ಲೂ ಧರ್ಮಸ್ಥಳದ ಧಾರ್ಮಿಕ ಮೂಢನಂಬಿಕೆಯನ್ನು ಬಲವಾಗಿ ವಿಡಂಬಿಸಿದ್ದಾರೆ. ಶೋಷಣೆ ಮತ್ತುಮೌಢ್ಯಕ್ಕೆ ಧರ್ಮಸ್ಥಳ ಸಂಕೇತವೆನ್ನುತ್ತಾರೆ. ಮೂಢ್ಯ ಅನ್ಯಾಯದ ಅಕರಾಳ -ವಿಕರಾಳದ ಸ್ಥಿತಿ ಬೇರೆಲ್ಲೂ ನಡೆಯುತ್ತಿಲ್ಲ ದೇವಾಲಯಗಳು ಶೋಷಣೆಯ ತಾಣಗಳಾದರೆ ಮಠಾಧಿಪತಿಗಳು, ಪೂಜಾರಿಗಳು, ಪುರೋಹಿತರು ಅದರ ಏಜೆಂಟರಾಗಿದ್ದಾರೆ. ಇಂತಹ ವಿಷಮಸ್ಥಿತಿಯ ವಿರೋಧವನ್ನು ಈ ಕಾವ್ಯದಲ್ಲಿ ಕಾಣಬಹುದು.

ಓ, ಬನ್ನಿ, ಸೋದರರೆ, ಬೇಗ ಬನ್ನಿ : ಇದು ತುಂಬಾ ಜನಪ್ರಿಯವಾದ ಪ್ರಸಿದ್ಧವಾದ ಕವನ. ಶಾಲಾ ಕಾಲೇಜು ವಿದ್ಯಾರ್ಥಿಗಳು ಹಲವಾರು ಭಾವಗೀತ ಸ್ಪರ್ಧೆಗಳಲ್ಲಿ ಈ ಕವನವನ್ನು ಹಾಡಿ ಜನರಿಗೆ ಪರಿಚಯ ಮಾಡಿಕೊಟ್ಟಿದ್ದಾರೆ. ಆದರೆ ಅದರ ಸಂದೇಶವನ್ನು ಹಾಡಿದವರೂ ಮತ್ತು ಕೇಳಿದವರೂ ಎರಡು ಪಕ್ಷದವರು ಅರ್ಥಮಾಡಿ ಕೊಂಡರೋ, ಅನುಸರಿಸಿದರೋ ತಿಳಿಯದು. ಕುವೆಂಪು ಅವರಿಗೆ ಪ್ರಿಯವಾದ 'ಮನುಜ ಮತ; ವಿಶ್ವಪಥ' ಎಂಬುದು ಈ ಕವನದ ಆತ್ಮವಾಗಿದೆ. ಯುವ ಜನಾಂಗ ಈಗ ಜಾತಿಗಳ ಸಂಕೋಲೆಯಿಂದ ಹೊರ ಬಂದು ಮನುಜ ಮತಕ್ಕೆ ಸೇರಬೇಕಾಗಿದೆ. ಭಾರತದಲ್ಲಿ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವಾಗ 'ನಿಮ್ಮ ಹೇಸರೇನು' ಎಂದು ಕೇಳುವಾಗ ಮನಸ್ಸಿನಲ್ಲಿ ಮೂಡುವ ಪ್ರಶ್ನೆ 'ಯಾವ ಮತ' ಎನ್ನುವುದು. ಅದನ್ನು ಬಾಯಿ ಬಿಟ್ಟು ಕೇಳದೆ ಇರಬಹುದು. ಆದರೂ ಮೂರನೆಯವರ ಕಡೆಯಿಂದ ತಿಳಿದುಕೊಳ್ಳದೆ ಇರುವವರ ಸಂಖ್ಯೆ ತುಂಬಾ ಕಡಿಮೆ. ಯಾವ ಮತ ಎನ್ನುವುದು ಒಂದು ಅಲಂಕಾರಿಕವಾದ ಮಾತು. ಏಕೆಂದರೆ ಕೇಳುವವರ ಮನಸ್ಸಿನಲ್ಲಿ ಯಾವ ಜಾತಿ ಎಂದು ಹುಟ್ಟಿರುವುದನ್ನು ಬಾಯಿಯು ಯಾವ ಮತ ಎಂದು ಹೇಳುತ್ತದೆ. ಇದಕ್ಕೆ ಕುವೆಂಪು ಅವರು ಹೇಳುತ್ತಾರೆ. ಮನುಜ ಮತ' ಎಂದು ಉತ್ತರ ಕೊಡಿ ಎಂದು. ಇಂದಿನ ಅರ್ಜಿ

ನಮೂನೆಗಳಲ್ಲಿ ಯಾವ ಧರ್ಮ ಮತ್ತು ಯಾವ ಜಾತಿ ಎಂಬ ಕಾಲಂ ಇರುತ್ತವೆ. ಅವುಗಳನ್ನು ಭರ್ತಿ ಮಾಡುವಾಗ ಮನುಜ ಎಂದು ಬರೆದರೆ ಏನಾಗತ್ತದೆ. ಊಹಿಸಿರಿ. ಸರ್ಕಾರವೂ ಕೂಡ ಜಾತಿ, ಮತ ವಿಚಾರವನ್ನು ನಮೂದಿಸಲು ಕೇಳುವಾಗ ಅರ್ಜಿ ತುಂಬುವವರು ಹೇಗೆ ಮನುಜ ಮತ ಎಂದು ಬರೆಯುತ್ತಾರೆ. ಕಾವ್ಯಕ್ಕೂ ನಿಜಜೀವನಕ್ಕೂ ಎಷ್ಟು ಅಂತರವಿದೆ ನೋಡಿ ಸಿನಿಮಾದ ಪ್ರೇಮಕ್ಕೂ ವಾಸ್ತವ ಜೀವನಕ್ಕೂ ಹೀಗೆಯೇ ತುಂಬಾ ಅಂತರ ಇರುತ್ತದೆ. ಕವಿಯು ರಷ್ಯಾ, ಜಪಾನು, ತುರ್ಕಿಗಳ ನಿದರ್ಶನವನ್ನು ಕೊಟ್ಟು ಅವುಗಳು ಹೇಗೆ ವೈಚಾರಿಕತೆಯನ್ನು ರೂಢಿಸಿಕೊಂಡು ಮುಂದುವರಿಯುತ್ತಿವೆ ಎಂಬುದನ್ನು ತಿಳಿಸುತ್ತಾರೆ.

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರ ಬನ್ನಿ,
ಬಡತನವ ಬುಡಮಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲೈ ತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ,
ಓ, ಬನ್ನಿ, ಸೋದರರೆ, ಬೇಗ ಬನ್ನಿ ! [13]

ಇನ್ನೊಂದು ಮುಖ್ಯವಾದ ಘೋಷಣೆಯನ್ನು ಇಲ್ಲಿ ನೋಡಬಹುದು. ಗುಡಿ ಚರ್ಚು ಮಸೀದಿಗಳ ಬಿಟ್ಟು ಹೊರ ಬನ್ನಿ ಎನ್ನುವುದು ಇನ್ನೂ ಜನರ ಪ್ರಜ್ಞೆಗೆ ತಟ್ಟಿಲ್ಲ. ಗುಡಿ ಇತ್ಯಾದಿಗಳಿಗೆ ನಿಮ್ಮನ್ನು ನೀವೇ ಬಂಧಿಸಿಕೊಳ್ಳಬೇಡಿ ಎನ್ನವುದು ಮನುಜ ಮತಕ್ಕೆ ಸೇರಿರಿ ಎನ್ನುವುದನ್ನು ಸೂಚಿಸುತ್ತದೆ. ಮನುಜ ಮತದ ವೈಶಿಷ್ಟ್ಯವೆಂದರೆ ಅದರಲ್ಲಿ ಗುಂಪಾಗುವ ಸಾಧ್ಯತೆ ಇರುವುದಿಲ್ಲ. ಎಲ್ಲಿ ಗುಂಪಾಗುವ ಸಾಧ್ಯತೆ ಇದೆಯೋ ಅಲ್ಲಿ ಪುನಃ ಹಳೆಯ ರೀತಿಯೇ ಕಂಡು ಬರುತ್ತದೆ. ಮನುಜ ಮತಕ್ಕೆ ಸೇರಿರುವರು ಗುಡಿ, ಮಸೀದಿ, ಚರ್ಚುಗಳಿಗೆ ಹೋಗುವುದನ್ನು, ಪ್ರತ್ಯೇಕ ಗುಂಪುಗಳಾಗುವುದನ್ನು ಕೈ ಬಿಡುತ್ತಾರೆ. ಗುಡಿ ಇತ್ಯಾದಿಗಳ ಪ್ರಾಮುಖ್ಯತೆ ಕ್ಷೀಣಿಸುತ್ತದೆ. ಹೊರಗೆ ಪ್ರತ್ಯೇಕ ಗುಂಪುಗಳಾಗುವುದು. ತಪ್ಪಿದರೆ ಅಂತರಂಗದಲ್ಲಿ ಪ್ರತ್ಯೇಕ ಗುಂಪುಗಳಾಗುವುದೂ ತಪ್ಪುತ್ತದೆ. ಹಿಂದೆ ಬಹಳ ಕ್ರೂಡ್ ಎನ್ನುವಂಥ ಮತಾಂದತೆ ಇತ್ತು. ಈಗ ಹೈಟೆಕ್ ಮತಾಂಧತೆ ಕಂಡು ಬರುತ್ತಿದೆ. ಹಿಂದೆ ಮಣ್ಣಿನ ಗೋಡೆಗಳಿದ್ದ ಕಡೆ ಈಗ ಸಿಮೆಂಟ್ ಗೋಡೆಯೋ ಅದಕ್ಕಿಂತ ಗಟ್ಟಿಯಾದ ಗೋಡೆಯೋ ನಿರ್ಮಾಣವಾಗಿದೆ. ಬುದ್ಧಿ ಬೆಳದಂತೆ ಮತಾಂಧತೆಯೂ ಬೆಳೆಯುತ್ತಿದೆ. ಒಳ್ಳೊಳ್ಳೆ ಡಿಸೈನ್ ಇರುವ ಗುಡಿ ಮಸೀದಿ ಚರ್ಚುಗಳನ್ನು ಕಟ್ಟುತ್ತಿದ್ದಾರೆ. ಅದರಲ್ಲಿಯೂ ಸ್ಪರ್ಧೆ ಹುಟ್ಟಿಕೊಂಡಿದೆ. ಎಷ್ಟು ದೊಡ್ಡದು, ಎಷ್ಟು ಎತ್ತರ, ಎಷ್ಟು ಬೆಲೆಯುಳ್ಳದ್ದು ಎಂಬ ಮಾತುಗಳೂ ಮುಖ್ಯವಾಗಿವೆ. ಈ ಜಗತ್ತಿನಲ್ಲಿ ಎಲ್ಲರೂ ಸಂತೋಷದಿಂದ ಬದುಕೋಣ ಈ ಕಟ್ಟಡಗಳು ನಮ್ಮ ನೆಮ್ಮದಿಗೆ ಭಂಗ ತರಲು ಬಿಡಬಾರದು. ನಾವು ಮುಖ್ಯವೇ ಹೊರತು ಕಟ್ಟಡಗಳು, ಒಣ ಸಂಪ್ರದಾಯಗಳೂ ಅಲ್ಲ ಎಂದು ಯಾರು ಹೇಳುತ್ತಿಲ್ಲ.

ಕೆಲವರು ಹೇಳಿದರೂ ಕೇಳಿಸುವುದಿಲ್ಲ. ಕುವೆಂಪು ಅವರ ಈ ಕವನ ಅರಣ್ಯರೋದನ ಓದಿ ಆನಂದ ಪಡುವುದೇ ಅದರ ಗುರಿಯಾದರೆ ಏನು ಪ್ರಯೋಜನವಾಯಿತು. ಇದನ್ನು ಓದಿದವರು ಮನಸ್ಸಿನಿಂದ ಮತ ಮೌಢ್ಯ ಮಾರಿಯನ್ನು ಓಡಿಸಿದರೆ ಕವಿಯು ಬರೆದದ್ದು ಸಾರ್ಥಕವಾಗುತ್ತದೆ. ಈ ಮೂಲಕ ಕುವೆಂಪು ಸಾರ್ವಕಾಲಿಕ ಸತ್ಯದ ಪ್ರತಿನಿಧಿಯಾಗಿ ಕಂಗೊಳಿಸಿದ್ದಾರೆ.

ಜೀವ ರಥೋತ್ಸವ ಎಂಬ ಕವನದಲ್ಲಿ ಸನ್ಯಾಸಿ ಮತ್ತು ಸಂಸಾರಿ ಎಂಬ ಎರಡು ಶಬ್ದಗಳನ್ನು ಎಷ್ಟು ಜನ ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೋ ತಿಳಿಯದು. ಸ್ಥೂಲವಾಗಿ ಜನರು ಏನು ತಿಳಿಯುತ್ತಾರೆ. ಸನ್ಯಾಸಿಗೆ ಮದುವೆಯಾಗಿಲ್ಲ ಸಂಸಾರಿಗೆ ಮದುವೆ ಆಗಿದೆ ಎಂದು ತಾನೆ? ಅದಷ್ಟೇ ವಿವರಣೆ ಸಾಲದು. ಅದೂ ಒಂದು ಅಂಶ ಎಂಬುದು ನಿಜ. ಸನ್ಯಾಸಿ ಎನ್ನುವುದರ ಶಬ್ದಾರ್ಥವನ್ನು ನೋಡಿದರೆ ಭಗವಂತನ ಬಳಿ ತನ್ನ ಸರ್ವಸ್ವವನ್ನು ಠೇವಣಿಯಾಗಿ ಇಟ್ಟವನು, ಸಮರ್ಪಣೆ ಮಾಡಿಕೊಂಡವನು ಎಂಬ ಅರ್ಥವಿದೆ. ಸಂಸಾರಿ ಎಂದರೆ ಈ ಲೋಕದ ವಿಚಾರಗಳಲ್ಲಿ ಆಸಕ್ತನಾದವನು ಎಂಬ ಅರ್ಥವಿದೆ. ಲೋಕದ ವಿಚಾರಗಳಲ್ಲಿ ಆಸಕ್ತನಾಗಲು ಮದುವೆಯಾಗಬೇಕೆಂಬ ನಿರ್ಬಂಧವೇನೂ ಇಲ್ಲ. ಕವಿಯು ಅವರ ತಾರುಣ್ಯದಲ್ಲಿ ಸನ್ಯಾಸಿಯಾಗಬೇಕೆಂದು (ಕಾವಿ ಬಟ್ಟೆ ತೊಟ್ಟು) ನಿರ್ಧರಿಸಿದ್ದುದು ಎಲ್ಲರಿಗೂ ಗೊತ್ತಿದೆ. ಅನಂತರದ ಆಲೋಚನೆಯಲ್ಲಿ ಅವರ ನಿರ್ಧಾರ ಬದಲಾಯಿತು. ಸಂಸಾರಿಯಾಗಲು ತೀರ್ಮಾನಿಸಿದ ನಂತರ ಅವರ ದೃಷ್ಟಿಯಲ್ಲಿ ಬದಲಾವಣೆ ಬಂದಿರಬೇಕು. ಏಕೆಂದರೆ ಈ ಕವಿತೆಯನ್ನು ಒಮ್ಮೆ ಓದಿ ನೋಡಿದಾಗ ನಮಗೆ ಸ್ಪಷ್ಟ ಅಭಿಪ್ರಾಯವು ಬರುತ್ತದೆ. ಸನ್ಯಾಸಿಯಾಗಿರುವವನನ್ನು ಕವಿಯು ಖಂಡಿಸುತ್ತಿಲ್ಲ. ಸನ್ಯಾಸಿಯಾದ ಮಾತ್ರಕ್ಕೆ ಜನರಿಂದ ದೂರವಾಗಿ ಸ್ವಾರ್ಥಿಯಾಗಬೇಡ ಎನ್ನುತ್ತಾರೆ. ಜೀವರಥೋತ್ಸವದಲ್ಲಿ ನೀನೂ ಭಾಗಿಯಾಗು, ರಥದ ಸಾರಥಿಯಾಗಿರುವವನು ಭಗವಂತನೇ. ಅದನ್ನು ನೋಡಿಯಾದರೂ ಹತ್ತಿರಕ್ಕೆ ಬಂದು ತೇರನ್ನು ಎಳೆ ಎಂದು ಹೇಳುತ್ತಾರೆ. ಸನ್ಯಾಸಿಯಾದರೇನು, ಸಂಸಾರಿಯಾದರೇನು, ಲೋಕದಲ್ಲಿ ಬದುಕಿ ಬಾಳಲೇಬೇಕು. ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗಿ, ಸೇವಾಕಾಂಕ್ಷಿಯಾಗಿ, ಜೀವನವನ್ನು ಸಾಗಿಸಬೇಕೇ ವಿನಾ ದೂರ ಓಡಿದರೆ ಪ್ರಯೋಜನವಿಲ್ಲವೆಂಬುದು ಈ ಕವಿತೆಯ ಆಶಯವಾಗಿ ಪ್ರಸ್ತುತವಾಗಿದೆ.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎನ್ನುವ ಕವನದಲ್ಲಿ

ಶಾಸ್ತ್ರದ ಕಟ್ಟು ಪಾಡುಗಳು ತ್ರಿಕಾಲಾಭಾದಿತವಲ್ಲ, ಕಾಲಕ್ಕೆ ತಕ್ಕಂತೆ ಬದಲಾಗುತ್ತ ಹೋಗುತ್ತವೆ ಎಂಬುವುದನ್ನು ವಿವರಿಸಿದ್ದಾರೆ. ಭಾರತಿಯರು ಶ್ರುತಿಗಳು ಮತ್ತು ಸ್ಮೃಗಳು ಎಂದು ಶಾಸ್ತ್ರವನ್ನು

ವಿಭಾಗಿಸುತ್ತಾರೆ. ವೇದೋಪನಿಷತ್ತುಗಳು ಶ್ರುತಿಗಳೆನಿಸಿಕೊಳುತ್ತವೆ. ಧರ್ಮಸೂತ್ರಗಳು, ಗೃಹ್ಯಸೂತ್ರಗಳು ಸ್ಮೃತಿಗಳನಿಸಿಕೊಳುತ್ತವೆ ಇವುಗಳಲ್ಲಿ ಮನುಧರ್ಮಶಾಸ್ತ್ರ/ ಮನುಸ್ಮೃತಿಯು ಬಹಳ ಪ್ರಸಿದ್ಧವಾದದು. ಅದರಲ್ಲಿ ಆ ಕಾಲಕ್ಕೆ ಒಗ್ಗುವಂತಹ ನಿಯಮಗಳನ್ನು ವಿವರಿಸಲಾಗಿದೆ. ಇತ್ತೀಚಿನವರು ಮನುಸ್ಮೃತಿಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ.

ಜಾತಿಗಳ ವಿಚಾರ ಬಂದಾಗ ಮನು ಹೇಳುವುದನ್ನು ಈಗ ಯಾರೂ ಒಪ್ಪುವುದಿಲ್ಲ. ಬದಲಾವಣೆಯೇ ದೊಡ್ಡದು ಎನ್ನುತ್ತಾರೆ. 'ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು' ಎಂಬ ಮಾತಿನಲ್ಲಿ ಹೃದಯದ ವಾಣಿಗೆ ಬೆಲೆ ಕೊಡಬೇಕು ಎನ್ನುತ್ತಾರೆ. ಚತುರ್ವರ್ಣಗಳು, ಅಸ್ಪೃಶ್ಯತೆ, ಶೂದ್ರರಿಗೆ ವೇದಜ್ಞಾನವನ್ನು ಕೊಡದಿರುವುದು, ಸ್ತ್ರೀಯರಿಗೆ ಸಮಾನತೆ ತೋರದಿರುವುದು ಮುಂತಾದ ಎಷ್ಟೋ ವಿಷಯಗಳನ್ನು ಮನು ಹೇಳುತ್ತಿದ್ದಾನೆಯೋ ಇಲ್ಲವೋ ಎಂದು ಕವಿಯು ಸಂದೇಹ ಪಡುತ್ತಾರೆ. ಇದಕ್ಕೆ ಕಾರಣವೆಂದರೆ ಇಂತಹ ವಿಚಾರಗಳು ತುಂಬಾ ಕ್ರೂರವಾದುವು. ಅಮಾನವೀಯವಾದವು ಎನ್ನುವುದು. ಮನುಷ್ಯರು ಸಮಾನರು ಎಂಬ ಪ್ರಜಾಪ್ರಭುತ್ವ ಯುಗದಲ್ಲಿ ಹಳೆಯ ನೂರಾರು ಪದ್ಧತಿಗಳು ಅರ್ಥಹೀನವಾಗಿರುವುದರಿಂದ ಪಾಲಿಸುವ ಅಗತ್ಯವಿಲ್ಲ ಎನ್ನುವುದು ಒಂದು ಗಮನಾರ್ಹ ವಿಚಾರವಾಗಿದೆ. ಇನ್ನು ಕೆಲವು ಅರ್ಥಹೀನ ಮಾತ್ರವಲ್ಲ, ಅಧರ್ಮ ಎನಿಸಿಕೊಳ್ಳುತ್ತವೆ. ಏಕೆಂದರೆ ಧರ್ಮ, ಅಧರ್ಮ ಎಂಬ ಮಾತುಗಳು ಕಾಲದ ಪರಿಸ್ಥಿತಿಯ ತಕ್ಕಡಿಯಲ್ಲಿ ತೂಗಿ ನೋಡಬೇಕಾಗುತ್ತದೆ. ಕಾಲ, ದೇಶ, ಸನ್ನಿವೇಶ ಈ ಮೂರು ಅಂಶಗಳು ನಿರ್ಣಾಯಕವಾದವು. ಅವುಗಳನ್ನು ಪರಿಗಣಿಸದೆ ಸರಿ, ತಪ್ಪು ಎಂಬ ತೀರ್ಮಾನಕ್ಕೆ ಬರುವುದು ಸುಲಭವಲ್ಲ. ಸ್ವರ್ಗ ನರಕಗಳೆಂಬ ಮಾತುಗಳು ಶಾಸ್ತ್ರಕ್ಕೆ ಸಂಬಂಧಪಟ್ಟಿಲ್ಲ ಎಂದು ಕವಿ ಹೇಳುತ್ತಾರೆ. ಹೃದಯದ ಮಾತು ಅಂದರೆ ಅಂತರಂಗದ ವಾಣಿ ಯಾವಾಗಲೂ ಸತ್ಯವನ್ನು ಬಳಗೊಂಡಿರುತ್ತದೆ. ಅಂತರ್ವಾಣಿಯು ಸರಿಯಾದುದನ್ನು ಹೇಳುತ್ತಿದ್ದರೂ ಮನುಷ್ಯರು ಬುದ್ಧಿಶಕ್ತಿಯ ಬೆಂಬಲದಿಂದ ಅಂತರ್ವಾಣಿಯನ್ನು ಹತ್ತಿಕ್ಕಿ ಸ್ವಾರ್ಥವನ್ನೊ / ಒಂದು ಗುಂಪಿನ ಹಿತವನ್ನೋ ಕಾಯುವುದರಲ್ಲಿ ತೊಡಗುವುದು ಅಧರ್ಮವಾಗುತ್ತದೆ. ಹಿಂದಿನವರು ಯಾವುದನ್ನು ಕುರಿತು ಅಧರ್ಮ, ಅನೀತಿ ಎನ್ನುತ್ತಿದ್ದರೋ ಅವುಗಳು ಈಗ ಹಾಗೆ ಅನ್ನಿಸಿಕೊಳ್ಳದೆಯೂ ಇರಬಹುದು. ಕವಿಯ ದೃಷ್ಟಿಯಲ್ಲಿ ಹಿಂದೆ ಇದ್ದ ಋಷಿಗಳು ಕೂಡ ನಮ್ಮಂತಹ ಮನುಷ್ಯರು. ಅವರು ಅವರ ಕಾಲಕ್ಕೆ ತಕ್ಕ ನಿಯಮಗಳನ್ನು ರೂಪಿಸಿಕೊಂಡಿದ್ದರು. ಈಗಿನ ಕಾಲಕ್ಕೆ ಯಾವುದು ಸರಿ ಎನ್ನುವುದನ್ನು ಅಂತರ್ವಾಣಿ ತಿಳಿಸುತ್ತದೆ ಎಂದು ಕವಿಯು ಹೇಳುತ್ತಾರೆ. ಒಮ್ಮೊಮ್ಮೆ ಇದೂ ಕೂಡ ಚರ್ಚಾಸ್ಪದವಾಗಬಹುದು. ಆದ್ದರಿಂದಲೇ ಕೂಲಂಕಷವಾದ ಚರ್ಚೆಗೆ ಒಳಗಾಗಿ ರೂಪಿಸಲ್ಪಟ್ಟ ಭಾರತದ

'ಸಂವಿಧಾನ'ವು ಈ ಕಾಲದ ಧರ್ಮ ಸೂತ್ರವಾಗಿದೆ. ಕವಿಯು ಸಂವಿಧಾನವನ್ನೂ ಮೀರಿ ಮುಂದೆ ಹೋಗಿ ಹೃದಯದ ವಾಣಿಯೇ ಶ್ರೀ ಧರ್ಮಸೂತ್ರ ಎಂದು ಹೇಳಿದ್ದಾರೆ.

ತರುಣರಿರ ಎದ್ದೇಳಿ : ಕವನದಲ್ಲಿ ಜಗತ್ತು ಯಾವಾಗಲೂ ತರುಣ ವಯಸ್ಸಿನವರಿಗೆ ಸೇರಿದ್ದು. ವೈಜ್ಞಾನಿಕವಾಗಿ ನೋಡಿದರೂ ಇದು ಸತ್ಯವಾದುದು. ಬಾಲಕರು ಇನ್ನೂ ಬುದ್ಧಿ ಮನಸ್ಸುಗಳ ಕ್ಷೇತ್ರಗಳಲ್ಲಿ ಬೆಳೆಯುತ್ತಿರುವವರು ವೃದ್ಧರು ಜಗತ್ತಿನ ಹೋರಾಟದಲ್ಲಿ ಪಾಲ್ಗೊಂಡು ಸಾಕು ಹೋರಾಟ ಎನ್ನುವವರು. ಆದ್ದರಿಂದ ತರುಣ ಜನಾಂಗ ಸರಿಯಾದ ದಾರಿಯಲ್ಲಿ ನಡೆದರೆ ದೇಶ, ಪ್ರಪಂಚ ಸಮೃದ್ಧ ವಲಯಗಳಾಗುತ್ತವೆ. ಸುಖ ಸಂತೋಷದ ನೆಲೆಗಳಾಗುತ್ತವೆ.

ಹೋಗುತಿದೆ ಹಳೆಕಾಲ, ಹೊಸ ಕಾಲ ಬರುತಲಿದೆ,
ಬರುತಲಿದೆ ಹೊಸ ದೃಷ್ಟಿ ಹೊಸ ಬಯಕೆಗಳಲಿ.
ಹೋಗುತಿದೆ ಹಳೆ ಬಾಳು, ಹೊಸ ಬಾಳು ಬರುತಲಿದೆ,
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ.
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ! ಕೇಳಿ! [14]

ಕವಿಯು ತರುಣ ಜನಾಂಗಕ್ಕೆ ಹೊಸ ಸಂದೇಶವನ್ನು ನೀಡುತ್ತಿದ್ದಾರೆ. ಪಾಶ್ಚಾತ್ಯ ದೇಶಗಳನ್ನು ನೋಡಿ ಕಲಿತುಕೊಳ್ಳಬೇಕೆಂದು ಹೇಳುತ್ತಾರೆ. ಹೊಸಕಾಲ ಎನ್ನುವುದು ಹೇಗೆ ಉಂಟಾಗುತ್ತದೆ? ಹೊಸ ಆಸೆಗಳು, ನವೀನ ಆಲೋಚನೆಗಳು, ಮುಂತಾದವುಗಳಿಂದಾಗಿ ಹಳೆಯ ಕಾಲ ಹೊಸಕಾಲ ಎಂಬ ಮಾತುಗಳು ಕೇಳಿಬರುತ್ತವೆ. ಇಲ್ಲದಿದ್ದರೆ ಅದೇ ಭೂಮಂಡಲ, ಅದೇ ಸೌರವ್ಯೂಹ, ಅದೇ ಶರೀರ. ಭಾರತ ದೇಶ ಬಹಳ ಹಳೆಯದು ಅದರಲ್ಲಿರುವ ತರಗೆಲೆಗಳನ್ನು ಉದುರಿಸಿ ಹೊಸಚಿಗುರು ಮೂಡುವಂತೆ ಮಾಡಬೇಕು. ಕವಿಯು ರಷ್ಯಾದ ನಿದರ್ಶನವನ್ನು ಇಲ್ಲಿ ಕೊಡುತ್ತಾರೆ. ಲೆನಿನ್ ಬರುವ ಮೊದಲು ರಷ್ಯ ದೇಶವು ಪಶ್ಚಿಮದ ಕೊಳಗೇರಿಯಾಗಿತ್ತು. ಅನಂತರ ಎಂತಹ ಪರಿವರ್ತನೆ, ಪವಾಡ ನಡೆಯಿತು. ರಷ್ಯ ಪ್ರಪಂಚದಲ್ಲಿಯೇ ಬಲಿಷ್ಠ ರಾಷ್ಟ್ರವಾಯಿತು. ಪ್ರಪಂಚದ ಮೊದಲ ಕೃತಕ ಉಪಗ್ರಹವನ್ನು ಹಾರಿಸಿ ಎಲ್ಲರನ್ನೂ ಚಕಿತಗೊಳಿಸಿತು. ರಷ್ಯದಂತೆ ಏಷ್ಯ ಕೂಡ ನಿದ್ರೆಯ ಸ್ಥಿತಿಯನ್ನು ಹೊರದೂಡಿ ಕೆಣ್ಣೆರದು ಪ್ರಪಂಚದ ವಿದ್ಯಮಾನಗಳನ್ನು ನೋಡತೊಡಗಿದೆ.

ಹೊಸ ಬಾಳಿನ ಗೀತೆಯನು ದಿಕ್ಕುದೆಸೆ ಬಿರಿವಂತೆ
ಕೊರಳೆತ್ತಿ ಕೈಯೆತ್ತಿ ದನಿಯೆತ್ತಿ ಹಾಡಿ.
ಸೇರಿ ನಡೆದರೆ ನಿಮ್ಮ ತಡೆಯುವವರಾರಿಲ್ಲ ;ಟ

ಜಗವೆ ಹಿಂಜರಿಯುವುದು ನಿಡುದಾರಿ ನೀಡಿ.

ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಮೂಡಿ ! [15]

ಪ್ರತೀ ಸಂದರ್ಭದಲ್ಲಿಯೂ ಹಳೆಯಶಾಸ್ತ್ರ ಗ್ರಂಥಗಳ ಪ್ರಾಮಾಣ್ಯವನ್ನು ಆಶ್ರಯಿಸುವುದನ್ನು ಬಿಡಬೇಕೆಂದು, ವೈಚಾರಿಕತೆಯಿಂದ ಕೂಡಿದ ತೀರ್ಮಾನಗಳನ್ನು ತೆಗೆದುಕೊಂಡು ಕವಿಯು ಹೇಳುತ್ತಾರೆ, ಯುವ ಜನಾಂಗವು ಒಗ್ಗಟ್ಟಿನಿಂದ ತೀರ್ಮಾನ ತೆಗೆದುಕೊಂಡು ಮುಂದುವರಿದರೆ ಯಾರೂ ತಡೆಯಲಾಗುವುದಿಲ್ಲ. ಮನುಷ್ಯನ ಬುದ್ಧಿಶಕ್ತಿಯ ಮುಂದೆ ಯಾವ ಕಂದಾಚಾರಗಳೂ, ಮೂಢನಂಬಿಕೆಗಳೂ, ತೇಜೋಹೀನವಾಗಿ ಹಿಂದೆ ಸರಿಯುತ್ತವೆ. ಎಷ್ಟೋ ಮೌಢ್ಯಗಳು ದೂರವಾಗಿವೆ. ಆದರೂ ಜನಜೀವನದಲ್ಲಿ ಇನ್ನೂ ನಂಬಿಕೆಗಳ ಆಡಳಿತ ನಡೆಯುತ್ತಿದೆ. ಇಪ್ಪತ್ತೊಂದನೇ ಶತಮಾನದಲ್ಲಿಯೂ ಹದಿನಾರು ಹದಿನೇಳನೇ ಶತಮಾನದ ಜನರ ಹಾಗೆ ಬದುಕುವವರು ಇನ್ನೂ ಇದ್ದಾರೆ. ಬುದ್ಧಿಗೆ ಬೆಳಕು ತೋರದೆ ಕತ್ತಲಿನಲ್ಲಿಯೇ ಇಟ್ಟರೆ ಪ್ರಗತಿಯೂ ಆಗುವುದಿಲ್ಲ. ಆದ್ದರಿಂದ ಕವಿಯು ತರುಣ ಜನಾಂಗವೇ ಎದ್ದೇಳಿ ಎಂದು ಘೋಷಿಸುತ್ತಾರೆ.

ಹಳ್ಳಿಯ ತರುಣನನ್ನು ಹಳೆಯ ಮೌಲ್ಯಗಳಿಂದ ಪಾರು ಮಾಡಬೇಕಾಗಿ ಬರುತ್ತದೆ. ಅವು ನಿಜವಾಗಿ ಮೌಲ್ಯಗಳಲ್ಲ. ಸ್ವಾರ್ಥಕ್ಕಾಗಿ ಮೇಲು ವರ್ಗದವರು ಹುಟ್ಟಿಸಿರೋ ಭ್ರಾಂತಿಗಳು; ಅವು ನಿತ್ಯ ಮೌಲ್ಯಗಳಲ್ಲ, ನಿಜ, ಭಕ್ತಿ ಶ್ರದ್ಧೆ ಅಭೀಪ್ಸೆ ಇಂಥವುಗಳೆಲ್ಲಾ ನಿತ್ಯ ಮೌಲ್ಯಗಳು. ಆದರೆ ಆ ಮೌಲ್ಯಗಳ ಹೆಸರನ್ನು ಹೇಳಿ ಅವನ್ನು ಏತಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ? ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಭಕ್ತಿ ಪೂಜೆಯ ಹೆಸರಿನಲ್ಲಿ, ಧರ್ಮಸ್ಥಳದ ಹೆಸರಿನಲ್ಲಿ ಜನರನ್ನು ಹೆದರಿಸಿ ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆ? ಮೋಸ ಮಾಡುತ್ತಿದ್ದಾರೆ? ಕುವೆಂಪು ಅವರ ಈ ಮಾತುಗಳಲ್ಲಿ ಅಭಿವ್ಯಕ್ತಗೊಂಡಿರುವಂಥದು ಜಾತಿ ದ್ವೇಷವಲ್ಲ, ಮತೀಯ ದ್ವೇಷವಲ್ಲ, ನಿರ್ಜಾತೀಯ ನಿರ್ಮತೀಯ ಸಮಾಜ ನಿರ್ಮಾಣದ ಬಗೆಗಿನ ಕಾತರತೆ. ಈ ಮಾತುಗಳ ಪ್ರೇರಣೆಗೆ ಅವರ ಮಾನವ ಪ್ರೇಮ ಮತ್ತು ಲೋಕ ಕಾರುಣ್ಯಗಳೇ ಕಾರಣವಾಗಿವೆ. ಸಾಮಾಜಿಕ ಪ್ರಜ್ಞೆಯ ಜಾಗೃತಿಗೆ ಮರುಕ ಅನುಕಂಪಗಳೇ ಚೋದಕಗಳು. ಅವರು ಅನುದಿನವೂ ಪ್ರತಿಪಾದಿಸುತ್ತಿರುವ, ಅಂತೆಯೇ ಅನುಸಂದಾನ ಮಾಡುತ್ತಿರುವ ಪಂಚ ಮಂತ್ರಗಳ ಹಲವು ಗುರಿಗಳಲ್ಲಿ ಸಾಮಾಜಿಕ ಸುಸ್ಥಿತಿಯೂ ಒಂದೆನ್ನಬಹುದು.

ಅಡಿ ಟಿಪ್ಪಣಿಗಳು

1. ತರುಣರಿರ ಎದ್ದೇಳಿ- ಕೋಗಿಲೆ ಮತ್ತು ಸೋವಿಯಟ್ ರಷ್ಯಾ- ಕು.ಸ.ಕಾ.ಸಂ.-1 ಪು.ಸಂ. 370
2. ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಕೋಗಿಲೆ ಮತ್ತು ಸೋವಿಯಟ್ ರಷ್ಯಾ- ಕು.ಸ.ಕಾ.ಸಂ.-1 ಪು.ಸಂ.368
3. ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಕೋಗಿಲೆ ಮತ್ತು ಸೋವಿಯಟ್ ರಷ್ಯಾ -ಕು.ಸ.ಕಾ.ಸಂ.-1 ಪು.ಸಂ.368
4. ದೇವರು ಸೆರೆಯಾಳ್-ಕೋಗಿಲೆ ಮತ್ತು ಸೋವಿಯಟ್ ರಷ್ಯಾ-ಸಂ.1, ಪು.ಸಂ.418
5. ಧ್ರಾಂ ಧೀಂ ಧ್ರೂಂ ! ಕೋಗಿಲೆ ಮತ್ತು ಸೋವಿಯಟ್ ರಷ್ಯಾ- ಕು.ಸ.ಕಾ.ಸಂ.-1, ಪು.ಸಂ 363
6. ಧ್ರಾಂ ಧೀಂ ಧ್ರೂಂ ! ಕೋಗಿಲೆ ಮತ್ತು ಸೋವಿಯಟ್ ರಷ್ಯಾ -ಕು.ಸ.ಕಾ.ಸಂ.-1 ಪು.ಸಂ 367
7. ದೇವರು- ಪೂಜಾರಿ ಕೋಗಿಲೆ ಮತ್ತು ಸೋವಿಯಟ್ ರಷ್ಯಾ- ಸಂಪುಟ -1 ಪು. ಸಂ 416
8. ದೇವರು- ಪೂಜಾರಿ ಕೋಗಿಲೆ ಮತ್ತು ಸೋವಿಯಟ್ ರಷ್ಯಾ- ಸಂಪುಟ -1 ಪು. ಸಂ 416
9. ಶ್ರೀ ಗೊಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥಂ -ಇಕ್ಷು ಗಂಗೋತ್ರಿ ಸಂಪುಟ -2 ಪು.ಸಂ. 117
10. ಶ್ರೀ ಗೊಮ್ಮಟ ಮಹಾಮಸ್ತಕಾಭಿಷೇಕ ಪ್ರಗಾಥಂ -ಇಕ್ಷು ಗಂಗೋತ್ರಿ ಸಂಪುಟ -2 ಪು.ಸಂ. 117
11. ಧರ್ಮಸ್ಥಳ- ಇಕ್ಷು ಗಂಗೋತ್ರಿ ಸಂಪುಟ -2 ಪು.ಸಂ. 133
12. ಧರ್ಮಸ್ಥಳ- ಇಕ್ಷು ಗಂಗೋತ್ರಿ ಸಂಪುಟ -2 ಪು.ಸಂ. 133
13. ಓ, ಬನ್ನಿ, ಸೋದರರೆ, ಬೇಗ ಬನ್ನಿ- ಕೋಗಿಲೆ ಮತ್ತು ಸೋವಿಯಟ್ ರಷ್ಯಾ-ಸಂ.1, ಪು.ಸಂ.372
14. ತರುಣರಿರ, ಎದ್ದೇಳಿ !- ಕೋಗಿಲೆ ಮತ್ತು ಸೋವಿಯಟ್ ರಷ್ಯಾ-ಸಂಪುಟ-1, ಪು.ಸಂ.370
15. ತರುಣರಿರ, ಎದ್ದೇಳಿ !- ಕೋಗಿಲೆ ಮತ್ತು ಸೋವಿಯಟ್ ರಷ್ಯಾ-ಸಂಪುಟ-1, ಪು.ಸಂ.370

ಅಧ್ಯಾಯ - 6

ರೈತರ ಬಗೆಗಿನ ಒಲುಮೆ

ಎರಡು ಸಾವಿರ ವರ್ಷಗಳ ದೀರ್ಘ ಇತಿಹಾಸದಲ್ಲಿ ರೈತನೇ ವಸ್ತುವಾಗುಳ್ಳ ಕಾವ್ಯಗಳಾಗಲೀ, ಕಾವ್ಯ ಭಾಗಗಳಾಗಲಿ ಕನ್ನಡದಲ್ಲಿ ಇಲ್ಲವೇ ಇಲ್ಲವೆಂಬುದು ಚೋದ್ಯದ ಸಂಗತಿ. ಆ ಕಾಲದಲ್ಲಿಯೂ ಈಗಿನಂತೆಯೇ ಮೃಷ್ಟಾನ್ನವನ್ನುಂಡು ತೇಗುತ್ತಿದ್ದ ಸೋಮಾರಿಗಳಿಗೆ, ದೀನದಲಿತರ ಸಮಾಧಿಯ ಮೇಲೆ ಗುಡಿ ಗೋಪುರಗಳನ್ನು ನಿರ್ಮಿಸುತ್ತಿದ್ದ ಪುರೋಹಿತರಿಗೆ, ಸೌಧಗಳಲ್ಲಿ ಮೆರೆದು, ಭೋಗವಿಲಾಸದಲ್ಲಿ ಮುಳುಗಿರುತ್ತಿದ್ದ ಶ್ರೀಮಂತರಿಗೆ, ಸಾಮ್ರಾಜ್ಯಶಾಹಿಯನ್ನು ವಿಸ್ತರಿಸುತ್ತಿದ್ದ ಚಕ್ರವರ್ತಿಗಳಿಗೆ ಬೆವರು ಸುರಿಸಿ, ರಕ್ತ ಬಸಿದು ಆಹಾರವನ್ನು ಬೆಳೆದು, ಸಂಪತ್ತನ್ನು ಸೃಷ್ಟಿಸಿ ಕೊಡುತ್ತಿದ್ದ ರೈತರು ಬಹುಸಂಖ್ಯೆಯಲ್ಲಿದ್ದರೆಂಬುದಂತೂ ಖಚಿತ. ಆಗಲೂ ಭಾರತೀಯ ಸಮಾಜದ ಬೆನ್ನುಮೂಳೆಯಂತಿದ್ದವರು ರೈತರು. ಅವರು ಅಜ್ಞಾನ, ಮೌಢ್ಯ, ದಾರಿದ್ರ್ಯ, ರೋಗ-ರುಜಿನಗಳಿಗೆ, ಪಡಬಾರದ ಕಷ್ಟ-ಕಾರ್ಪಣ್ಯಗಳಿಗೆ ಗುರಿಯಾಗಿ, ಸಮಾಜದ ಯಜ್ಞ ಪಶುಗಳಾಗಿದ್ದುದು ನಿಜ. ಅವರ ನೇಗಿಲ ಬಲದಿಂದ ದೊರೆಗಳು ದೇಶವನ್ನಾಳುತ್ತಾರೆ. ಯೋಧರು ಖಡ್ಗಗಳನ್ನು ಝಳಪಿಸುತ್ತಾರೆ, ಘನಪಾಠಿ ತ್ರಿಪಾಠಿಗಳು ವೇದಾಧ್ಯಯನದಲ್ಲಿ ನಿರತರಾಗುತ್ತಾರೆ. ಶ್ರೀಮಂತರು ಬೊಜ್ಜು ಬೆಳೆಸುತ್ತಾರೆ, ಕವಿಗಳು ಕಾವ್ಯ ರಚಿಸುತ್ತಾರೆ. ಆದರೂ ಸಮಾಜದ ಪ್ರಾಣ ಸ್ವರೂಪನಂತಿದ್ದ ರೈತ ಸಂಸ್ಕೃತ ಪ್ರಾಕೃತ ಹಾಗೂ ದೇಶಭಾಷೆಗಳ ನಿರ್ಲಕ್ಷ್ಯಕ್ಕೆ ಪಕ್ಕಾದದ್ದು ನಾಚಿಕೆಗೇಡಿನ ಪ್ರಸಂಗವಾಗಿದೆ. ಜನಜೀವನದಿಂದ ಹೊರಹೊಮ್ಮದ, ಜನಜೀವನ ರೂಪಿಸದ, ಜನಜೀವನ ವಸ್ತುವಾಗದ ಸಾಹಿತ್ಯ ಕೃತಕವಾಗುವುದಿಲ್ಲವೆ? ಜಳ್ಳೆನಿಸುವುದಿಲ್ಲವ ಎಂದು ಯಾರಾದರೂ ಕೇಳಬಹುದಾಗಿದೆ. ಕಲ್ಪನಾಲೋಕದಲ್ಲಿ ಸದಾ ವಿಹರಿಸುವ, ಅಲಂಕಾರ ವರ್ಣನೆಗಳಿಂದ ಭಾರವಾಗಿರುವ, ರಾಜ ಗುರುಗಳ, ಆಸ್ಥಾನ ಪಂಡಿತರ ಮೆಚ್ಚುಗೆಗಾಗಿ, ಪ್ರಶಂಸೆಗಾಗಿ, ಮನರಂಜನೆಗಾಗಿ ನಿರ್ಮಾಣಗೊಳ್ಳುವ, ವಾಸ್ತವ ಜೀವನವನ್ನು ಸಮಗ್ರ ಸಮಾಜವನ್ನು ಮರೆಯುವ ಸಾಹಿತ್ಯ ಪುರಸ್ಕಾರ ಯೋಗ್ಯವೆ ಎಂದು ಈಗ ಯೋಚಿಸಬೇಕಾಗಿದೆ. ಮಾನವತೆಯನ್ನು ನಿರ್ಲಕ್ಷ್ಯಿಸಿದ ಸಾಹಿತ್ಯ ಎಂದಿಗೂ ಉಪಾದೇಯವಾಗಲಾರದು.[1] ಎಂದಿದ್ದಾರೆ ದೇ. ಜವರೇಗೌಡರು.

ಹನ್ನೆರಡನೆಯ ಶತಮಾನದ ಕೆಲವು ಸಾಹಿತ್ಯ ಭಾಗಗಳನ್ನುಳಿದರೆ, ಬಿ.ಎಂ.ಶ್ರೀವರೆಗಿನ ಕನ್ನಡ ಸಾಹಿತ್ಯದ ಬಹುಭಾಗ ಈ ಆಪಾದನೆಯಿಂದ ಮುಕ್ತವಾಗಲಾರದು. ತನ್ನ ಅಸ್ತಿತ್ವವನ್ನು ಸಮರ್ಥವಾಗಿ

ಸಮರ್ಥಿಸಿಕೊಳ್ಳಲಾರದು. ಜನಜೀವನದಿಂದ ನೇರವಾಗಿ ಹೊರಹೊಮ್ಮಿದ ಜನಪದ ಸಾಹಿತ್ಯವೊಂದೆ ಮಾನವತಾ ಸಾಹಿತ್ಯ, ವಾಸ್ತವ ಸಾಹಿತ್ಯ ಶ್ರೇಷ್ಠವಾದ ಸಾಹಿತ್ಯವೆನ್ನಬೇಕಾಗುತ್ತದೆ. ಶ್ರೀ ಸಾಮಾನ್ಯನ ನೋವು-ನಲಿವುಗಳನ್ನು, ಕಷ್ಟ-ಕಾರ್ಪಣ್ಯಗಳನ್ನು, ಅವನ ಇರವನ್ನು ಪ್ರತಿಬಿಂಬಿಸಿದ ಸಾಹಿತ್ಯದಿಂದ ನಾಡಿಗಾಗುವ ಪ್ರಯೋಜನವಾದರೂ ಏನು? ಆದ್ದರಿಂದಲೇ ನಾಡು ಹಿಂದೆ ಬಿದ್ದದ್ದು, ಪರಕೀಯರ ಆಕ್ರಮಣಕ್ಕೆ ಗ್ರಾಸವಾದದ್ದು. ಜನಜೀವನದಿಂದ ವಂಚಿತವಾದ ಸಾಹಿತ್ಯವಾಗಲಿ, ಭಾಷೆಯಾಗಲಿ ನಿಸ್ಸತ್ವವಾಗುತ್ತದೆ, ನಿರ್ಜೀವವಾಗುತ್ತದೆ. ಜನಜೀವನದಿಂದ ಸ್ಫೂರ್ತಿ ಪಡೆದು, ಜೀವನ ಮೌಲ್ಯಗಳ ಹಿನ್ನೆಲೆಯಲ್ಲಿ ರಚನೆಗೊಂಡ ಸಾಹಿತ್ಯವನ್ನು ಕನ್ನಡದಲ್ಲಿ ಕಾಣಬೇಕಾದರೆ ಇಪ್ಪತ್ತನೆಯ ಶತಮಾನದ ಎರಡು ಮೂರು ದಶಕಗಳ ತನಕ ಕಾಯಬೇಕಾಗುತ್ತದೆ. ನವೋದಯ ಕಾಲದಲ್ಲಿಯೂ ಉತ್ತಮ ವರ್ಗದಿಂದ ಬಂದ ಸಾಹಿತಿಗಳಿಗೆ ಗ್ರಾಮ ಅಥವಾ ರೈತ ಸಮಾಜ ಅಸ್ಪೃಶ್ಯವಾಗುತ್ತದೆ. ಈ ಸಮಾಜದ ಗೋಳ್ದನಿ ಅಶ್ರಾವ್ಯವಾಗುತ್ತದೆ. ಸ್ವಾತಂತ್ರ್ಯೋದಯದ ನಂತರ ದೀನದಲಿತ ಸಮಾಜ ಜಾಗೃತಗೊಳ್ಳುತ್ತದೆ; ಅದರ ಫಲವಾಗಿ ದಲಿತ ಬಂಡಾಯ ಪಂಥಗಳ ಮೂಲಕ ಬಹು ಪ್ರಮಾಣದಲ್ಲಿಲ್ಲದಿದ್ದರೂ ವಾಸ್ತವ ಸಾಹಿತ್ಯ ಇಣುಕುತ್ತದೆ.

ನವೋದಯ ಕಾಲದಲ್ಲಿ ಉತ್ತಮ ವರ್ಗದಿಂದ ಬಂದ ಇಬ್ಬರೋ ಮೂವರೋ ಸಾಹಿತಿಗಳು ಗ್ರಾಮೀಣ ಜೀವನವನ್ನೂ ರೈತನ ಬಾಳನ್ನೂ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. ಆದರೆ ಗ್ರಾಮೀಣ ಸಮಾಜದ ಸಮಸ್ಯೆಗಳಿಗೆ, ರೈತ ಜೀವನದ ಹೀನಸ್ಥಿತಿಗೆ ಕನ್ನಡಿ ಹಿಡಿದವರು ಇಲ್ಲವೆಂದರೂ ತಪ್ಪಾಗದು. ಕಾರಣ ಅವರು ಆ ಜೀವನವನ್ನು ಮಡಿವಂತಿಕೆಯೇ ಇಲ್ಲದೆ ಅಣಕದ ಮನೋಧರ್ಮದಿಂದ ನೋಡಿದ್ದಾರೆಯೇ ಹೊರತು ಸಹಾನುಭೂತಿಯ ಮಾನವತಾ ದೃಷ್ಟಿಯಿಂದಲ್ಲ. ರೈತರ ಮನೆಯಲ್ಲಿಯೇ ಹುಟ್ಟಿ, ಅವರ ನಡುವೆಯೇ ಬೆಳೆದು, ಅವರ ಬಾಳಿನಲ್ಲಿ ಒಂದಾಗಿ ಬೆರೆತವರಿಗೆ ಮಾತ್ರ ಅವರ ಬದುಕಿನ ವಿವಿಧ ಮುಖಗಳ ಪರಿಚಯ ಸಿದ್ಧಿಸುತ್ತದೆ. ಅವರ ಸಮಸ್ಯೆಗಳು ಅರ್ಥವಾಗುತ್ತದೆ. ಅಂಥ ಸಾಹಿತಿಗಳು ಈಚೀಚೆಗೆ ಅಲ್ಲೊಬ್ಬರು ಇಲ್ಲೊಬ್ಬರು ಕಾಣ ಸಿಗುತ್ತಾರೆ. ಅವರಿಗೆಲ್ಲ ಮಕುಟ ಪ್ರಾಯರಾಗಿ, ಅಧ್ವರ್ಯುವಾಗಿ, ಪಂಥ ನಿರ್ಮಾಪಕರಾಗಿ ಕುವೆಂಪು ಅವರು ರೈತ ಸಾಹಿತ್ಯವನ್ನೂ ರಚಿಸಿದ್ದಾರೆ. ರೈತರ ಕಷ್ಟನಿಷ್ಠುರಗಳನ್ನು ಹಸಿಹಸಿಯಾಗಿ, ತನಿ ತನಿಯಾಗಿ, ನೇರವಾಗಿ, ಮರೆಯಾಗಿ, ಹಲವು ರೀತಿಗಳಲ್ಲಿ ವಿವರಿಸಿದ್ದಾರೆ. ರೈತರ ಬದುಕನ್ನು ಅವರಂತೆ ತಲಸ್ಪರ್ಶಿಯಾಗಿ ಅರ್ಥ ಮಾಡಿಕೊಂಡಿರುವವರು ರಾಜಕಾರಣಿಗಳಲ್ಲಿಯೂ ಇಲ್ಲ. ಸಮಾಜ ಸುಧಾರಕರಲ್ಲಿಯೂ ಇಲ್ಲ. ರೈತರ ಬಗೆಗಿರುವ ಅವರ ಕಾಳಜಿ ಅವರ ಪದ್ಯ ಗದ್ಯ ಕೃತಿಗಳಲ್ಲಿ, ನಾಟಕಗಳಲ್ಲಿ,

ಕಾದಂಬರಿ ಮಹಾಕಾವ್ಯಗಳಲ್ಲಿ ಅವಕಾಶ ಸಿಕ್ಕಿದಾಗಲೆಲ್ಲ ಉಕ್ಕಿ ಹರಿಯುತ್ತದೆ. ಬೆಚ್ಚಿದ ಮನವನ್ನು ಸೆಳೆಯುತ್ತವೆ; ಜೀವಕ್ಕೆ ಶಾಂತಿಯನ್ನೂಡುತ್ತವೆ.

'ಬದಲಾವಣೆಗಾಗಿಯೇ ಬರಹ' ಎಂದು ನಂಬಿದವರು ಕುವೆಂಪು. ಅವರ ವಿಚಾರ ಪ್ರಧಾನವಾದ ಕವನಗಳಲ್ಲಿ 'ಹಾಳೂರು' ಎಂಬ ದೀರ್ಘ ಕವನ ಅವರ ಸಾರ್ವಕಾಲಿಕ ಪ್ರಸ್ತುತ ಗುಣಕ್ಕಾಗಿಯೇ ವಿಶಿಷ್ಟವಾದ ಕವನ.

ಈ ಕವನವನ್ನು ಕುವೆಂಪು 1926ರಲ್ಲಿ ಬರೆದರು. ಇದು 538 ಪಂಕ್ತಿಗಳುಳ್ಳ ದೀರ್ಘ ಕವನ. ಗೋಲ್ಡ್‌ಸ್ಮಿತ್ ಕವಿಯ 'ಡೆಸರ್ಟೆಡ್ ವಿಲೇಜ್' ಇದಕ್ಕೆ ಸ್ಫೂರ್ತಿ. ಅಂದಿನ ಭಾರತದ ಹಳ್ಳಿಗಳ ದುಃಸ್ಥಿತಿ-ಗತಿಗಳೇ ಇದಕ್ಕೆ ಪ್ರೇರಣೆ. ವಸಾಹತುಶಾಹಿಯ ದಬ್ಬಾಳಿಕೆ, ಕೈಗಾರಿಕೀಕರಣ ಪ್ರಕ್ರಿಯೆಗಳಿಂದಾಗಿ ಹಳ್ಳಿಗಳ ದೇಶವಾಗಿದ್ದ ಭಾರತ 'ಹಾಳೂರು' ಆಗಿ ಸ್ಥಿತ್ಯಂತರ ಹೊಂದುತ್ತಿದ್ದ ದುರಂತವೇ ಈ ಕವನದ ವಸ್ತು.

ಇಲ್ಲಿ ಎರಡು ರೀತಿಯ ಪ್ರಸ್ತುತತೆಯನ್ನು ಗಮನಿಸಬಹುದು.

1. ಕುವೆಂಪು ಅವರು ತಮ್ಮ ಕಾಲದ ಪ್ರಸ್ತುತೆಗೆ ಸ್ಪಂದಿಸಿರುವುದು.

2. ಇಂದಿಗೂ ಕುವೆಂಪು ಅವರ ಹಾಳೂರು ಕವನ ಪ್ರಸ್ತುತವಾಗಿರುವುದು.[2] ಎಂದು ಕೆ.ಎ.ಲತಾ ಗುರುತಿಸಿದ್ದಾರೆ.

ಈ ಕವನದ ಪ್ರಸ್ತುತ ಗುಣ ಸ್ಪಷ್ಟವಾಗಲು ಆ ಕಾಲದ ಚಾರಿತ್ರಿಕ ಸ್ಥಿತ್ಯಂತರಗಳ ಹಿನ್ನೆಲೆಯಲ್ಲಿ ಗಮನಿಸಬೇಕು.

18ನೇ ಶತಮಾನದಲ್ಲಿ 'ಹಣವೇ ಎಲ್ಲಕ್ಕೂ ಮೂಲ' ಎಂದು ನಂಬಿದ ಅರ್ಥಶಾಸ್ತ್ರಜ್ಞರು ಇಡೀ ಸಮಾಜವನ್ನು ಸಾರಾಸಗಟಾಗಿ 'ಉತ್ಪಾದಕ ಮತ್ತು ಅನುತ್ಪಾದಕ ಎಂದು ವಿಭಾಗಿಸಿಬಿಟ್ಟರು''[3] ಪರಿಣಾಮವಾಗಿ ಮಾನವಿಕ ನೆಲೆಯ ಪ್ರಕ್ರಿಯೆಗಳಿಗಿಂತ ಹಣವೇ ಜೀವನದ ಕೇಂದ್ರವಾಗಲಾರಂಭಿಸಿತು. ರಷ್ಯಾ ಕೈಗಾರಿಕೀಕರಣದಿಂದ ತೀವ್ರ ವೇಗವಾಗಿ ಅಭಿವೃದ್ಧಿ ಹೊಂದಿತು. ಈ ಪ್ರಭಾವ ಜಗತ್ತಿನೆಲ್ಲೆಡೆ ಪಸರಿಸಲಾರಂಭಿಸಿತು. ''19ನೇ ಶತಮಾನದಲ್ಲಿ ಭಾರತದಲ್ಲಾದ ಕೈಗಾರಿಕೀಕರಣ ಪಾಶ್ಚಿಮಾತ್ಯರ ಹಿತಕ್ಕೆ ಅನುಗುಣವಾಗಿತ್ತೇ ಹೊರತು, ಭಾರತ ದೇಶದ ಸ್ಥಿತಿ-ಗತಿಗೆ ಅನುಗುಣವಾಗಿ ಅಲ್ಲ. ಭಾರತದಲ್ಲಿ ಆಗ ಉಂಟಾದ ಆಧುನಿಕ ಬಡತನ-ಪಾರಂಪರಿಕ ಉದ್ಯೋಗಗಳ ವಿನಾಶಕ್ಕೆ, ಬ್ರಿಟೀಷ್ ಗಿರಣಿಗಳ ದಾಹವೇ ಕಾರಣ. ಬದುಕಿನ ವಿಧಾನಗಳನ್ನು ಅಥವಾ ಜೈವಿಕ ಶಕ್ತಿಗಳನ್ನು ದೇಶೀಯರಿಗೆ ಇಲ್ಲದಂತೆ ಮಾಡಿ ಸ್ಥಳೀಯ,

ಸ್ವಾವಲಂಬನೆಯ ಮಾರ್ಗಗಳನ್ನು ಹಾಳು ಮಾಡಲಾಯಿತು.''[4] ಕುವೆಂಪು ಈ ದುರಂತದ ಸ್ಥಿತ್ಯಂತರವನ್ನು ಹಾಳೂರು ಕವನದಲ್ಲಿ ದೀರ್ಘವಾಗಿ ವಿವೇಚಿಸಿದ್ದಾರೆ.

ಈ ಮೇಲಿನ ಚಾರಿತ್ರಿಕ ಪ್ರಕ್ರಿಯೆಗಳನ್ನು ಗಮನಿಸಿದಾಗ ಆ ಕಾಲದ ವಸಾಹತುಶಾಹಿ ದಬ್ಬಾಳಿಕೆ, ರಾಷ್ಟ್ರೀಯತೆಯ (ದೇಶೀಯತೆ), ನಾಶ, ಕೃಷಿ ನೇಯ್ಗೆ ಗಳಂತಹ ಕಸುಬುಗಾರಿಕೆಗಳ ನಾಶ, ಸಂಪನ್ಮೂಲಗಳ ನಾಶ ಮುಂತಾದವುಗಳನ್ನು ವಿರೋಧಿಸಿ ರಾಷ್ಟ್ರದಾದ್ಯಂತ ನಡೆಯುತ್ತಿದ್ದ ಚಿಂತನೆ, ಹೋರಾಟ, ಸುಧಾರಣೆ, ಚಳುವಳಿಗಳ ರಾಷ್ಟ್ರೀಯ ಮುಖ್ಯವಾಹಿನಿಯಾಗಿ ಕುವೆಂಪು ಈ ಕಾವ್ಯಾಭಿವ್ಯಕ್ತಿಯ ಮೂಲಕ ಕನ್ನಡದ ಒಂದು ಸಂವೇದನೆಯನ್ನು ಕಟ್ಟಿ ಕೊಟ್ಟಿದ್ದಾರೆ. ಹಾಳೂರು ಕವನದಲ್ಲಿ ಈ ಸಂವೇದನೆಯ ಸ್ವರೂಪವನ್ನು ನೋಡಬಹುದು.

ಕವನದ ಆರಂಭದಲ್ಲಿ ಪುರದ ಗೆಳೆಯನಿಗೆ ಹಾಳಾದ ಊರನ್ನು ಬಂದು ನೋಡೆಂದು ಕರೆ ಕೊಡುತ್ತಾರೆ. ಇದು ಕೇವಲ ಊರಲ್ಲ, ದೇಶಕ್ಕೆ ಅನ್ನ ಕೊಡುವ ರೈತರ ಬೀಡು. ಆದರೆ ಇಂದು ಹಳ್ಳಿಗರು ಪುರವೆಂಬ ಮಾರಿಗೆ ಉಣಿಸಾಗಿ, ಹಳ್ಳಿ ನಿರ್ಜನವಾಗಿ, ಪಾಳು ಬಿದ್ದು ಹಾಳೂರಾಗಿದೆ. ಇದು ಹಾಳೂರಿನ ಸ್ಥಿತಿ. ಅದರ ಗತವೈಭವದ ಸ್ಮರಣೆ ಮೊದಲಾಗುತ್ತದೆ. ಬಾಲ್ಯದಲ್ಲಿ ಪ್ರಕೃತಿ ಮಡಿಲಲ್ಲಿ ತಾವಾಡಿದ ಆಟಗಳನ್ನೆಲ್ಲಾ ಸ್ಮರಿಸಿಕೊಳ್ಳುತ್ತಾ ಅದೇ ಗಾಳಿ, ಸೂರ್ಯ, ಗಗನ ಆದರೆ ಅಂದಿನ 'ಬೆಳಕು' ಇಲ್ಲ 'ಆನಂದ' ಇಲ್ಲ ಎನ್ನುತ್ತ ಭವಿಷ್ಯ ನುಡಿಯುತ್ತಾರೆ. ''ಹಳ್ಳಿಯಿದು ಹಾಳಾಯ್ತು ಮುಂದೆ ಎಂದೆಂದೂ''.....

ನಾಡಿನ ಉಳಿವಿನೊಂದಿಗೆ ನುಡಿಯನ್ನು ಕಾಯ್ದುಕೊಳ್ಳಬೇಕಾದ ಅನಿವಾರ್ಯತೆಯನ್ನು ಎತ್ತರದ ಧನಿಯಲ್ಲಿ ಹೇಳುತ್ತಾರೆ. ಅಂದಿನ ಹಳ್ಳಿಗೆ ತಾತಯ್ಯಾನೇ ವಿದ್ವಾಂಸ, ಅಲ್ಲಿಯ ಆಚಾರ್ಯ, ಆತನ ಜೈಮಿನಿಯೇ ಮಹಾಗ್ರಂಥ. ಆ ಸೀಮಿತ ವಿದ್ಯೆಯೊಳಗಿದ್ದ ತಾಯ್ನುಡಿ ಪ್ರೇಮ ನಮಗಿದ್ದಿದ್ದರೆ ತಾಯ್ನುಡಿಗೆ ಚಿಂತೆಯೇ ಇಲ್ಲ. ಆದರೆ ನಾವೀಗ ಮಾತೃ ಭಾಷೆ ದೂರ ತಳ್ಳಿ ಪರಭಾಷೆ ಚುಂಬಿಸಿ, ಹಾರ ಹಾಕುತ್ತಾ ನಮ್ಮತನವನ್ನೆ ಕಳೆದುಕೊಳ್ಳುತ್ತಿದ್ದೇವೆ ಎನ್ನುತ್ತಾ ತಾಯ್ನುಡಿಗಿರುವ ಸತ್ವ, ಘನತೆ, ಮಾಧುರ್ಯ, ಪರಂಪರೆಗಳನ್ನು ಮಹಾಕವಿಗಳನ್ನು ಹೆಸರಿಸುವ ಮೂಲಕ ಆತ್ಮಾಭಿಮಾನವನ್ನೆ ಜಾಗೃತಗೊಳಿಸುತ್ತಾರೆ.

ಹೀಗೆ ನಾಡು-ನುಡಿ ಪ್ರೇಮ ಕಳಕೊಂಡ ಊರಿನವರು ಪುರ ಸೇರಿದ್ದಾರೆ. ಊರು ಹಾಳಾಗಿದೆ. ಅವರ ಈ ಓಟಕ್ಕೆ ಕಾರಣ ಕಾರ್ಖಾನೆಗಳ ಕೂಲಿಯಾಸೆ. ಆ ಮೂಲಕ ಕೈಗಾರಿಕೀಕರಣ ಸೃಷ್ಟಿಸಿದ ನಗರ ಬದುಕಿನ ಭೋಗಮಯ ಆಕರ್ಷಣೆಗಳು. ಇಲ್ಲಿಗೆ ಬಂದು ಅವರು ಕಲಿತದ್ದು ಕುಡಿತ, ಜೂಜಾಟ, ಬಟ್ಟೆಯ ಆಡಂಬರ,

ಸಿನಿಮಾ, ನಾಟಕಗಳ ದುರ್ನಡತೆ. ಇದರಿಂದ ಅವರ ಸ್ಥಿತಿ ಹಳ್ಳಿಯೂ ಸುಖವಿಲ್ಲ, ಪುರದ ಸುಖವಿಲ್ಲದ ತ್ರಿಶಂಕು ಸ್ಥಿತಿ. ಹಳ್ಳಿ-ಪುರಗಳ ಬದುಕುಗಳಲ್ಲಿ ಯಾವುದು ಒಳಿತು? ಯಾವುದು ಕೆಡಕು? ಎಂದು ವಿವೇಚಿಸುತ್ತಾ ಹಳ್ಳಿಯಲ್ಲಿ ಗಂಜಿ ಉಂಡರೂ ರಾಜನಾಗಿರುವ, ದಾಸ್ಯವಿಲ್ಲದ ಸ್ವಾತಂತ್ರ್ಯ, ಸ್ವಾವಲಂಬಿ, ನಿರ್ಗರ್ವಿ, ನಿರಾಡಂಬರಿ. ಪುರದಲ್ಲಿ ಅನ್ನಕ್ಕೆ ಕೈಯೊಡ್ಡುವ ದಾಸ್ಯ, ಅಶಾಂತಿ, ಸೋಮಾರಿತನ, ಷೋಕಿಗಳ ನರಕ. ಹಣವಿದ್ದರೂ ಪುರ ಗೋಳು ಪಾರತಂತ್ರ್ಯ ಎಂದು ವಿವರಿಸುತ್ತಾರೆ. ''ಹಳ್ಳಿಗನೇ, ಪುರದವನ ಅನುಸರಿಸಬೇಡ, ಹಳ್ಳಿಯೇ ಸ್ವರ್ಗವೈ, ಅದ ಬಿಡಲೂ ಬೇಡ''ಎನ್ನುತ್ತಾರೆ.

ಅಂದು ಸಂತಸದಿ ನಲಿದಾಡಿದ ನಮ್ಮೂರು ಇಂದು ಮಸಣವಾಗಿ ಹಾಳೂರಾಗಿದೆ. ಹಾಗಾಗಿರುವುದಕ್ಕೆ ಕಾರಣಗಳನ್ನೂ ಬಿಡಿಸುತ್ತಾ ಆಧುನಿಕ ಶಿಕ್ಷಣ ಪದ್ಧತಿಯಿಂದ ಕಲಿಕೆಯಲ್ಲಾದ ಬುದ್ಧಿ-ಹೃದಯ ಬೆಸೆಯದ ಒಂದು ಕೆಟ್ಟ ಬದಲಾವಣೆಯನ್ನು ಗುರುತಿಸುತ್ತಾರೆ. ಮರಳ ಮೇಲೆ ಅಕ್ಷರ ಕಲಿಸೊ ಮಠದ ಬಡ ಗುರು ವಿದ್ವಾಂಸರಲ್ಲವಾದರೂ ಕರಗುವ ಮನವುಳ್ಳ ಹೃದಯವಂತ.ಪ್ರಾಥಮಿಕ ಶಿಕ್ಷಣ ಮುಗಿಸಿ ಮುಂದೆ ಪುರಕ್ಕೆ ಹೋಗಿ ಕಲಿತವರೆಲ್ಲಾ ನಗರದ ಚಾಕರಿ ಹಿಡಿದು ಅಲ್ಲೆ ನೆಲೆಯಾದರು. ಊರ ಜಾಣರು ಪುರದ ಪಾಲಾದರು. ಹಳ್ಳಿಯನ್ನು ಮರೆತರು. ಕಲಿತ ಸಮಕಾಲೀನ ಯುವಕರಿಗೆ ಕುವೆಂಪು ಹಾಕುವ ಪ್ರಶ್ನೆ ''ಯಾರಿಂದಲಾಗುವುದು ಹಳ್ಳಿಯುದ್ಧಾರ?'' ಈ ಕಲಿತ ನಗರ ಪ್ರಜ್ಞೆ ಎಷ್ಟು ಅಮಾನವೀಯವೆಂದರೆ ಹಳ್ಳಿಯನ್ನೇ ದೂರಿ, ಹಳ್ಳಿಯನ್ನೇ ಸುಲಿದು, ಹಳ್ಳಿಯ ತಂದೆಯನ್ನು ನಮ್ಮೂರ ಆಳೆಂದು ಹೇಳುವಷ್ಟು.ಮುಂದುವರಿದ್ದಾರೆ.

ಹೀಗೆ ಹಳ್ಳಿಯ ತರುಣರ ಮನುಷ್ಯತ್ವವನ್ನೇ ನಾಶ ಮಾಡಿ ನಗರ ಬೆಳೆಯುತ್ತ ಹಳ್ಳಿ ನಾಶವಾಗುತ್ತಿದೆ. ಆದರೆ ನಮ್ಮ ದೇಶದ ಜೀವ ಎಂದರೆ ಹಳ್ಳಿ. ಈ ಯಂತ್ರಘೋಷ ಮಾರಿಯಂತೆ ಕೃಷಿಯನ್ನು ನಾಶ ಮಾಡಿ ಹಸಿವು ಬಡತನ ಹೆಚ್ಚಿಸುತ್ತಿದೆ. ಇದು ಪುಣ್ಯದ ವೇಷಧರಿಸಿರುವ ಪಾಪ. ದೇಶದ ಈ ದುಸ್ಥಿತಿಯಲ್ಲಿ ಸಾರ್ಥಕ ಕರ್ತವ್ಯವೆಂದರೆ ಹಳ್ಳಿಯ ಉದ್ಧಾರ.

ಹಳ್ಳಿಗಳು ಹಾಳೂರಾಗಿದ್ದು ಪರಕೀಯರ ದಬ್ಬಾಳಿಕೆ ಶೋಷಣೆಗಳಿಂದ. ಇದು ಸಾಧ್ಯವಾದದ್ದೂ, ನಮ್ಮೊಳಗಿರುವ ಅವೈಜ್ಞಾನಿಕ-ಅಮಾನವೀಯ ಜಾತಿ ಪದ್ಧತಿ-ಧಾರ್ಮಿಕ ಮೌಢ್ಯಾಚರಣೆಗಳಿಂದ. ಇದು ಇಂದಿನ ಮತೀಯತೆ ಕೋಮು ಘರ್ಷಣೆಗಳ ದಳ್ಳುರಿಯಲ್ಲಿರುವ ಭಾರತದ ಪರಿಸ್ಥಿತಿಗೂ ಅತಿ ಪ್ರಸ್ತುತವಾಗಿರುವ ವಿಚಾರ ಸರಣಿಯಾಗಿದೆ.

ಹಾಳೂರು ಕವನ ವಸ್ತುವಿನ ನೆಲೆಯಲ್ಲಿ ನೋಡಿದಾಗ ಅತೀ ಮಹತ್ವದ್ದಾಗುತ್ತದೆ. ಕುವೆಂಪುರವರು ಎಷ್ಟು

ತೀವ್ರವಾಗಿ ತಮ್ಮ ಸಮಕಾಲೀನ ಬದುಕಿನ ಆಗು-ಹೋಗುಗಳಿಗೆ ಸ್ಪಂದಿಸುತ್ತಿದ್ದರೆಂಬುದು ತಿಳಿಯುತ್ತದೆ. ಸಾಹಿತಿಗೆ ಇರಬೇಕಾದ ಸಾಮಾಜಿಕ ಜವಾಬ್ದಾರಿ-ಜನಪರ ಕಾಳಜಿ-ಪ್ರಸ್ತುತ ಪ್ರಜ್ಞೆಗಳಿಗೆ 'ಹಾಳೂರು' ಕವನ ನಿದರ್ಶನವಾಗಿದೆ.

ರೈತನ ದೃಷ್ಟಿಯಿಂದ 'ಗೊಬ್ಬರ' ಕವಿತೆ ಅತ್ಯಂತ ಮಹತ್ವದ್ದು. ಕುವೆಂಪು ಇದನ್ನು ರಚಿಸಿದ್ದು 1935ರ ಸುಮಾರಿಗೆ ಎನ್ನುವುದನ್ನು ನಾವು ಗಮನದಲ್ಲಿಟ್ಟಿರಬೇಕು.

ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ? ಹಾ
ಕಡುಕಷ್ಟ ! ಕಲಿಕಾಲಕೇನೇನು ಬಂದಪುದೋ?
ಸಾಲದೇಂ ಪ್ರಲಯಕಿದೆ ಪೀಠಿಕೆ? ಇನ್ನೇನು
ಕಾರಣಂ ಬೇಕಯ್ಯ ನಿನಗೆ, ತಾಂಡವಮೂರ್ತಿ,
ಕಲ್ಕ್ಯಾವತಾರವನ್ನೆತ್ತಿ ಬರೆ? ಇದಕ್ಕಿಂತ
ಧರ್ಮವಧೆ ಬೇರುಂಟೆ? ನಿರ್ಮಲ ಸರಸ್ವತಿಯ
ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ
ಗುಂಡಿಯನ್ನಗೆಯ ಗುದ್ದಲಿಯ ಮಾಡಿಹನಲ್ಲ.[5]

ಕನ್ನಡ ನವೋದಯ ಸಂದರ್ಭದಲ್ಲಿ ವಸ್ತು, ಭಾಷೆ-ಎರಡರಲ್ಲೂ ಕ್ರಾಂತಿಕಾರಕ ಬದಲಾವಣೆಗಳಾಗಿದ್ದರೂ ಶೂದ್ರ ಸಮುದಾಯದಿಂದ ಬಂದ ಕುವೆಂಪು ಎದುರಿಸಿದ ಸವಾಲು ಉಳಿದೆಲ್ಲರಿಗಿಂತ ಭಿನ್ನವಾಗಿತ್ತು. 'ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ?' ಎಂಬುದು ಕೇವಲ ಕಾವ್ಯವಸ್ತುವನ್ನು ಕುರಿತ ಪ್ರಶ್ನೆ ಮಾತ್ರವಲ್ಲ, ಸಂಸ್ಕೃತಿ ಸಂಬಂಧೀ ಪ್ರಶ್ನೆಯೂ ಹೌದು.

'ನಿರ್ಮಲಸರಸ್ವತಿಯ ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ ಗುಂಡಿಯನ್ನಗೆಯ ಗುದ್ದಲಿಯ ಮಾಡಿಹನಲ್ಲ!'-ಇದು ಸರಿಯೇ ಇದುವರೆಗೆ ಕವಿತೆ ಕೈ ಕೆಸರು ಮಾಡಿಕೊಳ್ಳದೆ ಮೊಸರನುಣ್ಣುತಿದ್ದ ಪಂಡಿತರ ದಿವ್ಯ ಜಿಹ್ವಾಲಸದ್ರಂಗದಲಿ ಕುಣಿದಾಡಿ, ನಲಿದಾಡುತ್ತಿತ್ತು. ಆದರೆ ಈಗ-'ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ ಗಂಧ ಪುನುಗು ಜವಾದಿ ಕಸ್ತೂರಿಗಳನುಳಿದು ಸಗಣಿಗಂಪಾಘ್ರಾಣಿಪಂತಾಯ್ತೆ?'

ಇದು ಕೇವಲ ಸಂಸ್ಕೃತಿಯ ಪ್ರಶ್ನೆ ಮಾತ್ರವಲ್ಲ, ಸಂವೇದನೆಯ ಪ್ರಶ್ನೆಯೂ ಹೌದು. ಕೈ ಕೆಸರು ಮಾಡಿಕೊಳ್ಳದೆ ಮೊಸರನುಣ್ಣುವ ಪಂಡಿತರ ಸಂವೇದನೆಗೂ, ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ ಸಗಣಿಯ ಕಂಪನ್ನು ಆಘ್ರಾಣಿಸುವ ಸಂವೇದನೆಗೂ ಅಂತರವಿದೆ.[6] ಎಂಬುದನ್ನು ತಮ್ಮ ಲೇಖನದಲ್ಲಿ ನರಹಳ್ಳಿ

ಬಾಲಸುಬ್ರಮಣ್ಯಂ ಅಭಿಪ್ರಾಯಿಸಿದ್ದಾರೆ.

ಈ ಅಂತರವನ್ನೇ ಕವಿ ಇಲ್ಲಿ ಸೂಚಿಸುತ್ತಿದ್ದಾರೆ. ಬದಲಾದ ಈ ಕಾವ್ಯ ಸಂವೇದನೆಯನ್ನು ಆಗಿನ ಕನ್ನಡ ಸಂಸ್ಕೃತಿ ಬಹುಶಃ ಮುಕ್ತ ಮನಸ್ಸಿನಿಂದ ಸ್ವೀಕರಿಸುವ ಸ್ಥಿತಿಯಲ್ಲಿರಲಿಲ್ಲ. ಕವಿಗಳು ತಾವೆನ್ನುತ್ತ ಬೊಬ್ಬಿರಿದು ಕಾವ್ಯ ಬರೆದರೆ ಅದು ಕಾವ್ಯವಾಗುತ್ತದೆಯೇ? ಗೊಬ್ಬರದ ಮೇಲೆ ಕಾವ್ಯ ಬರೆದರೆ ಅದು ಗಂಡು ಗರ್ಭಿಣಿಯಾದಂತೆ! ಕಾವ್ಯವಾಗುವುದು ಸಾಧ್ಯವೇ ಇಲ್ಲ. ಇದು ಆಗಿನ ಕನ್ನಡ ಸಂಸ್ಕೃತಿ ಸ್ಥಿತಿ. ಕುವೆಂಪು ಶೂದ್ರ ಸಂಸ್ಕೃತಿಯನ್ನು ಕುರಿತು ಬರೆಯುವುದು ಮಾತ್ರವಲ್ಲ, ಬರೆದದ್ದಕ್ಕೆ ಮಾನ್ಯತೆ ಸಿಗುವ ಹಾಗೆ ನೋಡಿಕೊಳ್ಳುವ ಸವಾಲೂ ಅವರಿಗಿತ್ತು. ಆಗಿನ ಸಾಂಸ್ಕೃತಿಕ ಅಧಿಕಾರ ಕೇಂದ್ರಗಳು ಕಾವ್ಯದ ವಸ್ತು, ಸ್ವರೂಪವನ್ನು ನಿರ್ಧರಿಸುತ್ತಿದ್ದುದರಿಂದ ಅಂಚಿನಲ್ಲಿ ನಿಂತ ಕುವೆಂಪು ಈ ಸವಾಲನ್ನು ಸ್ವೀಕರಿಸಿ ಕಾವ್ಯ ರಚಿಸಿದ್ದೇ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಘಟನೆ.

> "ಗೊಬ್ಬರವನಲ್ಲಗಳೆಯುವೆ ಏಕೆ ಮರದ ತುದಿ
> ನಲ್ಗಂಪುವೆತ್ತು ತಂಗಾಳಿಗೊಲೆಯುವ ಹೂವೆ ?
> ಬೇರುಗಳಿಗಿಲ್ಲದಿರೆ ಗೊಬ್ಬರಂ, ಹೇಳೆನಗೆ,
> ವೃಕ್ಷಕೆಲ್ಲಿಯದು ಹೂವಿನ ಹಬ್ಬ? ಗೊಬ್ಬರದ
> ಜೀವವನೆ ಹೀರಿ ಕೊಬ್ಬಿಹ ಹೂವೆ, ಕಬ್ಬಕ್ಕೆ
> ನೀಂ ಮಾತ್ರ ವಸ್ತುವೇಂ? ನಿನ್ನಂತೆ ಗೊಬ್ಬರಂ
> ಕಬ್ಬಕ್ಕೆ ಸಾಮಗ್ರಿಯಾಗಬಾರದೆ ಹೇಳು?[7]

ಎರಡು ಸಂಸ್ಕೃತಿಗಳ ಸಂಘರ್ಷವನ್ನಿಲ್ಲಿ ನಾವು ಕಾಣಬಹುದಾಗಿದೆ. ಕೆಳ ಸಂಸ್ಕೃತಿಯ ವಕ್ತಾರರಾಗಿ ಕುವೆಂಪು ಇಲ್ಲಿ ಮೇಲು ಸಂಸ್ಕೃತಿಯನ್ನು ಪ್ರಶ್ನಿಸುತ್ತಿದ್ದಾರೆ. ಮಾತ್ರವಲ್ಲ, ಮೇಲು ಸಂಸ್ಕೃತಿಯ ಅಸ್ತಿತ್ವದ ಬೇರುಗಳು ಎಲ್ಲಿವೆ ಎಂದು ಕೇಳುವ ಮೂಲಕ ಕೆಳ ಸಂಸ್ಕೃತಿಯ ಪ್ರಾಮುಖ್ಯತೆಯನ್ನು ಪ್ರತಿಪಾದಿಸುತ್ತಿದ್ದಾರೆ.

ಈ ಕವಿತೆಯ ಕಡೆಯ ಭಾಗ ಸಮಾಜದ ಆರ್ಥಿಕ ರಚನೆಗೂ ಸಂಸ್ಕೃತಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಹಾಗೆಯೇ ಅದು ಅಧಿಕಾರ ಸಂಬಂಧವನ್ನು ಒಳಗೊಳ್ಳುತ್ತದೆ.

> ಗೊಬ್ಬರಂ ಸಿಂಹಾಸನಕ್ಕೇರಿದಾ ದಿನಂ
> ತನ್ನ ಹೊಗಳಿದ ಕಬ್ಬಿಲನ ಕಬ್ಬಿಗನ ಮಾಡಿ
> ಮೆರೆಯುವುದು ! ಅಂದು ಗೊಬ್ಬರದ ಕಂಪೆಲ್ಲರ್ಗೆ
> ಪರಿಮಳದ್ರವ್ಯ ತಾನಾದಪುದು ! ಏತಕೆನೆ,

ಸಿರಿವೆರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ
ಇಲ್ಲದಿರೆ ಪುನುಗು ತಾನಾದೊಡಂ ಗೊಬ್ಬರಂ![8]

ವಸಾಹತ್ತೋತ್ತರ ಚಿಂತನೆಯ ಸಂದರ್ಭದಲ್ಲಿ ಕುವೆಂಪು ಅವರ ಸಾಹಿತ್ಯದ ಅಧ್ಯಯನ ನಮ್ಮ ಇತ್ತೀಚಿನ ಅನೇಕ ಸಾಹಿತ್ಯ ಸಿದ್ಧಾಂತಗಳಿಗೆ ಅತ್ಯುತ್ತಮ ನಿದರ್ಶನವನ್ನೊದಗಿಸಿ ಬಿಡುತ್ತದೆ. ಅಥವಾ ಹೀಗೂ ಹೇಳಬಹುದು: ಕುವೆಂಪು ಸಾಹಿತ್ಯದ ಸೂಕ್ಷ್ಮ ಅಧ್ಯಯನ ಇವತ್ತಿನ ಅನೇಕ ಸಾಮಾಜಿಕ ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ಅರ್ಥಪೂರ್ಣ ಒಳನೋಟ ಒದಗಿಸುವ ಸಾಧ್ಯತೆಯಿದೆ. ಆಳುವ ಸಂಸ್ಕೃತಿ ಹಾಗೂ ಅಧೀನ ಸಂಸ್ಕೃತಿಗಳ ಸಂಬಂಧದ ಸ್ವರೂಪದ ಅನೇಕ ಎಳೆಗಳು ಕುವೆಂಪು ಸಾಹಿತ್ಯದಲ್ಲಿ ಅನುಭವದ ನೆಲೆಯಲ್ಲಿಯೇ ಸಹಜವಾಗಿ ಅನಾವರಣಗೊಳ್ಳುತ್ತದೆ.

ಬೇಸಾಯವೂ ಒಂದು ತಪಸ್ಸೆಂದು, ಒಂದು ಯೋಗವೆಂದು ತಿಳಿದು ರೈತನನ್ನು ಮೊಟ್ಟ ಮೊದಲು ನೇಗಿಲಯೋಗಿಯೆಂದು ಕರೆದವರು ಕುವೆಂಪು ಅವರು. ಹಿಮಾಲಯದಲ್ಲಿ ಮೂಗು ಹಿಡಿದು, ಉಸಿರು ಕಟ್ಟಿ, ಬ್ರಹ್ಮಾನಂದದಲ್ಲಿ ತೇಲಾಡುವ ಮಹಾಋಷಿಗಳ ತಪಸ್ಸಿಗಿಂತ ನೇಗಿಲಯೋಗಿಯ ತಪಸ್ಸು ಕೀಳಲ್ಲವೆಂದು ಕವಿಯ ಅಭಿಮತ, ಪ್ರಪಂಚದ ಯಾವ ಸಾಹಿತ್ಯದಲ್ಲಿಯೂ ರೈತನಿಗೆ ಇಂಥ ಪಟ್ಟ ದೊರೆತದ್ದಿಲ್ಲ. ಕುವೆಂಪು ಅವರಂತೆ ಯಾವ ಮಹಾಕವಿಯೂ ರೈತನಿಗೆ ಅಪಾರ ಗೌರವವನ್ನು ಸಲ್ಲಿಸಿದ್ದಿಲ್ಲ.[6]

ನೇಗಿಲಯೋಗಿ
ನೇಗಿಲ ಹಿಡಿದಾ ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ.
ಫಲವನು ಬಯಸದ ಸೇವೆಯ ಪೂಜೆಯ
ಕರ್ಮವೆ ಇಹಪರ ಸಾಧನವು.
ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿನಿಯಮದೊಳಗನವೇ ಭೋಗಿ.[9]

ಈ ಶತಮಾನದ ಎರಡನೆಯ ದಶಕದಲ್ಲಿಯೇ ರಚಿಸಿದ 'ನೇಗಿಲಯೋಗಿ'(ಕೊಳಲು) ಕವಿತೆ ಜಗತ್ತಿನ ರೈತವರ್ಗಕ್ಕೆತ್ತಿದ ಆರತಿಯಾಗಿದೆ. ತಾನು ಕಲಿತ ಹಾಡುಗಳನ್ನು ಗುನುಗಿಕೊಳ್ಳುತ್ತ, ತನ್ನ ಕರ್ಮಕ್ಕೆ ಫಲವನ್ನೇ ಬಯಸದೆ ಇಹಪರಗಳಿಗೆ ಕರ್ಮವೇ ಸಾಧನವೆಂದು ಬಗೆಯುತ್ತ, ರೈತ ಎತ್ತುಗಳೊಡನೆ ಹೆಜ್ಜೆ ಹಾಕುತ್ತ ಉಳುತ್ತಾನೆ. ನೆಲವನ್ನು ರೈತ ಬಗೆಯುವ ಕುಳದ ಸದ್ದೇ ಅವನ ಹಾಡಿಗೆ ಶ್ರುತಿ; ಸಚರಾಚರ ವಸ್ತುಗಳೂ, ಜತೆಯ ಎತ್ತುಗಳೂ ಅವನ ಶ್ರೋತೃಗಳು. ರಾಮ ರಾಜ್ಯವಾಳಿದರೆ ರಾಗಿ ಬೀಸೋದು ತಪ್ಪೀತೆ ಎನ್ನುವ

ಕರ್ಮಯೋಗಿಯವನು. ನೆಪೋಲಿಯೆನ್ನನ ಯುದ್ಧವೋ, ವಿಕ್ಟೋರಿಯ ಮಹಾರಾಣಿಯ ಸಿಂಹಾಸನಾರೋಹಣವೋ, ಸ್ವಾತಂತ್ರ್ಯಾವತಾರವೋ, ಅಣುಬಾಂಬಿನ ಸಿಡಿತವೋ- ಯಾವುದೇ ಘಟನೆ ನಡೆಯುತ್ತಿದ್ದರೂ ಆ ಬಗ್ಗೆ ಅವನದು ದಿವ್ಯ ನಿರ್ಲಕ್ಷ್ಯ, ರಾಜ್ಯಗಳು ಉದಿಸಲಿ, ರಾಜ್ಯಗಳು ಅಳಿಯಲಿ, ಸೈನಿಕರು ಮುತ್ತಿಗೆ ಹಾಕಲಿ, ಅವನು ಮಾತ್ರ ಉತ್ತುಳುವುದನ್ನು ಬಿಡುವುದಿಲ್ಲ. ಅವನು ಹೆಸರಿಗಾಗಿ ಬಾಯೊಣಗಿಸಿಕೊಳ್ಳುವುದಿಲ್ಲ. ಗೌರವಕ್ಕಾಗಿ ಅಂಗಲಾಚುವುದಿಲ್ಲ. ಸುಖಕ್ಕಾಗಿ ಹಾತೊರೆಯುವುದಿಲ್ಲ. ಲೋಕಕ್ಕೆ ಅನ್ನವನ್ನು ನೀಡುವ ಈ ಜಗದ್ರಕ್ಷಕನ ಕಡೆಗೆ ರಾಜನ ಲಕ್ಷ್ಯ ಹರಿಯುವುದಿಲ್ಲ; ಶ್ರೀಮಂತ ಪುರೋಹಿತ ಅಧಿಕಾರಿಗಳಂತೂ ಅವನ ಶೋಷಣೆಯಲ್ಲಿಯೇ ಸದಾ ನಿರತರಾಗಿರುತ್ತಾರೆ.

ಬಾಳಿತು ನಮ್ಮಾ ನಾಗರಿಕತೆ ಸಿರಿ
ಮಣ್ಣುಣೆ ನೇಗಿಲನಾಶ್ರಯದಿ;
ನೇಗಿಲ ಹಿಡಿದ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಗಳೆಸೆದರು, ಕವಿಗಳು ಬರೆದರು.[10]

ಇದು ಕೃತಕತೆಯ ಯುಗ. ಬಟ್ಟೆ ಬಣ್ಣ ರಬ್ಬರು ಮೊದಲಾಗಿ ಅಸಂಖ್ಯ ಜೀವನಾವಶ್ಯಕ ವಸ್ತುಗಳು ಕೃತಕ ರೀತಿಯಲ್ಲಿ ತಯಾರಾಗುತ್ತಿವೆ. ಆದರೆ ಆಹಾರ ಪದಾರ್ಥಗಳನ್ನು ರೈತ ಬೆಳೆಯಬೇಕಾಗಿದೆಯೇ ಹೊರತು, ವಿಜ್ಞಾನಿ ಅವುಗಳನ್ನು ಕಾರ್ಖಾನೆಯಲ್ಲಿ ಸೃಷ್ಟಿಸಲಾರ. ರೈತ ಬೆಳೆದ ಆಹಾರವನ್ನು ತಿಂದೇ ವಿಜ್ಞಾನಿ ಬದುಕಬೇಕಾಗಿದೆ; ಪಂಡಿತ ಪುರೋಹಿತರು ಸೊಕ್ಕಿನಿಂದ ಮೆರೆಯಬಹುದಾಗಿದೆ; ಮುಖ್ಯಮಂತ್ರಿ ಪ್ರಧಾನಿಗಳು ಭೋಗವಿಲಾಸಗಳಲ್ಲಿ ಮುಳುಗಿ ತೇಲಬಹುದಾಗಿದೆ. ಯಾರು ಕಷ್ಟದಿಂದ ಅನ್ನವನ್ನು ಸಂಪಾದಿಸುತ್ತಾನೆಯೋ ಅವನೇ ತ್ಯಾಗಿ ; ಅಂಥ ತ್ಯಾಗಿಯೇ ಭೋಗಿ; ಅವನೇ ನೇಗಿಲಯೋಗಿ ಆದ್ದರಿಂದ

ನೇಗಿಲ ಕುಲದೊಳಗಡಗಿದೆ ಕರ್ಮ
ನೇಗಿಲ ಮೇಲೆಯೆ ನಿಂತಿದೆ ಧರ್ಮ.[11]

ಎನ್ನುವ ಕವಿಯ ಉಪನಿಷತ್ ಮಂತ್ರ ಸದೃಶವಾದ ಸುಭಾಷಿತದಲ್ಲಿ ಮೌಲ್ಯಗಳ ಮೌಲ್ಯ ಹುದುಗಿದೆಯೆಂದೇ ಹೇಳಬಹುದು.

ಹಲಾಯುಧದ ಬೀಷ್ಮ ಕಲಿ ರೈತನನ್ನು ಕುರಿತು ಎಷ್ಟು ಹಾಡಿದರು ಕವಿಗೆ ತೃಪ್ತಿಯಿಲ್ಲ. ಹೆಸರಿಲ್ಲದ ಹೆಸರರಿಯದ ಹೆಸರೊಲ್ಲದ ಆ ಮಹಿಮನನ್ನು ನಾಡದೇವಿಗೆ ಉಸಿರಾದವನನ್ನುಎಷ್ಟು ಕೊಂಡಾಡಿದರೂ

ಸಾಲದು. ನಾಡಿನ ಹಣೆಯ ಬರಹವನ್ನು ಬರೆಯುವ ಲೇಖನಿಯೇ ಅವನ ನೇಗಿಲ ಕುಳ. ಆ ಹೊಲದ ಗಾಂಧಿಯ ದೇಶಭಕ್ತಿ , ನೆಹರೂ ದೇಶಭಕ್ತಿಗಿಂತ ಕಡಿಮೆಯೇನಲ್ಲ.

ಬರಿಯ ಉಳುವ ಕುಳದ ಗೆರೆಯೆ?
ನಾಡ ಹಣೆಯ ಬರಹ ಬರೆವೆ!
ಹೊಲದ ಗಾಂಧಿ, ನೆಲದ ನಾಂದಿ,
ನೀನೆ ರಾಷ್ಟ್ರಶಕ್ತಿ; ನೆಹರುಗೇನು ಕಡಿಮೆಯೇನು
ನಿನ್ನ ದೇಶಭಕ್ತಿ[12]

ರೈತನನ್ನು ಕುರಿತ ಇಂಥ ಉದಾತ್ತ ಭಾವನೆಗಳು ಜಗತ್ತಿನ ಸಾಹಿತ್ಯದಲ್ಲಿಯೇ ಸಿಗದಂಥವು. ಮಾರ್ಕ್ಸ್ ಸಹ ಗುರುತಿಸಲಾಗದಿದ್ದ ರೈತನ ಸತ್ವ ಮಹತ್ವಗಳನ್ನು ಮೊತ್ತ ಮೊದಲಿಗೆ ಗುರುತಿಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲಬೇಕು. ಈ ರೈತ ಯಾವ ವಾಷಿಂಗ್‌ಟನ್, ನೆಲ್ಸನ್, ಚರ್ಚಿಲ್, ಗಾಂಧಿ, ನೆಹರುಗಳಿಗೆ ಕನಿಷ್ಟವಲ್ಲವೆಂಬ ಸಂಗತಿ ಈ ಪಂಕ್ತಿಗಳಲ್ಲಿ ಧ್ವನಿತವಾಗುತ್ತದೆ. ರೈತ ಸೃಜನಶೀಲ ಕಲೆಗಾಗಿ ಅವನು ಉಳುತ್ತಲೆ ಹಾಡು ಕಟ್ಟುತ್ತಾನೆ: ಹಾಡುತ್ತಲೆ ಉಳುತ್ತಾನೆ. ಎತ್ತು, ಕುಳ ಸುತ್ತಮುತ್ತಣ ನಿಸರ್ಗ ಅವನ ಕಲೆಗಾರಿಕೆಗೆ ಪ್ರೇರಣೆಯನ್ನೊದಗಿಸುತ್ತದೆ. ಅವನ ಹಾಡಿನಲ್ಲಿ ಗೊಬ್ಬರಕ್ಕಿಂತ ಮಿಗಿಲಾದ ಫಲವತ್ತನೂ, ಕುಳದ ಹರಿತವನ್ನೂ, ಎತ್ತುಗಳ ಉಲ್ಲಾಸವನ್ನೂ, ಕಣಜದ ಕಿಕ್ಕಿರಿತವನ್ನೂ ಕವಿ ಕಾಣುತ್ತಾನೆ. ಹೀಗೆ ಕವಿ ಕುವೆಂಪು ರೈತನಿಗೆ ಸಮಾಜದಲ್ಲಿ ವಿಶೇಷವಾದ ಸ್ಥಾನಮಾನವನ್ನು ಒದಗಿಸಿಕೊಡುವ ಮೂಲಕ ರೈತನಲ್ಲಿ ಸ್ವಾಭಿಮಾನ ಮೂಡಿಸಿ ತನ್ನ ಬಗ್ಗೆ ಇದ್ದ ಕೀಳರಿಮೆಯನ್ನು ಹೋಗಲಾಡಿಸುತ್ತಾರೆ.

ದೇಶ ಸುಭಿಕ್ಷವಾಗಿರಬೇಕಾದರೆ ರೈತ ಸಂತೃಷ್ಟನಾಗಿರಬೇಕು. ರೈತ ಸಂತೃಷ್ಟನಾಗಿರಬೇಕಾದರೆ ಭೂಮಿ ಸಮೃದ್ಧವಾಗಿರಬೇಕು. ದೇಶ, ರೈತ, ಭೂಮಿ ಮೂರು ಸಮೃದ್ಧವಾಗಿದ್ದಾಗ ಸಮಾಜ ಸುವ್ಯವಸ್ಥೆಯಿಂದ ಕೂಡಿರುತ್ತದೆ. ಸಮಾಜದ ಪರಿಸ್ಥಿತಿ ನಿಖರವಾಗಿರಬೇಕಾದರೆ ಅಥವಾ ಜೀವಂತವಾಗಿರಬೇಕಾದರೆ ಬೆಳೆ ಬೆಳೆಯುವ ರೈತ ಕ್ರಿಯಾಶೀಲ ಜೀವಂತಿಕೆಯನ್ನು ಬಳಸುತ್ತಿರಬೇಕು. ಈ ಕ್ರಿಯಾಶೀಲತೆ ರೈತನಿಗೆ ತೀರಾ ಅವಶ್ಯಕ ಮತ್ತು ಅನಿವಾರ್ಯ. ಅವನು ಇದರಲ್ಲಿ ತನ್ನನ್ನು ತೊಡಗಿಸಿಕೊಂಡಿರುತ್ತಾನೆ ಎಂಬುದೇನೊ ನಿಜ. ಆದರೆ ನಂತರದಲ್ಲಿ ಫಲದ ಅನುಭವಿಸಿಕೆಯಲ್ಲಿ ಅನ್ಯಾಯವಾಗುತ್ತಿರುವ ನೋವಿಗೆ ಕುವೆಂಪುರವರು ರೈತನ ದೃಷ್ಟಿ ಕವನದಲ್ಲಿ ಕಾರಣಗಳನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ.

ಕರಿಯರದೊ ಬಿಳಿಯರದೊ ಯಾರದಾದರೆ ಏನು?

ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯ ನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತಿರಿಗೆ!
ಕತ್ತಿ ಪರದೇಶಿಯಾದರೆ ಮಾತ್ರ ನೋವೆ
ನಮ್ಮವರೆ ಹದಹಾಕಿ ತಿವಿದರದು ಹೂವೆ? [13]

ರೈತನನ್ನು ಸುಲುಗೆ ಮಾಡದ ವರ್ಗವಿಲ್ಲ, ಅಧಿಕಾರಿಶಾಹಿಯಿಂದ ಹಿಡಿದು ಸಾಮ್ರಾಜ್ಯಶಾಹಿವರೆಗೂ ಹರಡಿರುವ ಈ ಶೋಷಣೆಯ ವ್ಯಾಪ್ತಿಯು ಕರಿಯರೋ ಮತ್ತು ಬಿಳಿಯರೋ ಯಾರಾದರೇನು? ಸಾಮ್ರಾಜ್ಯ ಯಾವುದಾದರೇನು? ವಿಜಯನಗರವೋ? ಮೊಗಲರೋ? ಇಂಗ್ಲಿಷರೋ? ಎಲ್ಲರಿಗೂ ತಮ್ಮ ತಮ್ಮ ಹಿತಕ್ಕಾಗಿ ಕೀಟಗಳಾದ ಜಿಗಣೆಗಳ ಹಾಗೆ ಹನಿ-ಹನಿ ರಕ್ತವನ್ನು ಹೀರುವತ್ತ ಯಶಸ್ವಿಯಾಗಿದ್ದಾರೆ. ಹರಿತವಾದ ಕತ್ತಿ ಪರದೇಶದದ್ದಾರೇನು? ಅಥವಾ ನಮ್ಮವರೇ ಹದ ಮಾಡಿ ತಿವಿದರೆ ನೋವಾಗುವುದಿಲ್ಲವೇ? ಎನ್ನುವ ಮೂಲಕ ನಮ್ಮ ವ್ಯವಸ್ಥೆಯೇ ನಮಗೆ ಮಾರಕವಾಗಿ ಪರಿಣಮಿಸುತ್ತಿದೆ ಎನ್ನುವ ವ್ಯಾಪ್ತಿಯಲ್ಲಿ ಹಿರಿದಾದ ಕಾರಣವನ್ನು ನೀಡುತ್ತಾರೆ.

ಸೋಮಾರಿಗಳಿಗೆ ಸುಖಿಗಳಿಗೆ ರಸಿಕರಿಗೆ ಮಾತ್ರ ಸಾಮ್ರಾಜ್ಯವು ಕಾಮಧೇನುವಲ್ಲವೇ? ಎನ್ನುವ ಮೂಲಕ ಉಳ್ಳವರಿಗೆ ಮಾತ್ರ ವ್ಯವಸ್ಥೆಯೇ ಹೊರತು ಹೀನರಿಗೆ ವ್ಯವಸ್ಥೆಯ ಕನಸಿನ ಆಗರವೇ? ಎಂದು ವ್ಯಂಗ್ಯವಾಡುತ್ತಾರೆ. ನಾಯಕ ಎನ್ನುವವನು ಕಳ್ಳರ ನಾಯಕನಾಗಲೂಬಹುದು, ಸುಳ್ಳರ ನಾಯಕನಾಗಲೂಬಹುದು, ಹಿಂಸಾಚಾರಿಯ ನಾಯಕನೂ ಆಗಿರಬಹುದು. ಇಂಥ ನಾಯಕನ ಕೇವಲ ನೆರಳಿನಿಂದ ಅಥವಾ ಮೂರ್ತಿಯಿಂದ ಪ್ರಯೋಜನವಾದರೂ ಏನು? ತಿಂದು ಉಂಡು ಮೆರೆಯುವವರ ಮೆರವಣಿಗೆಯನ್ನು ಬಿಟ್ಟ ಬಾಯಿ ಬಿಟ್ಟ ಹಾಗೆ ಬಾಯ್ದೆರೆದು ನೋಡುತ್ತಾ ಬುದ್ಧಿಹೀನನಾಗಬೇಕೆ?

ಬೇಡಿಕೆ ಒಬ್ಬರದಾದರೆ ಅದರ ಫಲ ಇನ್ಯಾರಿಗೋ, ಸಂಪ್ರದಾಯದ ಆಚರಣೆಯಲ್ಲಿ ಕಾಳಿ ಎಂದೂ ಕುರಿಯನ್ನು ಬಲಿ ಕೊಡು ಎಂದು ಕೇಳಿಲ್ಲ. ಆದರೆ ಹರಕೆ ಹೊತ್ತವ, ಹಬ್ಬ ಆಚರಿಸುತ್ತಿರುವವನು ಕಾಳಿಗೂ, ಇವನಿಗೂ, ಕುರಿಗೂ ಸಂಬಂಧವೇ ಇಲ್ಲದಾಗ್ಯೂ ನಿರ್ದೋಷಿಯಾದ ನಿಷ್ಕಾರಿಣಿಯಾದ ಕುರಿಯ ಕೊಲೆಯಾಗುವ ಹಾಗೆ ರೈತನ ಜೀವನ ನಿಷ್ಕಾರಣವಾಗಿ ಮತ್ತ್ಯಾವುದಕ್ಕೋ ನಶಿಸುವ ಆಘಾತವನ್ನು ನಿರೂಪಿಸುತ್ತಿದ್ದಾರೆ. ಈ ಕುರಿಯನ್ನು ಸಾವು ಮತ್ತು ಬದುಕಿನ ನಡುವೆ ಕರುಣೆ ಎನ್ನುವ ಗರಗಸದಿಂದ ಸೀಳುವ ಹಾಗೆ ರೈತ ಅತ್ತ ಅಧಿಕಾರಿ ವರ್ಗದಿಂದ ಇತ್ತ ಸಾಮ್ರಾಜ್ಯಶಾಹಿಗಳಿಂದ ತಮ್ಮ ಬದುಕನ್ನು

ಆರ್ಜಿಸಿಕೊಳ್ಳುತ್ತಿದ್ದಾರೆ. ಇನ್ನಾದರೂ ಈ ದಬ್ಬಾಳಿಕೆಯುಕ್ತ ಸಾಮ್ರಾಜ್ಯ ಪೂಜೆಗೆ ಸಿಡಿಮದ್ದಿನ ಅಕ್ಷತೆಯನ್ನು, ಗುಂಡಿನ ರಸಾಯನವನ್ನೂ ಸಲ್ಲಿಸುವ ಪ್ರಾಮಾಣಿಕತೆಯನ್ನು ನಿಲ್ಲಿಸಲೇಬೇಕು.

ನೇಗಿಲಿನ ಮೇಲಾಣೆ, ಬಸವಗಳ ಮೇಲಾಣೆ ರಕ್ತವೇ ಇಲ್ಲದೆ ಸುಕ್ಕಿಡಿದಿರುವ ನನ್ನಾಣೆ, ಸಾಮ್ರಾಜ್ಯವೆಂಬ ಶೂರ್ಪನಖಿ ಹಾಗೂ ಮೋಹಿನಿಯ ರೂಪಕ್ಕೆ ಎಂದೂ ಮರುಳಾಗುವುದಿಲ್ಲ. ಬಡತನವೆಂಬ ಗೊಬ್ಬರವನ್ನು ಸರ್ವಕಾಲವೂ ಹೀರಿ ಸಾಮ್ರಾಜ್ಯವೆಂಬ ಸಿರಿಯ ಕಸ್ತೂರಿಯನ್ನು ಎಲ್ಲೆಡೆ ಹರಡಿಸುವ ಮೂಲಕ ತಲೆ-ತಲಾಂತರಗಳಿಂದ ರೈತನ ಮೇಲೆ ಆಗುತ್ತಿರುವ ಶೋಷಣೆಯ ಪರಮಾವಧಿಯನ್ನು ಸದೃಢ ಸಂಕಲ್ಪದ ಮುಖೇನ ಮಾತ್ರ ಸುಧಾರಿಸಬಹುದು ಎಂದು ಹೇಳುತ್ತಾ ತನ್ನ ನಿತ್ಯ ಬದುಕಿನ ಅವಶ್ಯಕ ಸಾಮಾಗ್ರಿ ಶಕ್ತಗಳಾದ ನೇಗಿಲು ಮತ್ತು ಬಸವಗಳನ್ನೇ ಆಣೆಯಾಗಿ ಘನೀರ್ಭವಿಸುತ್ತಾ, ಇನ್ನೂ ಸಾಮ್ರಾಜ್ಯ, ಅಧಿಕಾರ ಹಾಗೂ ವ್ಯಾಮೋಹಗಳಿಂದ ರೈತನನ್ನು ವಿಮುಕ್ತಗೊಳಿಸದಿದ್ದರೆ 'ಲಯ'ವಂತೂ ಕಟ್ಟಿಟ್ಟ ಬುತ್ತಿ ಎಂದು ಸ್ವತಂತ್ರ ಪೂರ್ವದಲ್ಲೇ ರೈತನ ಸ್ಥಿತಿಗತಿಯ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದ್ದರೂ, ಈ ಹೊತ್ತಿಗೂ ರೈತನ ಕಾಳಜಿ ಉದಾಸೀನತೆಯ ಹಾದಿಯಲ್ಲೇ ಮುಳುಗಿರುವುದು ವಿಷಾದಕರ.

ಅಡಿ ಟಿಪ್ಪಣಿಗಳು

1. ಶ್ರೀ ಕುವೆಂಪು ಸಾಹಿತ್ಯದಲ್ಲಿ ರೈತ - ದೇ. ಜವರೇಗೌಡ, ಪುಟ ಸಂಖ್ಯೆ 1

2. ಕುವೆಂಪು ಕೃತಿ ವಿಮರ್ಶೆ - ಕೆ.ಎ. ಲತಾ, ಪುಟ ಸಂಖ್ಯೆ 56

3. ಹೆಗಲನ್ನೇರುವ ಪ್ರಯತ್ನ - ಲೀ ಮಾದವ ಐತಾಳ್, ಪುಟ್ಟಸಂಖ್ಯೆ -17

   ಪ್ರಕಟಣೆ : ಪ್ರತಿಭಾ ಯುವ ವೇದಿಕೆ, ಬೆಂಗಳೂರು - 1994

4. ಪರ್ಯಾಯ ಚಿಂತನೆ - ಉಪಾಭೋಗವಾದ ಪು.ನಂ. 41

5. ಗೊಬ್ಬರ -ಕೋಗಿಲೆ ಮತ್ತು ಸೋ.ರಷ್ಯಾ -ಕು.ಸ.ಕಾ. ಸಂಪುಟ -1 ಪು.ಸಂ.-360

6. ಶ್ರೀ ಸಾಮಾನ್ಯವೆ ಭಗವನ್ ಮಾನ್ಯಂ- ನರಹಳ್ಳಿ ಬಾಲಸುಬ್ರಮಣ್ಯಂ- ಅನಿಕೇತನ - (ಕುವೆಂಪು ಕುರಿತ ಮಹಾ ಸಂಪುಟ) ಪು.ಸಂ.177

7. ಗೊಬ್ಬರ -ಕೋಗಿಲೆ ಮತ್ತು ಸೋ.ರಷ್ಯಾ ಸಂಪುಟ -1 ಪು.ಸಂ.-360

8. ಗೊಬ್ಬರ -ಕೋಗಿಲೆ ಮತ್ತು ಸೋ.ರಷ್ಯಾ ಸಂಪುಟ -1 ಪು.ಸಂ.-360

9. ನೇಗಿಲ ಯೋಗಿ - ಕೊಳಲು ಸಂಪುಟ - 1 ಪು.ಸಂ. 28

10. ನೇಗಿಲ ಯೋಗಿ - ಕೊಳಲು ಸಂಪುಟ - 1 ಪು.ಸಂ. 28

11. ನೇಗಿಲ ಯೋಗಿ - ಕೊಳಲು ಸಂಪುಟ - 1 ಪು.ಸಂ. 28

12. ಕುಳದ ಕಲಿಗೆ -ಪ್ರೇತಕ್ಯೂ ಸಂಪುಟ - 2 ಪು.ಸಂ. 399

13. ರೈತನ ದೃಷ್ಟಿ -ಕೋಗಿಲೇ ಸೊ.ರಷ್ಯಾ - ಸಂಪುಟ - 1 ಪು.ಸಂ. 359

ಅಧ್ಯಾಯ -7

ರಾಷ್ಟ್ರೀಯತೆ-ನಾಡು-ನುಡಿ ಚಿಂತನೆ

''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ'' ಹೌದು! ಜನ್ಮ ಭೂಮಿ ಎನ್ನುವುದು ಸ್ವರ್ಗವೇ ಏಕೆ ಪ್ರಾಣಕ್ಕಿಂತಲೂ ಮಿಗಿಲಾದುದು ಎನ್ನಬಹುದು.

ಒಂದು ನಿರ್ಧಿಷ್ಟವಾದ ಎಲ್ಲೆಯೊಳಗೆ ಬಹಳ ಕಾಲದಿಂದಲೂ ಒಟ್ಟಿಗೆ ಜೀವನ ನಡೆಸಿ ಕಷ್ಟ ಸುಃಖಗಳಲ್ಲಿ ಭಾಗಗಳಾಗಿ ಐಕ್ಯತೆಯನ್ನು ಸಾಧಿಸಿದ ವಿಶಾಲ ಕ್ಷೇತ್ರದಲ್ಲಿ ವಾಸಿಸುವ ಜನಾಂಗವನ್ನು 'ರಾಷ್ಟ್ರ' ಎಂದು ಕರೆಯಬಹುದು. ಹಾಗೆ ವಾಸಿಸುವ ಜನರೆಲ್ಲರೂ ಒಂದೇ ಧರ್ಮವನ್ನು ಅವಲಂಭಿಸಿದ್ದರೂ ಅವರೆಲ್ಲರನ್ನೂ ಒಂದೇ ಸಂಸ್ಕೃತಿ ತನ್ನ ಮಧುರವಾದ ಬಂಧನದಲ್ಲಿ ಒಟ್ಟಿಗೆ ಕಟ್ಟಿಹಾಕಿರುತ್ತದೆ. ಆ ಜನರ ಮನೋಭಾವವನ್ನೂ ರಾಷ್ಟ್ರೀಯ ಮನೋಭಾವವೆನ್ನುವರು. ಜನಾಂಗಗಳಲ್ಲಿ ರಾಷ್ಟ್ರೀಯ ಭಾವನೆ ಇರಬೇಕಾದ್ದು ಸಹಜ. ರಾಜ್ಯ ವ್ಯವಸ್ಥೆ ಇವುಗಳ ವಿಷಯವಾಗಿ ಹೆಮ್ಮೆಪಡದ ಮತ್ತು ಅವುಗಳನ್ನು ಕಾಪಾಡಿಕೊಳ್ಳಲು ಪ್ರಯತ್ನ ಪಡದ ಯಾವ ಜನಾಂಗವೂ ಏಳಿಗೆ ಹೊಂದಲಾರದು. ಕುವೆಂಪು ರವರು ಈ ದೇಶ ನನ್ನದು, ಈ ನಾಡು ನನ್ನದು ಎನ್ನದ ಮಾನವ ಮಾನವನ ಹೃದಯ ಸುಡುಗಾಡು ಇದ್ದಂತೆ ಎನ್ನುತ್ತಾರೆ. ನಿಜವಾದ ರಾಷ್ಟ್ರಪ್ರಜ್ಞೆಯಲ್ಲಿ ತಾನು ತನ್ನದು ಎನ್ನುವ ಅಭಿಮಾನ ಉಕ್ಕಿ ಹರಿಯುತ್ತಿರಬೇಕು ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವಲ್ಲಿ ಕನ್ನಡ ಪ್ರೇಮದ ಕವನಗಳನ್ನು ರಚಿಸುವುದರಲ್ಲಿ ಕುವೆಂಪು ಅಗ್ರಗಣ್ಯರು.

''ಶ್ರೀ ಸ್ವಾತಂತ್ರೋದಯ ಮಹಾಪ್ರಗಾಥಾ''.ಕನ್ನಡದ ಶ್ರೇಷ್ಠ ಪ್ರಗಾಥಗಳಲ್ಲಿ ಇದು ಒಂದಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕದ ಮಹೂರ್ತದ ಗಳಿಗೆಯಲ್ಲಿ ಹರಿದ ಭಾವನದಿಯ ಹಾಗೆ ಈ ಕಾವ್ಯ ಹತ್ತು ಭಾಗಗಳಲ್ಲಿ ಮೈದುಂಬಿ ಹರಿಯುತ್ತದೆ. ಸರಸ್ವತಿ ಸ್ತುತಿಯಿಂದ ಆರಂಭವಾಗುವ ಕಾವ್ಯ ಎರಡನೆ ಭಾಗದಲ್ಲಿ ಕವಿ ಮತ್ತು ಸರಸ್ವತಿಯ ನಡುವೆ ಸಂವಾದವಿದೆ. ನಂತರ ಆಕೆಯ ಹಾರೈಕೆಯನ್ನು ಪಡೆದು ಸ್ವಾತಂತ್ರದ ಸಂಭ್ರಮದ ಕಾವ್ಯದೊಳಗೆ ಇಡೀ ಭಾರತದ ಭಾರತದ ಭೂಸಿರಿಯೆ ಭಾಗವಹಿಸುವಂತೆ ಕೇಳಿ ಕೊಳ್ಳುತ್ತಾರೆ.

ಓ, ಬಾರಾ ಸಹ್ಯಾದ್ರಿ; ಬಾರ ಓ ವಿಂಧ್ಯಾದ್ರಿ.......
ಬಾರಮ್ಮ ಗಂಗೆ; ಬಾರಮ್ಮ ತುಂಗೆ; ಬಾರಾ ಓ ಸಿಂಧು ;
ಯುಮುನೆ ಕಾವೇರಿ ಗೋದೆಯರ ಸೇರಿ ಬಾ ಕೃಷ್ಣ ಬಂಧು :
ಸ್ವಾತಂತ್ರ್ಯ ಗಾಥೆಯ ಮಂತ್ರ ಮರಿಗೆಳಕೆ ತೀರ್ಥಂಗಳೆಂ ತಂದು:[1]

ಹೀಗೆ ಸಂಕೋಲೆಯಿಂದ ಬಿಡಿಸಿಕೊಂಡ ಸ್ವಾತಂತ್ರ್ಯದ ಕಥೆಗೆ ನಿಸರ್ಗದ ಎಲ್ಲಾ ಭಾಗಗಳನ್ನು ಬರಮಾಡಿಕೊಳ್ಳುತ್ತಾ ಮುಂದಿನ ಭಾಗದಲ್ಲಿ ಭರತಮಾತೆಯ ಸಂಸ್ಕೃತಿ, ಪರಂಪರೆಗಳ ವರ್ಣನೆ ಇದೆ. ಅನಂತರ "ಶ್ರೀ ದಿನಂ, ದಿರಮಿದು ಮಹಾದಿನಂ. ವಿರಾಟ್‌ದಿನಂ" ಎಂದು ಸ್ವಾತಂತ್ರ್ಯ ಬಂದ ದಿನವನ್ನು ಶುಭದಿನವೆಂದು ತಿಳಿಸುತ್ತಾರೆ. ಸ್ವಾತಂತ್ರ್ಯವೇ ಶಿವನೆಂಬುದು ಅವರ ಅಭಿಮತವಾದ್ದರಿಂದ ಸ್ವಾತಂತ್ರ್ಯದ ಬಗ್ಗೆ ಅಪಾರವಾದ ಗೌರವ ಮಮತೆ ಹಾಗೂ ಅಭೀಪ್ಸೆಗಳು ಮೂಡಿ ಬರುತ್ತವೆ. ಸರ್ವರಿಗೂ ಈ ಸ್ವಾತಂತ್ರ್ಯ ದೊರಕಲಿ. ಅದು ಸೌಹಾರ್ದತೆ, ಸಂತೋಷ, ಸಾಮ್ಯತ್ವದೊಂದಿಗೆ ಸರ್ವರ ಉದ್ಧಾರದ ದಾರಿದೀಪವಾಗಿ ನಮ್ಮನ್ನು ಕರೆದೊಯ್ಯಲಿ ಎಂದು ಪ್ರಾರ್ಥಿಸುತ್ತಾರೆ.

ದಾಸ್ಯದಿಂದ ಬಿಡುಗಡೆ ಹೊಂದಿದ ಭಾರತಕ್ಕೆ ಅದರ ಮುಂದಿನ ಋಜುಮಾರ್ಗ ಹೇಗಿರಬೇಕು ಎಂಬುದನ್ನು ಕವಿ ಹಾರೈಸುತ್ತಾರೆ. ಅದು

ಮೈತ್ರಿ ಸಹನೆ ಶಾಂತಿಗಾಗಿ ನಭೋ ಗಾಮಿಯಾಗು.........
ಗ್ಲಾನಿಯೆಲ್ಲಿ ಹಾನಿಯೆಲ್ಲಿ ಅಲ್ಲಿ ರಕ್ಷೆಯಾಗಿ
ಕ್ರೌರ್ಯವೆಲ್ಲಿ ಪಾಪವೆಲ್ಲಿ ಅಲ್ಲಿ ಶಿಕ್ಷೆಯಾಗು;
ಕ್ಷಾಮ ಕಷ್ಟನಷ್ಟಗಳಲ್ಲಿ ನೀ ಸುಭಿಕ್ಷೆಯಾಗು:........
ಸದಾಕಾಲ ಸರ್ವದೇಶ ಸಕಲ ಮಿತ್ರನಾಗು..... !
.....ಪ್ರೇಮ, ಧೈರ್ಯ, ಸತ್ಯ, ಧರ್ಮ, ಶಾಂತಿ, ಚಿರನಿಕೇತನ ! [2]

ಹೀಗೆ ಭಾರತದ ಹೊಸ ಭಾವುಟದ ಹಾಗೂ ಗಾಂಧೀಜಿಯ ಸ್ತುತಿ ಮತ್ತು ಜೈಕಾರಗಳಿಂದ ಈ ಕವನ ಕೊನೆಯಾಗುತ್ತದೆ. ಸ್ವಾತಂತ್ರ್ಯವೆಂಬುದು ಎಲ್ಲಾ ಬಂಧನಗಳಾಚೆಯ ಮಹಾಬೆಳಕು. ಈ ಬೆಳಕು ಸದಾ ಬೆಳಗುತ್ತಿರಲಿ ಎಂಬುದು ಕವಿಯ ಹಾರೈಕೆ. ಆದರೆ "ಸ್ವಾತಂತ್ರ್ಯ ಲಕ್ಷ್ಮಿಗೆ" ಎಂಬ ಕವಿತೆಯಲ್ಲಿ ಭವ್ಯ ಭಾರತದ ಬಗ್ಗೆ ಕಂಡಿದ್ದ ಕನಸು, ಭಗ್ನಗೊಂಡು, "ಹೇ ಸ್ವಾತಂತ್ರ್ಯ ಲಕ್ಷ್ಮಿ? ಲಕ್ಷ್ಮಿ ಎಂಬರ್ ನಿನ್ನನ್/ಓ ದುರ್ಗೆಮಾದುರ್ಗೆ..... ಮಹಾಕಾಳಿ.... ಹೇ ರಕ್ತ ತರ್ಪಣ ತೃಪ್ತೆ.....ನೀಂ ರೌದ್ರಿಣಿಯ ದಿಟಂ "[3]ಎಂಬ ಬೈಗುಳಗಳು ಬರುತ್ತವೆ.

೧೯೪೮ರಲ್ಲಿ ಬರೆದ ಈ ಕವಿತೆ ಸ್ವಾತಂತ್ರ್ಯದ ಪಥಮ ವಾರ್ಷಿಕೋತ್ಸವದ ಸಂದರ್ಭವನ್ನು ಕುರಿತದ್ದು. ಒಂದು ವರ್ಷದ ಅವಧಿಯೊಳಗೆ ಸ್ವಾತಂತ್ರ್ಯ ಭಾರತ ಆಂತರಿಕವಾಗಿ ಛಿದ್ರಗೊಂಡು ಕ್ರೌರ್ಯ ತುಂಬಿದ ಇಂಡಿಯವಾಗಿ ಪರಿವರ್ತನೆಯಾಗುತ್ತದೆ. "ಸರ್ವಮಂಗಳೆಯೆಂದು ಸುಸ್ವಾಗತಂ ಬಯಸಿದೆವು ನಿನಗೆ

ನಾವಂದು, ಚಿತ್ರದ ಪುಲಿಯನೋತು ದಿಟದ ಪುಲಿಯಂ ಪಿಡಿದ ಪಸುಳೆ ಪಾಂಗಾಯ್ತುಲಾ ನನಗೆ ! ಹೇ ಸ್ವಾತಂತ್ರ್ಯ''[4] ಎಂದು ಕವಿ ಮಮ್ಮಲ ಮರುಗುತ್ತಾರೆ ಅಂದಿನ ಸ್ವಾತಂತ್ರ್ಯದ ವಿಜೃಂಭತೆ ಇಂದು ವಿಕೃತ ವ್ಯವಸ್ಥೆಯಿಂದ ರಾಡಿಯಾಗಿದೆ. ರಾಜಕಾರಣದ ಫಲವಾಗಿ ಹುಟ್ಟಿಕೊಂಡ ದ್ವೇಷಾಸೂಯೆಗಳು ಭಾರತವನ್ನು ವಿಘಟಿಸಿ ಛಿದ್ರಗೊಳಿಸಿವೆ. ಆ ದಿನ ಕಂಡ ಕನಸು ಭಗ್ನಗೊಂಡಿದೆ.

ಹೆತ್ತಯ್ಯನನೆ ಹುಟ್ಟಿದೊಡನೆಯ ತಿಂದೆ....
ಹೇ ಭಯಂಕರಿ! ಪಂಚನದಿಗಳಲಿ ನೆತ್ತರನೆ
ಹಮಿಸಿದೆ ! .....ಕೋಮಲದ ಕಾಶ್ಮೀರದೊಳ್
ಹೊತ್ತಿಸಿದೆ ನಾಣ್ಗೇಡಿತನದ ಕಲಹಾಗ್ನಿಯಂ;
ಅಗ್ನಿ ಪುತ್ರಿಯೇ ದಿಟಂ ನೀನಗ್ನಿ ಸಂಭವೆ ಆ
ದ್ರೌಪದಿಯವೋಲ್ ! [5]

ಮೌಲ್ಯರಹಿತ ಮಾನವ ಪ್ರವೃತ್ತಿಗಳು, ಸ್ವಾರ್ಥದ ದೌರ್ಜನ್ಯಗಳು, ಸ್ವಾತಂತ್ರ್ಯದ ಪಾವಿತ್ರತೆಯನ್ನು ನಾಶಮಾಡಿ ಅದರ ಶಕ್ತಿಯನ್ನು ಅಪವ್ಯಯ ಮಾಡಿದ್ದಕ್ಕೆ ಕವಿಗೆ ವಿಷಾದವಿದೆ. ಬ್ರಿಟೀಷರಿಂದ ವಿಮೋಚನೆ ಪಡೆದು, ಶೋಷಣೆಯಿಂದ ಮುಕ್ತವಾದ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ನಡೆಸುವ ಬದಲು ಮತ್ತಷ್ಟು ಶೋಷಣೆಗೆ, ಸಾಮಾಜಿಕ ಶ್ರೇಣಿಕರಣಕ್ಕೆ, ವ್ಯಕ್ತಿ ಪ್ರತ್ಯಯದ ಕ್ಷುದ್ರತೆಗೆ ಭಾರತೀಯ ಸಮಾಜವನ್ನು ಮಾಡಿದ್ದು, ಅದು ಒಳಗೊಳಗೆ ಶಿಥಿಲವಾಗುವಂತೆ ಮಾಡಿದ್ದು, ಇಲ್ಲಿನ ರಾಜಕೀಯ ನಾಯಕರು, ಬ್ರಿಟೀಷ್ ಆಳ್ವಿಕೆ ಚಿತ್ರದ ಹುಲಿಯಾದರೆ ಭಾರತೀಯರಾದ ನಮ್ಮವರ ಆಳ್ವಿಕೆ ನಿಜದ ಹುಲಿಗೆ ಎದುರಾದ ಹಸು ಕಂದನ ರೀತಿಯದು. ಅದು ಬಾಣಲೆಯಿಂದ ಬೆಂಕಿಗೆ ಬಿದ್ದ ಸಂಕಟದ ಯಾತನ ಸ್ಥಿತಿ. ಸ್ವಾತಂತ್ರ್ಯದ ಕನಸು ಕರಗಿ ಸುತ್ತಲೂ ಗಾಡಾಂದಕಾರ ಮುಸುಗಿದ ಕರಾಳತೆ. ಇಂತಹ ಜೀವ ವಿರೋಧಿ ನಿಲುವುಗಳು ಬಹಳ ಬೇಗ ಮುಗಿದು ಎಲ್ಲರ ಬದುಕಲ್ಲಿ ಶಾಂತಿ ಶಶಿಕಾಂತಿಯ ಸಿಂಚನವಾಗಬೇಕೆಂದು ಹಾರೈಸಿ ಕವಿತೆ ಮುಗಿಯುತ್ತದೆ.

ಮಹಾದಾರ್ಶನಿಕರಾದ ಪುಟ್ಟಪ್ಪನವರು ರಾಷ್ಟ್ರಪ್ರೇಮ, ನಾಡ ಪ್ರೇಮ ಮತ್ತು ಭಾಷಾಭಿಮಾನವನ್ನು ಹೃದಯದಲ್ಲಿ ಅನನ್ಯವಾಗಿ ತುಂಬಿಕೊಂಡು ಅದನ್ನು ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಒಂದು ಸಂಸ್ಕೃತಿಯ ಆಶೋತ್ತರಗಳನ್ನು ಆ ರಾಷ್ಟ್ರದ ಉದ್ಧಾರಕ್ಕಾಗಿಯೇ ರೂಪಿಸಬೇಕೆಂದು ಅವರ ಮುಖ್ಯ ಉದ್ದೇಶಗಳಲ್ಲಿ ಒಂದಾಗಿತ್ತು ಭೌಗೋಳಿಕವಾಗಿ ಹರಿದು ಹಂಚಿ ಹೋಗಿದ್ದ ಕರ್ನಾಟಕದ ಏಕೀಕರಣ ಅವರ ಪ್ರಬಲವಾದ ಆಶೋತ್ತರವಾಗಿತ್ತು ಅದು ವಾಸ್ತವಿಕ ನೆಲೆಗಟ್ಟಿನ ಮೇಲೆ ರೂಪಿತವಾಗಬೇಕಿತ್ತು. ಕವಿಯ ಪ್ರಕಾರ ಈ ಏಕೀಕರಣ ಮತ್ತು ಈ ಪ್ರಾಂತ್ಯದ ಅಖಂಡತ್ವ ಹೊಸದಾಗಿ ರೂಪಿತವಾದುದೇನೂ ಅಲ್ಲ. ಅದಕ್ಕೆ ಒಂದು

ಸಾಂಸ್ಕೃತಿಕ ಇತಿಹಾಸವಿದೆ. ಆ ಐತಿಹಾಸಿಕ ಎಚ್ಚರವನ್ನು ಮತ್ತಷ್ಟು ಜಾಗ್ರತೆಗೊಳಿಸುತ್ತ ಸಾಗುವ ಕ್ರಿಯೆ ಅದು. ಈ ಸ್ಮೃತಿ ಕೇವಲ ದೇಶ ವಿಸ್ತೀರ್ಣವಲ್ಲ ಬದಲಾಗಿ ಕಾಲವಿಸ್ತೀರ್ಣಕ್ಕೂ ಸಂಬಂಧ ಪಡುತ್ತದೆ. ಈ ಕಾರಣದಿಂದಾಗಿ ಅಖಂಡ ಕರ್ನಾಟಕದ ಕಲ್ಪನೆ ಮತ್ತು ಅದರ ಸಾಂಸ್ಕೃತಿಕ ಪರಿವೇಶ ಇಲ್ಲಿ ಭಿನ್ನವಾಗಿದೆ. ಅದು ಶಿಶುರೂಪಿ, ಪಶುರೂಪಿ, ಜನರೂಪಿಯಾದ ಬಹುರೂಪದ ಉದ್ಧಾರದ ದಾರ್ಶನಿಕ ನೋಟದ್ದು.

ಇಂದು ಬಂದು ನಾಳೆ ಸಂದು
ಹೋಹ ಸಚಿವ ಮಂಡಲ
ರಚಿಸುವೊಂದು ಕೃತಕವಲ್ತೊ
ಸಿರಿಗನ್ನಡ ಸರಸ್ವತಿಯ
ವಜ್ರ ಕರ್ಣಕುಂಡಲ!
ಅಖಂಡ ಕರ್ನಾಟಕ ;
ಅಲ್ತೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!
ನೃಪತುಂಗನೆ ಚಕ್ರವರ್ತಿ!
ಪಂಪನಲ್ಲಿ ಮುಖ್ಯಮಂತ್ರಿ!
....
ನಿತ್ಯ ಸಚಿವ ಮಂಡಳ........[6]

ಇದು ಕನ್ನಡ ನಾಡಿನ ಸಾಂಸ್ಕೃತಿಕ ಭಾವ ಪ್ರಪಂಚದೊಳಗಿನ ಶಾಶ್ವತವಾದ ನಿತ್ಯ ಸಚಿವಮಂಡಳ ಇದಕ್ಕೆ ರಾಜಕೀಯದ ಯಾವ ಬೂಟಾಟಿಕೆ ನಾಟಕ ತೋಟಕ್ಕ (ಹಗರಣ) ದ ಹಂಗು ಇಲ್ಲ. ಕನ್ನಡ ಭಾಷೆ, ಕನ್ನಡತನ ಅಂದ್ರೆ, ಅದು ಬರಿ ಭಾಷೆ ಮತ್ತು ನಡವಳಿಕೆ ಅಲ್ಲ. ಆ ರಾಜ್ಯದ ಜನರ ಬದುಕಿನ ನೆಮ್ಮದಿಯು ಕೂಡ. ಕನ್ನಡದ ನಿಜವಾದ ಅರ್ಥ ಸಾಕಾರವಾಗಲೇಕಾದರೆ ಅಲ್ಲಿ ಶಾಂತಿ, ನೆಮ್ಮದಿ, ಸಮೃದ್ಧಿಗಳು ನೆಲೆಸಬೇಕು, ಆಗ ಅಖಂಡ ಕರ್ನಾಟಕದ ಸಾರ್ಥಕತೆ ಸಾಧಿಸುತ್ತದೆ. ಹೀಗಾಗಿ ರಾಷ್ಟ್ರೀಯತೆ ಎಂಬುದು ಅದು ಮನುಷ್ಯನ ಮೂಲಭೂತ ಸಮಸ್ಯೆಗಳನ್ನು ಪರಿಹಾರ ಮಾಡುವ ಮಹೋನ್ನತ ತತ್ವವೆಂದು ಕವಿ ವ್ಯಾಖ್ಯಾನಿಸಿದ್ದಾರೆ.

ಈ ಸಂಕಲನದ 'ಅಲುಕದೀ ಕನ್ನಡಂ', 'ಅಖಂಡ ಕರ್ನಾಟಕ', , 'ಕರ್ನಾಟಕ ಮಂತ್ರದೀಕ್ಷೆ', ಕಂದ ಕನ್ನಡನಿವನು ಕೈ ಬಿಡದಿರಮ್ಮಾ', 'ಕರ್ನಾಟಕ ರಾಜ್ಯೋದಯ ಶ್ರೀಗೀತೆ ಮತ್ತು 'ಏಕೈಕ ಕರ್ನಾಟಕ' ಮುಂತಾದ ಪ್ರಮುಖ ಕಾವ್ಯಗಳಲ್ಲದೆ. ಇನ್ನುಳಿದ ಅನೇಕ ಕಾವ್ಯಗಳಲ್ಲಿ ಕನ್ನಡ ಅಭಿಮಾನ ಅಂಶಿಕವಾಗಿಯಾದರೂ ಬಂದೇ ಬರುತ್ತದೆ. ಸಾಂಸ್ಕೃತಿಕ ಕರ್ನಾಟಕತ್ವವನ್ನು ಸ್ಥಾಪಿಸಿಕೊಳ್ಳುವುದರ ಜರೂರಿನಲ್ಲಿ ಈ ಎಲ್ಲಾ ಕಾವ್ಯಗಳು ಬಂದಿವೆ. ಈ ಸಾಂಸ್ಕೃತಿಕ ಐಕ್ಯತೆ ಬ್ರಿಟೀಷರ ಆಳ್ವಿಕೆಯ ಕಾರಣದಿಂದಲೇ

ನಮ್ಮಲ್ಲಿ ರೂಪು ಪಡೆದದ್ದು. ಛಪ್ಪನ್ನಾರು ದೇಶಗಳಾಗಿ ಹರಿದು ಹಂಚಿ ಹೋಗಿದ್ದ ಭಾರತದ ರಾಷ್ಟ್ರೀಯತೆಯ ಕಲ್ಪನೆ ಬಂದಿದ್ದು ಕೂಡ ವಸಾಹತು ಶಾಹಿಯು ನೀಡಿದ ಆಂಗ್ಲ ಶಿಕ್ಷಣದ ಕಾರಣದಿಂದ ಸಾಂಸ್ಕೃತಿಕ ಮತ್ತು ರಾಜಕೀಯ ನೆಲೆಯಲ್ಲಿ ಭಾರತವನ್ನು ತಾಯಿಯ ಸ್ಥಾನದಲ್ಲೂ ಕರ್ನಾಟಕವನ್ನು ಮಗಳ ಸ್ಥಾನದಲ್ಲೂ ನಿಲ್ಲಿಸಿ ಪ್ರಾದೇಶಿಕ ಆಶೋತ್ತರಗಳನ್ನು ಸಮನಾಗಿ ಕಟ್ಟಿಕೊಳ್ಳಬೇಕೆಂಬ ನಿಲುವು ಅವರದು. ಕರ್ನಾಟಕದ ತನುಜಾತೆಯ ತರಹ ಉಳಿದ ರಾಜ್ಯಗಳೂ ಪರಸ್ಪರ ಸಾಮರಸ್ಯದ ಬಾಳ್ವೆಗೆ ಹೊಂದಿ ನಡೆಯುಬೇಕೆಂಬ ಅವರ ಕಾಣ್ಕೆ ಸಾಮಾಜಿಕ, ಸಾಂಸ್ಕೃತಿಕ ನಿರ್ಮಾಣದೊಂದಿಗೆ ಬಹು ಸಂಸ್ಕೃತಿಯ ಪ್ರತಿ ಪಾದನೆಯೂ ಆಗುತ್ತದೆ. ಹಾಗಾಗಿ ಕನ್ನಡತ್ವದ ಅಭಿಮಾನವನ್ನು ಉಳಿಸಿಕೊಂಡ ಅದು ರಾಷ್ಟ್ರಾಭಿಮಾನವಾಗಿ ಮತ್ತು ಏಕಕಾಲಕ್ಕೆ ವಿಶ್ವ ಪ್ರಜ್ಞೆಯಾಗಿ ಪ್ರಕಟಗೊಳ್ಳಬೇಕೆಂಬ ಆಶಯವನ್ನು ಅತ್ಯಂತ ಮಾನವೀಯ ವಿವೇಕದ ವೈಚಾರಿಕತೆಯಿಂದ ಮಂಡಿಸುತ್ತಾರೆ.

ಕುವೆಂಪುರವರು ಅಪಾರ ದೇಶಭಕ್ತರು ನಾಡಿಗಾಗಿ, ನುಡಿಗಾಗಿ ತಮ್ಮ ವಾಕ್ ಚಾತುರ್ಯದಿಂದ ಜನರ ಮನದಲ್ಲಿ ರಾಷ್ಟ್ರೀಯತೆಯನ್ನು ತುಂಬಿದವರು ಅದರ ಪೌರುಷ ವಾಣಿಯಲ್ಲಿ ಸತ್ವ ತುಂಬಿ, ರಾಷ್ಟ್ರೀಯತೆ ತುಂಬಿ ಮಲಗಿದವರನ್ನು ಚಪ್ಪರಿಸಿ ಏಳಿಸುವಷ್ಟು ಶಕ್ತಿ ಇದೆ.

ರಾಷ್ಟ್ರದ ಬಿಡುಗಡೆಗಾಗಿ ಹೋರಾಡಿದ ಅನೇಕ ಹಿರಿಯ ವ್ಯಕ್ತಿಗಳು ಮಡಿದು ಕೆಚ್ಚೆದೆಯಿಂದ ಹಿರಿಯರ ಪಥತುಳಿದು ಹೊರಡಲು ಸಿದ್ಧರಾಗಿದ್ದ ಯುವಕರು ದಾರಿ ಕಾಣದೆ ತತ್ತರಿಸುತ್ತಿರುವಾಗ ಕುವೆಂಪುರವರು ಕಳೆಗುಂದಿದ ಜನಸ್ತೋಮಕ್ಕೆ ಆಳಿದ ಮಹಾತ್ಮ ಮತ್ತೆ ಬಂದು ನೆಟ್ಟ ಕಟ್ಟುಗಳನ್ನು ತುಂಬುವನೆಂದೂ ಬರಿಯ ಯೋಚನೆಯಲ್ಲಿ ಹೊತ್ತು ಕಳೆಯ ಬೇಡಿರೆಂದು ಹೇಳಿ.

ಬರಿ ಮಾತಿನಲ್ಲಿ ತಮ್ಮ ಒಣ ಹಿರಿಮೆಯೆಲ್ಲವನ್ನು ಹೇಳಿಕೊಂಡು ಭಾಷಣಗಳ ಮಳೆಯನ್ನು ಸುರಿಸುತ್ತ ತಿರುಗುವವರನ್ನು ಕಂಡು ಕವಿಗೆ ಹಿಡಿಸದೆ ನಿಜವಾದ ತ್ಯಾಗವೇ ರಾಷ್ಟ್ರೀಯನ ಕರ್ತವ್ಯವೆಂದು ಎಚ್ಚರಿಸಿದ್ದಾರೆ. ಪಾಂಚಜನ್ಯನಾಡಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕವಿ ಕಾಣಿಕೆಯಾದರೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ ಪ್ರಗತಿ ಸಾಹಿತ್ಯ ಚಳುವಳಿಗೆ ನೀಡಿದ ಕಾಣಿಕೆಯಾಗಿದೆ. ಬಡತನವೆನೆಂದೂ ತಿಳಿಯದವರು ಇಂದು ದಲಿತ ಸಾಹಿತ್ಯ ರಚಿಸುವುದನ್ನು ನಾವು ಕಾಣುತ್ತಿದ್ದೇವೆ. ಆದರೆ ಕುವೆಂಪು 1929ರಲ್ಲಿಯೇ ಅತ್ಯಂತ ಸಮರ್ಥವಾಗಿ ದಲಿತರ ನೋವನ್ನು ತಮ್ಮ ಕವನಗಳ ಮೂಲಕ ಎತ್ತಿದ್ದಾರೆ. ಶೋಷಣೆಯ ವಿರುದ್ಧ ಯಾವ ಕಾಲದಲ್ಲಿ ಮಾತನಾಡಲೂ ಹೆದರುತ್ತಿದ್ದರೋ ಆ ಕಾಲದಲ್ಲಿ ಇವರು ಸಿಡಿದೆದ್ದಿದ್ದಾರೆಂಬುದು ಅತಿ ಮುಖ್ಯವಾದ ಸಂಗತಿ ಈ ದೃಷ್ಟಿಯಿಂದ

ಪಾಂಚಜನ್ಯ ಕೋಗಿಲೆ ಮತ್ತು ಸೋವಿಯಟ್ ರಷ್ಯಾ ಕವನ ಸಂಕಲನಗಳು ತುಂಬಾ ಮಹತ್ವವಾಗಿ ನಿಲ್ಲುತ್ತವೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಈ ರಾಷ್ಟ್ರದ ಮಹೋನ್ನತ ಘಟನೆಗಳಲ್ಲಿ ಒಂದು. ಸರಿ ಸುಮಾರು ಮುನ್ನೂರು ವರ್ಷಗಳ ಕಾಲದ ದಾಸ್ಯ ಶೃಂಖಲೆಯನ್ನು ಕಿತ್ತೊಗೆಯಲು ಭಾರತೀಯ ಜನಸಮುಷ್ಟೆ ಏಕವಾಗಿ ನಿರ್ಧರಿಸಿದ ಘಟನೆ ಆ ಕಾಲದಲ್ಲಿ ಮೈಸೂರು ರಾಜರ ಆಡಳಿತದ ಸರ್ವಾಧಿಕಾರಕ್ಕೆ ಒಳಪಟ್ಟಿತು. ಅಂತಹ ಜನರನ್ನು ಎಚ್ಚರಿಸಿದರು, ಹುರಿದುಂಬಿಸಿದರು ಅವರು ಸ್ವಾತಂತ್ರ್ಯ ಸಮರದಲ್ಲಿ ದುಮುಕುವಂತೆ ಮಾಡಿದರು.

ನಡೆ ಮುಂದೆ, ನಡೆ ಮುಂದೆ
ನುಗ್ಗಿ ನಡೆ ಮುಂದೆ !
ಜಗ್ಗದೆಯೆ, ಕುಗ್ಗದೆಯೆ
ಹಿಗ್ಗಿ ನಡೆ ಮುಂದೆ![7]

1929ರಲ್ಲಿ ಮೂಡಿ ಬಂದ ಈ ಮಾತುಗಳು ಹೆಂಬೇಡಿಗಳನ್ನು ಹುರಿದುಂಬಿಸಿದವು. ಆದರೂ ಅನೇಕರಿಗೆ ಪುಕ್ಕಲು. ಬ್ರಿಟೀಷರು ನಿಜವಾಗಿಯೂ ಸ್ವಾತಂತ್ರ್ಯ ಕೊಟ್ಟಾರೆಯೆ? ಎಂಬ ಅನುಮಾನ ಅಂತಹವರಿಗೆ ಕವಿಹೇಳಿದರು.

ಬೆಚ್ಚಿ ಬಿಡು, ನೆಚ್ಚಿ ಬಿಡು
ಕೆಚ್ಚಿದೆಯ ಗುಡಿಯಲ್ಲಿ;
ಸೆರೆಯಹರಿ, ಅರಿಯನಿರಿ,
ಹುಟ್ಟಳಿಸು ಹುದೆಯಲ್ಲಿ;
ನಾನಳಿದೆ, ನೀನಳಿವೆ;
ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು
ನವಭಾರತದ ಲೀಲೆ! [7]

ಭಾರತದ ದಾಸ್ಯತೆಗೆ ಭಾರತೀಯರ ಪರಸ್ಪರ ಒಡಕೇ ಕಾರಣ. ಚರಿತ್ರೆ ನಮಗೆ ಅದನ್ನು ಸ್ಪಷ್ಟಪಡಿಸುತ್ತದೆ. ಒಂದು ಹಿಡಿಯಷ್ಟು ಪರಕೀಯರು ಭಾರತಕ್ಕೆ ಬಂದು ನಮ್ಮ ಜನರಿಂದಲ್ಲೇ ನಮ್ಮವರನ್ನು ಕೊಲ್ಲಿಸಿ ತಾವು ಆಳಿದರು, ಅತ್ಯಂತ ಸುಖ ಸಂವೃದ್ಧಿಯಿಂದ ಹೊರಗಿನಿಂದ ಬಂದವರು ಭಾರತೀಯ ರಾಜರನ್ನೇ ಒಬ್ಬರ ಮೇಲೊಬ್ಬರನ್ನು ಎತ್ತಕಟ್ಟಿ ಇಡೀ ಭಾರತದ ಅಧಿಕಾರವನ್ನು ತಮ್ಮ ಕೈಗೆತ್ತಿಕೊಂಡರು. ಅಧಿಕಾರಕ್ಕೆ ಬಂದ ನಂತರ ಇಲ್ಲಿ ಜನಾಂಗಗಳಲ್ಲಿ ಪರಸ್ಪರ ಒಡಕು ಅಪನಂಬಿಕೆಗಳ ವಿಷ ಬೀಜ ಬಿತ್ತಿದರು. ಹೀಗಾಗಿ ನಮಗೆ

ಸ್ವಾತಂತ್ರ್ಯ ಬೇಡ ಇಂಗ್ಲೀಷರೇ ಇರಲಿ ಎನ್ನುವವರಿಗೂ ಕೊರತೆ ಇರಲಿಲ್ಲ ಅಂತಹವರನ್ನು ಕುರಿತು ಕವಿ ಹೇಳಿದರು.

ಕುವೆಂಪು ಪ್ರಜಾಪ್ರಭುತ್ವವಾದಿ. ಒಬ್ಬ ಅತ್ಯಂತ ಪ್ರಭಾವಿತ ವ್ಯಕ್ತಿಕೂಡ ರಾಜರ ವಿರುದ್ಧ ಸೊಲ್ಲೆತ್ತದ ಕಾಲ ಅದು. ಮಹಾತ್ಮ ಗಾಂಧೀಜಿಯವರು ಕೂಡ ಪೂರ್ಣ ಸ್ವಾತಂತ್ರ್ಯದ ಕರೆಯನ್ನು ಕೊಟ್ಟಿರಲಿಲ್ಲ ಬ್ರಿಟೀಷ್ ಸಾಮ್ರಾಜ್ಯದ ಅಧೀನದಲ್ಲಿ ಭಾರತೀಯರ ಆಳ್ವಿಕೆ ಬೇಕು ಎಂಬಂಥ ನೆಲದಲ್ಲಿ ಕನ್ನಡದ ಕವಿಯೊಬ್ಬ ಬ್ರಿಟೀಷರಿರಲಿ, ತಾನೂ ಕೆಲಸ ಮಾಡುತ್ತಿದ್ದ ಸಂಸ್ಥಾನದ ಮಹಾರಾಜರನ್ನು ತಿರಸ್ಕರಿಸಿದುದು ಒಂದು ಮಹತ್ತರವಾದ ಸಂಗತಿ.1935 ರಲ್ಲಿ ಕುವೆಂಪು ನಮ್ಮ ನಾಡಿನಲ್ಲಿ ರಾಜತ್ವ ಅರ್ಥಾತ್ ಸರ್ವಾಧಿಕಾರ ಅಳಿದು ದೇಶದ ಆಡಳಿತ ಈ ದೇಶದ ಸಾಮಾನ್ಯ ಪ್ರಜೆಯ ಕೈಗೆ ಬರುತ್ತದೆಂದು ಭವಿಷ್ಯ ನುಡಿದರು.

ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ;
ಕಳಚಿ ಬೀಳುವುದರಿಂದ ನಂದನದ ಬೇಲಿ!
ದೇವತೆಗಳ ಶ್ಲೀಲಮೋದಕ್ಕೆ ಬದಲಾಗಿ
ಗೋಚರಿಪುದಲ್ಲಿ ಮತ್ಸ್ಯರ ಕೃಷಿಯ ಕಲೆ!
ದ್ರವ್ಯಾನು ಕೂಲತೆಯ ಜಾತಿಯ ನೀತಿಯೊ
ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ!
ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ
ದೇವರ ನ್ಯಾಯವನು ಮಾನವರೆ ತಿದ್ದಿ! [8]

ಸ್ವಾತಂತ್ರ್ಯ ಸುಮ್ಮನೆ ಬರುವುದಿಲ್ಲ ತ್ಯಾಗ ಬಲಿದಾನಗಳ ತಳಹದಿಯ ಮೇಲೆ ಇದು ನಿಲ್ಲುವಂತದ್ದು. ಬ್ರಿಟೀಷರೇನು ಸುಲಭವಾಗಿ ದೇಶಬಿಟ್ಟು ಹೋಗುವವರೆ? ಒಂದು ಸಣ್ಣ ದ್ವೀಪದ ಜನ ಹೊತ್ತು ಮುಳುಗದ ಸಾಮ್ರಾಜ್ಯ ಕಟ್ಟಿದರು. ರಕ್ತದ ರುಚಿ ಕಂಡರು. ಅಂತಹ ಒಂದು ಸರ್ಕಾರ ಎದುರಿಸಲು ಧೈರ್ಯ, ಸ್ಥೈರ್ಯಗಳು ಬೇಕು. ಕವಿ ಅಂತಹ ಕರೆಯನ್ನು ತನ್ನ ಜನತೆಗೆ ನೀಡುತ್ತಾರೆ.

ಕುವೆಂಪು ಅವರ ಪಾಂಚಜನ್ಯದ ಅನೇಕ ಕವನಗಳು ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕವಿಯ ಕಾಣಿಕೆ ಆ ಕಾಲದ ಅನೇಕ ಸತ್ಯಾಗ್ರಹಿಗಳು ಈ ಕವನಗಳನ್ನು ಕೇಳಿ,ಹಾಡಿ ಸ್ಫೂರ್ತಿಗೊಂಡ ವಿಷಯವನ್ನು ಶಕ್ತಿಯುತವಾಗಿವೆ ಎಂದರೆ ಆಗಿನ ದಿನಗಳಲ್ಲಿ ಯಾರಾದರೂ ಇವುಗಳನ್ನು ಸಮರ್ಥವಾಗಿ ಇಂಗ್ಲೀಷ್‌ಗೆ ಅನುವಾದಿಸಿ ಬ್ರಿಟೀಷರ ಗಮನಕ್ಕೆ ತಂದಿದ್ದರೆ ಕುವೆಂಪು ನಮಗೆ ತಿಳಿಯುತ್ತಿದ್ದರೆ? ಅನ್ನಿಸುತ್ತದೆ.

ದೇಶ ಪ್ರೇಮ ಮತ್ತು ಭಾಷಾ ಪ್ರೇಮಗಳನ್ನು ನಮ್ಮ ದೇಶದಲ್ಲಿ ಇಂದು ಅತ್ಯಂತ ಗೊಂದಲಕ್ಕೆ ಒಳಗಾಗಿದೆ. ಪ್ರಾಂತ್ಯಗಳು ಮತ್ತು ಪ್ರಾಂತ್ಯ ಭಾಷೆಗಳ ಮೇಲಿನ ಪ್ರೇಮ ಭಾರತೀಯ ಏಕತೆಯ ಕಂಟಕ ಎಂದು ಕೆಲವರು ಕೂಗೆಬ್ಬಿಸುತ್ತಿದ್ದಾರೆ. ಆದರೆ ಜನರು ತಮ್ಮ ಭಾಷೆಯನ್ನು ಮಿಕ್ಕವರ ಮೇಲೆ ಹೇರಿ ಇಡೀ ಭಾರತವನ್ನು ತಮ್ಮದಾಗಿಸಿಕೊಳ್ಳಲು ತೆರೆಮರೆಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಶ್ರೀ ಕುವೆಂಪು ಅವರು ಸ್ವಾತಂತ್ರ್ಯ ಪೂರ್ವದಲ್ಲಿಯೇ ಈ ಸಮಸ್ಯೆಯನ್ನು ಎತ್ತಿಕೊಂಡು ಸರ್ವ ಸಮ್ಮತವಾದ ತೀರ್ಪುನೀಡಿದ್ದಾರೆ.

ಭಾರತ ಬದುಕಲು ಕರ್ನಾಟಕ ಬದುಕಬೇಕು, ಕರ್ನಾಟಕ ಉಳಿಯಲು ಭಾರತ ಶಕ್ತಿಯುತವಾಗಿರಬೇಕು. ಆದರೆ ನಮ್ಮಲ್ಲಿ ಏನಾಗಿದೆ ನಮ್ಮ ಜೀವನ ಯಾಥನೆಗಾಗಿ ಬೇರೆ ಬೇರೆ ದೇಶಗಳಿಂದ ಕರ್ನಾಟಕಕ್ಕೆ ಬಂದ ಜನರು ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಹೊಂದಿಕೊಳ್ಳುವ ಬದಲು ಅದನ್ನು ತಿರಸ್ಕರಿಸುತ್ತಾ ವಿರೋಧಿಸುತ್ತಾ ಬಂದಿದ್ದಾರೆ. ನೂರಾರು ವರ್ಷಗಳ ಹಿಂದೆ ಈ ದೇಶಕ್ಕೆ ಬಂದವರು ಈಗಿನ ಜನಗಣನೆಯಲ್ಲಿ ತಮ್ಮ ಮಾತೃಭಾಷೆ ಕನ್ನಡ ಎಂದು ಕೇಳುವುದಿಲ್ಲ. ಹೀಗಾಗಿ ಕರ್ನಾಟಕದಲ್ಲಿ ಅನ್ಯ ಭಾಷೆಗಳು ಶೇಕಡ (%) ನಲವತ್ತೈದು ಎಂದು ಇತ್ತೀಚಿನ ವರದಿಯೊಂದು ತಿಳಿಸುತ್ತಿದೆ. ಈ ಅಪಾಯವನ್ನು ಕುವೆಂಪು ನಲವತ್ತು ವರ್ಷಗಳ ಹಿಂದೆಯೇ ಕಂಡು ಹೇಳಿದ್ದಾರೆ.

ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ
ಹೊರ ನುಡಿಯಹೊರೆಯಿಂದ ಕುಸಿದು ಕುಗ್ಗಿ !
ರಾಜ ನುಡಿಯೆಂದೇಂದು, ರಾಷ್ಟ್ರ ನುಡಿಯೆಂದೊಂದು
ದೇವ ನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಲು ನಿಟಲೆಂದು ಮುದಿ ಮೂಳೆ ಮುರಿಯುತಿದೆ
ಕನ್ನಡಮ್ಮನ ಬೆನ್ನು ಬಳುಕಿ ಬಗ್ಗಿ [9]

ಈ ಮಾತನ್ನು ಕುವೆಂಪು 1935 ರಲ್ಲಿ ಹೇಳಿದರು. 1980-82 ರಲ್ಲಿ ಸಂಸ್ಕೃತ ವಿವಾದ ಮತ್ತು ಗೋಕಾಕ್ ವರದಿಯ ಹಿನ್ನೆಲೆಯಲ್ಲಿ ಈ ಮಾತುಗಳನ್ನು ಗಮನಿಸಿದಾಗ ಕವಿಯ ಭವಿಷ್ಯ ವಾಣಿಯು ನಿಜವಾಗಿರುವುದನ್ನು ಕಾಣುತ್ತೇವೆ. ಸಂಸ್ಕೃತವನ್ನು ಆಡು ಭಾಷೆಯಾಗಿ ಬಳಸುವ ಅದನ್ನು ಮಾತೃಭಾಷೆ ಎಂದು ಸಾರುವ ಮೂರ್ಖತನಕ್ಕೆ ಈ ಜನ ಹೋದರು ಎಂಬುದನ್ನು ಮರೆಯುವಂತಿಲ್ಲ ಕವಿ ಈ ಯಾವ ಅತಿರೇಕಕ್ಕೂ ಹೋಗುವುದಿಲ್ಲ ಏಕಾಗಿ ಮಾತೃಭಾಷೆ ಅತ್ಯವಶ್ಯಕ?

ನಿಮ್ಮ ನುಡಿ ನಿಮ್ಮ ಗಂಡಸುತನಕೆ ಹಿರಿ ಸಾಕ್ಷಿ
ಗೆಲವಿದ್ದರದಕೆ ನಿಮಗಿಹುದು ಶಕ್ತಿ
ನುಡಿ ಮಡಿದರೆಲ್ಲರೂ ಮೂಕ ಜಂತುಗಳಂತೆ
ಬಾಲವಲ್ಲಾಡಿಪುದೆ ಪರಮ ಭಕ್ತಿ. [10]

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದು ಮಾತೃಭಾಷೆಯ ಶಕ್ತಿಯನ್ನು ಕವಿ ಕರ್ನಾಟಕ ಭಾರತೀಯ ತನುಜಾತೆ ಮಗಳು ಎಂದು ಹೇಳಿದ್ದಾರೆ ಮಗಳು ಶಕ್ತಿ ಶಾಲಿಯಾದಷ್ಟು ತಾಯಿ ಶಕ್ತಿಶಾಲಿಯಾಗುತ್ತಾಳೆ. ಮಗಳು ಕ್ಷೀಣಿಸಿದರೆ ತಾಯಿಗೆ ಭಾರವಾಗಿ ಕುಸಿಯುತ್ತಾಳೆ. ಕುವೆಂಪು ತಮ್ಮ ಹಲವಾರು ಕವನ, ಲೇಖನಗಳಲ್ಲಿ ಈ ವಿಷಯವನ್ನು ನಿಷ್ಪಕ್ಷಪಾತವಾಗಿ ನಿರ್ವಿಕಾರವಾಗಿ ಚರ್ಚಿಸಿದ್ದಾರೆ, ಮಾರ್ಗದರ್ಶನ ಮಾಡಿದ್ದಾರೆ.

ಭರತ ಭೂಮಿ ನನ್ನ ತಾಯಿ
ನನ್ನ ಪೊರೆವ ತೊಟ್ಟಿಲು
ಜೀವನವನೆ ದೇವಿಗೆರವೆ
ಬಿಡುತೆ ಗುಡಿಯ ಕಟ್ಟಲು [11]

ಎಂದು ಹಾಡಿದ ಕವಿಯಲ್ಲಿ

ಎಲ್ಲಾದರು ಇರು ; ಎತಾದರೂ ಇರು ;
ಎಂದೆಂದಿಗೂ ನೀ ಕನ್ನಡವಾಗಿರು
ಎಂದೆಂದಿಗೂ ತಾನ್
ಕನ್ನಡವೇ ಸತ್ಯ ! ಕನ್ನಡವೇ ನಿತ್ಯ
ಅನ್ಯ ವಸಲದೆ ಮಿಥ್ಯಾ! [12]

ಎಂಬ ಮಾತನ್ನು ಹೇಳಿರುವುದು ಅತ್ಯಂತ ಔಚಿತ್ಯ ಪೂರ್ಣವಾಗಿದೆ. ಪ್ರಜಾಪ್ರಭುತ್ವದ ಹಿರಿಮೆಯನ್ನು ಸರ್ವರಿಗೆ ಸಮಬಾಳು ಸರ್ವರಿಗೆ ಸಮಪಾಲು ಎಂಬ ವಿಶಾಲ ಹೃದಯವಂತಿಕೆಯ ವ್ಯಕ್ತಿ ಮಾತ್ರ ಹೇಳಬಲ್ಲವಂಥವು. ದೇಹದ ಒಳಗೆ ಎಲ್ಲಾ ಅಂಗಗಳ ಸ್ವಾತಂತ್ರ್ಯ ಉಳಿವು ಬೆಳವಣಿಗೆ ಹೇಗೆ ಮುಖ್ಯವೋ ಹಾಗೆ ಭಾರತದ ಉಳಿವಿಗೆ ಪ್ರಾಂತೀಯ ಭಾಷೆ ಮತ್ತು ಸಂಸ್ಕೃತಿಗಳ ಉಳಿವು ಬೆಳವಣಿಗೆ ಅತ್ಯಗತ್ಯ ಎಂಬುದನ್ನು ಕವಿ ಸಮರ್ಥಿಸಿದ್ದಾರೆ.

ಇಂಗ್ಲಿಷ್ ಶಿಕ್ಷಣ ನಮಗೆ ಉಪಕಾರ ಮಾಡಿತು ನಿಜ. ಆದರೆ ಅಷ್ಟೇ ಅಪಕಾರವನ್ನು ಮಾಡಿತೆಂಬುದನ್ನು ಮರೆಯುವಂತಿಲ್ಲ. ನಮ್ಮ ಜನರು ಇಂಗ್ಲಿಷಿನಿಂದ ನಾಗರೀಕತೆಯನ್ನು ಕಲಿತರೆ ವಿನಹ, ಅವರ ಸಂಸ್ಕೃತಿ ಪ್ರಿಯತೆಯನ್ನು ಕಲಿಯಲಿಲ್ಲ. ನಮ್ಮದೆಲ್ಲವೂ ಪ್ರಯೋಜನವಿಲ್ಲದ್ದು. ಎಂಬತಹ ರೋಟರಿ ಸಂಸ್ಕೃತಿ ನಮ್ಮವರನ್ನು ಬಹು ಬೇಗ ಆವರಿಸಿತು. ಆ ಇದು ಸಮಾಜದ ಮೇಲೆ ನಾನಾರೀತಿಯ ನ್ಯೂನ್ಯತೆಗಳನ್ನು ಉಂಟುಮಾಡಿತು. ಒಂದು ಪೂರ್ವ ಕಾಲದಲ್ಲಿ ನಮ್ಮ ಜನರು ಹಿಡಿದ ಅಡ್ಡದಾರಿಯನ್ನು ಕುವೆಂಪು ತಮ್ಮ ಕವನಗಳಲ್ಲಿ ತೋರಿಸಿದ್ದಾರೆ. ನಮ್ಮ ಜನರನ್ನು ಹುರಿದುಂಬಿಸಿದ್ದಾರೆ

ಜನತೆಯ ಪ್ರಾಮಾಣಿಕ ದುಡಿಮೆಯಿಂದಾಗಿ ಪಾಶ್ಚಿಮಾತ್ಯ ದೇಶಗಳು ಸಾಧಿಸಿರುವ ಪ್ರಗತಿಯತ್ತ ಕವಿ ನಮ್ಮ ತರುಣರ ಗಮನ ಸೆಳೆದಿದ್ದಾರೆ ಅದರೊಂದಿಗೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು ನಮ್ಮ ಹಿರಿಯರ ತ್ಯಾಗ ಬಲಿದಾನಗಳು ನಮಗೆ ಸದಾ ಸ್ಫೂರ್ತಿಯಾಗಬೇಕು.

ಪ್ರಪಂಚದ ಬೇರೆ ಬೇರೆ ಸಂಸ್ಕೃತಿಯೊಂದಿಗೆ ನಾವು ತಲೆ ಎತ್ತಿ ನಿಲ್ಲಬೇಕಾದರೆ ನಮಗೆ ನಮ್ಮ ಇತಿಹಾಸ ಸಂಸ್ಕೃತಿಯ ಬಗೆಗೆ ಅರಿವು ಗೌರವಗಳಿರಬೇಕು- ಆಗ ಮಾತ್ರ ಬೇರೆಯವರು ನಮಗೆ ಗೌರವ ತೋರಿಸುತ್ತಾರೆ ನಾವು ಶಕ್ತರೆಂದು ವಿಶ್ವದಲ್ಲಿ ಮಾನ್ಯತೆ ಪಡೆಯಬಹುದು ಅದಕ್ಕಾಗಿ

> ಕೈಲಾಗದವರೆಂಬ ನಾವು ಕೀಳೆಂದೆಂಬ
> ಹಣೆ ಬರಹವೆಂದೆಂಬ ಮೂಢತೆಯ ನೀಗಿ
> ಯುಗ ಚಕ್ರ ಪರಿವರ್ತನೆಗೆ ಸರ್ವರು ಸೇರಿ
> ಹೆಗಲು ಕೊಟ್ಟು ಒಮ್ಮನಸು ಮಾಡಿ ನೆರವಾಗಿ ![13]

ಎಂದು ಹೇಳುವುದರ ಮೂಲಕ ದೇಶ ನಾಡು ಮೌಢ್ಯತೆಯಿಂದ ಕ್ರಿಯಾಶೀಲತೆಯತ್ತ ಸಾಗಲು ಪ್ರೇರೇಪಿಸುತ್ತಾರೆ.

ಅಲ್ಲಿ ಇಲ್ಲಿ ? - ಕವನದಲ್ಲಿ ಜವಹರ ಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದಾಗ ವಿಶ್ವಸಂಸ್ಥೆಯಲ್ಲಿ ಮಾಡಿದ ಭಾಷಣವು ಕವಿಯ ಮನಸ್ಸಿನಲ್ಲಿ ಮೂಡಿಸಿದ ಭಾವನೆಗಳು ಈ ಕವಿತೆಯಲ್ಲಿ ಪ್ರಕಟವಾಗಿವೆ. ಅವರ ಭಾಷಣಕ್ಕೂ ಭಾರತದ ಸ್ಥಿತಿಗೂ ತಾಳಮೇಳವೇ ಇರಲಿಲ್ಲವೆಂದು ಕವಿಯು ಭಾವಿಸುತ್ತಾರೆ. ನೆಹರು ಒಬ್ಬ ಶ್ರೇಷ್ಠವಾಗ್ಮಿ ಇತಿಹಾಸವನ್ನು ಚೆನ್ನಾಗಿ ತಿಳಿದುಕೊಂಡಿದ್ದ ವಿದ್ವಾಂಸ, ಮುತ್ಸದ್ದಿ ಅವರ ಭಾಷಣವನ್ನು ಇದೇ ಸಭೆಯು ಮೆಚ್ಚಿಗೆಯ ಚಪ್ಪಾಳೆಯೊಡನೆ ಕೇಳುತ್ತಿರುವುದನ್ನು ರೇಡಿಯೋ ಕೇಳಿಸಿಕೊಳ್ಳುತ್ತಿದ್ದ ಕವಿಯು ಭಾರತದ ಬಗ್ಗೆ ಅಭಿಮಾನವನ್ನು ತುಂಬಿಕೊಳ್ಳುತ್ತಾರೆ. ಆದರೆ ಮರುಕ್ಷಣವೇ ಬಲೂನಿಗೆ ಸೂಜಿ ತಗುಲಿದಂತೆ ಉತ್ಸಾಹವು ಕುಗ್ಗಿ ಹೋಗುತ್ತದೆ. ಭಾಷಣದಲ್ಲಿ ಏನೋ ಅಪಚಾರವಾಯಿತೆಂದಲ್ಲ. ಅವರ ಭಾಷಣ ಅಮೋಘವಾಗಿಯೇ ಸಾಗಿತ್ತು. ಆದರೆ ಕವಿಯ ದೃಷ್ಟಿ ಭಾರತದ ವಾಸ್ತವ ಸ್ಥಿತಿಯ ಕಡೆಗೆ ಜಾರಿತ್ತು. ಭಾಷಣದಲ್ಲಿ ಸೇರಿದ್ದ ಭಾವೈಕ್ಯತೆ, ಸರ್ವೋದಯ, ಸಮನ್ವಯ, ಸತ್ಯ, ಅಹಿಂಸೆ, ಸ್ನೇಹ, ದಯೆ ಇತ್ಯಾದಿ ಅಂಶಗಳು ಉದಾತ್ತವಾದುವು ನಿಜ, ಭಾರತದಲ್ಲಿ ಅವುಗಳಿಗೆ ಬೆಲೆ ಇಲ್ಲದಂತಾಗಿದೆ ಎನ್ನುತ್ತಾರೆ ಕವಿ. ಜಾತ್ಯತೀತ ತತ್ವವೇ ಕೇವಲ ನಾಮಕಾವಾಸ್ತೆಯಾಗಿ ಬಿಟ್ಟಿದೆ. ದಸರಾ ದರ್ಬಾರು ನಡೆದೇ ಇದೆ, ಜಾತಿ ಪರಿಗಣನೆ ಇದ್ದೇ ಇದೆ, ಕಮ್ಯೂನಿಸಮ್ ವಿಜಯಿಯಾದರೂ ಅದನ್ನು ಜಾತಿಮತಗಳಿಂದ ಮುಕ್ತಗೊಳಿಸುವುದಿಲ್ಲ. 'ನಮ್ಮ ದೇಶಕೆ ಏನು ಬಂದರೇನಂತೆ'[14] ಎಂಬ ನಿರಾಶೆಯುಂಟಾಗುತ್ತದೆ. ಕಾಲಕ್ರಮೇಣ ಈ ನಿರಾಶೆಯು ಹೆಚ್ಚಾಯಿತೇ ವಿನಾ ಕಡಿಮೆಯಾಗಲಿಲ್ಲ. ಮೊದಲಿಗಿಂತಲೂ ಈಗ ಜಾತಿ ಸಂಘಟನೆ ಹೆಚ್ಚಾಗತೊಡಗಿದೆ. ಒಂದೊಂದು ಜಾತಿಯವರೂ ಒಂದೊಂದು ಮಠಗಳನ್ನು ಸ್ಥಾಪಿಸಿಕೊಂಡು ಅದಕ್ಕೊಬ್ಬ ಸನ್ಯಾಸಿ ಗುರುವನ್ನು ಪೀಠಾದಿಪತಿಯನ್ನಾಗಿ ಮಾಡಿಕೊಂಡಿದ್ದಾರೆ. ರಾಜಕಾರಿಣಿಗಳು ಅವಕಾಶ ಸಿಕ್ಕಿದಾಗ ಬಹಿರಂಗ ಭಾಷಣ ಮಾಡುತ್ತಾ ನಮ್ಮ ಜಾತಿಯವರು ಸಂಘಟಿತರಾಗಿ ನ್ಯಾಯಕ್ಕಾಗಿ ಹೋರಾಡಬೇಕು' ಎಂದು ಹೇಳುತ್ತಾರೆ. ಹಾಗಾಗಿ ಇಂದು ಕರ್ನಾಟಕದಲ್ಲಿಯೇ ಹತ್ತಾರು ಹೊಸ ಜಾತಿ ಗುರುಪೀಠಗಳು ಹುಟ್ಟಿ ಕೊಂಡಿವೆ. ಸ್ವಾರಸ್ಯವೆಂದರೆ ಪ್ರತಿಯೊಂದು ಗುರು ಪೀಠವೂ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಅಥವಾ ಡೆಂಟಲ್

ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ಕೋರುತ್ತವೆ. ಹಾಗೆ ಕೇಳುವಾಗ ನಮ್ಮ ಜಾತಿಗೆ ಎಲ್ಲೂ ಅಂತಹ ಕಾಲೇಜು ಇಲ್ಲ ಎಂದು ಹೇಳಲಾಗುತ್ತದೆ. ಅದಕ್ಕಾಗಿ ಜಾತಿ ರಾಜಕೀಯ ಲಾಭಿ ನಡೆಯುತ್ತದೆ. ಇಷ್ಟಾದರೂ ಪ್ರತಿಯೊಂದು ಜಾತಿ ಗುರು ಪೀಠದ ಸಂಚಾಲಕರಾದ 'ಮಂತ್ರಿ ಅಥವಾ ಮುಖಂಡರು ಭಾರತದ ಜಾತ್ಯತೀತ ನಿಲುವನ್ನು ಹೊಗಳುತ್ತಾರೆ. ಇದಕ್ಕೆ ಏನೆಂದು ಹೇಳಬೇಕೆಂದು ತೋಚುವುದಿಲ್ಲ. ಹೊರಗೊಂದು ಒಳಗೊಂದು ಆಡುವ ಜನರ ಅಂತರಾತ್ಮ ಎಷ್ಟು ಪೇಚಾಡುತ್ತದೋ ಅಥವಾ ಕಿಂಚಿತ್ತೂ ಚಿಂತಿಸುವುದೇ ಇಲ್ಲವೋ ಯಾವುದೂ ಸ್ಪಷ್ಟವಾಗುವುದಿಲ್ಲ.

ಇದರಿಂದಾಗಿ ಭಾರತವು ಒಳಗಿನವರಿಂದ ಮತ್ತು ಹೊರಗಿನವರಿಂದ ಏಟು ತಿನ್ನುತ್ತಾ ದುರ್ಬಲವಾಗತೊಡಗಿರುವುದು. ಪ್ರತಿನಿತ್ಯವೂ ಸಾಬೀತಾಗುತ್ತಿದೆ. ಅಪ್ರಾಮಾಣಿಕತೆ ಎಂಬ ಡೈನೋಸರಸ್ ಭಾರತವನ್ನು ಬುಡಮಟ್ಟ ಅಲ್ಲಾಡಿಸುತ್ತಿದೆ. ಈ ಕವಿತೆಯನ್ನು ಬರೆದಾಗ ಇದ್ದ ದುಸ್ಥಿತಿಯು ಈಗ ಸಾವಿರ ಪಟ್ಟು ಹೆಚ್ಚಾಗಿದೆ. ಕವಿ ಮನಸ್ಸು ಎಷ್ಟು ಚಿಂತಿತವಾಗಿತ್ತೆಂಬುದು ಇದರಿಂದ ಮನದಟ್ಟಾಗುತ್ತದೆ.

ಕನ್ನಡನಾಡು ನುಡಿಯ ಅಭಿಮಾನದ ಕವನಗಳನ್ನು ಗುರುತಿಸಿದಾಗ ಕವಿಯು ವಿಶ್ವಮಾನವ ತತ್ವವನ್ನು ಹೇಳುತ್ತಾರಾದರೂ ಏಕೆ ಕನ್ನಡ, ಕರ್ನಾಟಕ ಎಂದು ಹೇಳುತ್ತಾ ಅಷ್ಟಕ್ಕೆ ಸೀಮಿತರಾಗುತ್ತಾರೆ ಎಂಬ ಕುತೂಹಲ ಕೆಲವರಲ್ಲಿ ಮೂಡಬಹುದು. ಇದು ಆಂಶಿಕ ದೃಷ್ಟಿಯ ಫಲವಾಗಿ ಹುಟ್ಟುತ್ತದೆ. ನಾವು ಅಂಶ ಅಂಶವನ್ನು ನೋಡಿ ಅದೇ ಸರಿ ಎಂದು ತಿಳಿಯುತ್ತೇವೆ. ಆದರೆ ಪೂರ್ಣ ದೃಷ್ಟಿಯೊಂದನ್ನು ಹೊಂದಿರುವವರು ಸಮಗ್ರ ದೃಷ್ಟಿಯಿಂದ ನೋಡಿ ಅರ್ಥಮಾಡಿಕೊಳ್ಳುತ್ತಾರೆ. ನಾವು ಕರ್ನಾಟಕದ, ಭಾರತದ ಹಿತಕ್ಕೆ ಹೋರಾಡುತ್ತೇವೆಂದು ನಿರ್ಧರಿಸಿದ್ದರೂ. ನಮ್ಮ ಮನೆಯ ಯೋಗಕ್ಷೇಮವನ್ನು ನಿರ್ಲಕ್ಷಿಸಿ ಬಿಡಲು ಸಾಧ್ಯವಾಗುತ್ತದೆಯೇ? ವಿಶ್ವದ ಹಿತಕ್ಕೆ ಹೋರಾಡುತ್ತೇವೆಂದು ನಿರ್ಧರಿಸಿದರೂ ನಮ್ಮ ಮನೆಯ ಯೋಗ ಕ್ಷೇಮವನ್ನು ನಿರ್ಲಕ್ಷಿಸಿಬಿಡಲು ಸಾಧ್ಯವಾಗುತ್ತದೆಯೇ? ವಿಶ್ವದ ಒಂದು ಭಾಗ ಭಾರತ. ಭಾರತದ ಒಂದು ಭಾಗ ಕರ್ನಾಟಕ, ಕರ್ನಾಟಕದ ಒಂದು ಭಾಗ ನಮ್ಮ ಕುಟುಂಬ. ಆದ್ದರಿಂದ ಹಿಂದಿನವರು 'ಮನೆಗೆದ್ದು ಮಾರುಗೆಲ್ಲು' ಎಂದು ಹೇಳುತ್ತಿದ್ದರು. "ಅಟ್ಟಹತ್ತು ಅನಂತರ ಬೆಟ್ಟ ಹತ್ತು" ಎಂದೂ ಕೂಡ ಹೇಳುತ್ತಿದ್ದರು. ಕವಿಯು ಕರ್ನಾಟಕದ ಬಗ್ಗೆ ಅಭಿಮಾನ ತಾಳುವ ರೀತಿಯನ್ನು ಮೊದಲು ಗಮನಿಸಿ 'ಭಾರತ ಜನನಿಯ ತನುಜಾತೆ' ಯಾದ ಕರ್ನಾಟಕ ಮಾತೆಗೆ ಜಯವಾಗಲಿ ಎಂದು ಹೇಳುವುದನ್ನು ಗಮನಿಸಿರಿ. ಭಾರತ ಎಂಬ ಶರೀರದ ಅಂಗವಾದ ಕರ್ನಾಟಕ ದುರ್ಬಲವಾದರೆ, ಗಾಯಗೊಂಡರೆ ಭಾರತಕ್ಕೆ ತೊಂದರೆಯಾಗುವುದಿಲ್ಲವೆ. ಎಲ್ಲ ಮಕ್ಕಳೂ ಸುಖ ಸಂತೋಷದಿಂದ ಇದ್ದರೆ ತಾಯಿಗೆ ನೆಮ್ಮದಿ ಇರುತ್ತದೆ. ಅಲ್ಲವೆ? ಹಾಗೆಯೇ ಕವಿಯು, ಕರ್ನಾಟಕದ, ಕನ್ನಡದ ಹಿತವೇ ಮೊದಲು, ಅನಂತರ ವಿಶ್ವದ ಲೆಕ್ಕವನ್ನು ತೆಗೆದುಕೊಳ್ಳಬಹುದು ಎನ್ನುತ್ತಾರೆ. ಕವನದ ಸಾಲು ಸಾಲುಗಳಲ್ಲಿ ಭಾರತದ ಹಿರಿಮೆಯನ್ನು ಹೇಳುತ್ತಾ ಅಂತಹ ಭಾರತಾಂಬೆಯ ಮಗಳು ಕರ್ನಾಟಕಾಂಭೆಗೆ ಜಯವಾಗಲಿ ಎಂದು ಹೇಳುವ ತಂತ್ರವನ್ನು ಅನುಸರಿಸಿದ್ದಾರೆ. ಆದರೆ ಭಾರತದ ಹಿರಿಮೆಯಿಂದ ಮಾತ್ರ ಕರ್ನಾಟಕಕ್ಕೆ ಮಾನ್ಯತೆ ಎಂದು ತಿಳಿಯಬಾರದು.

ಕರ್ನಾಟಕದ ಹಿರಿಮೆಯಿಂದ ಭಾರತಕ್ಕೆ ಮನ್ನಣೆ ಸಿಗುತ್ತದೆ. ಎಂಬ ಭಾವನೆಯೂ ಇಲ್ಲಿ ಇದೆ. ಕವಿಗಳು, ಶಿಲ್ಪಿಗಳು, ಉದಾತ್ತ ರಾಜರು, ಭಕ್ತ ಶ್ರೇಷ್ಠರು, ತ್ಯಾಗ ಜೀವಿಗಳು ಹುಟ್ಟಿದ ನಾಡು. ಪ್ರಕೃತಿ ಸೌಂದರ್ಯವು ರಾರಾಜಿಸುವ ನಾಡು. ತನ್ನದೇ ಆದ ಸಂಸ್ಕೃತಿಯನ್ನು ಹೊಂದಿರುವ ನಾಡು ಎಂಬುದನ್ನು ಕವಿಯು ಎತ್ತಿ ಹಿಡಿಯುತ್ತಾರೆ. ಸಂಸ್ಕೃತ ಭಾಷೆಯ ಮಹತ್ವವನ್ನು ತುಂಬು ಹೃದಯದಿಂದ ಹೊಗಳುತ್ತಾರೆ. ಅದನ್ನು ಹಿಮಾಲಯಕ್ಕೆ ಹೋಲಿಸುತ್ತಾರೆ. ಸಂಸ್ಕೃತವಿಲ್ಲದೆ ಭರತ ಖಂಡದ ಬದುಕೂ ಇಲ್ಲ ಎನ್ನುತ್ತಾರೆ.

ಆದರೆ ಕನ್ನಡಕ್ಕೆ ಅದು ಅಡಚಣೆಯನ್ನೊಡ್ಡಬಾರದು. ಏಕೆಂದರೆ ತಾಯಿಯು ತನ್ನ ಮಕ್ಕಳನ್ನು ಬೆಳೆಯಲು ಬಿಡಬೇಕು. ಹಾಲು ಕುಡಿಸಿ ಬೆಳೆಸಿದ ತಾಯಿ ಅಸೂಯೆ ಪಡಬಾರದು ಅಥವಾ ಸ್ಪರ್ಧಿಸಬಾರದು. ತಾಯಿಯೇ ವೈರಿಯಾದರೆ ರಕ್ಷಿಸುವವರಾರು. ಆದ್ದರಿಂದ ಕನ್ನಡವನ್ನು ಬೆಳೆಯಲು ಬಿಡುವುದು ತಾಯಿಗೆ ಸಂತೋಷದ ಸಂಗತಿಯಾಗಿರಬೇಕು. ಕವಿಯು ಮಗಳು ಎಂದು ಇಲ್ಲಿ ಹೇಳ ಬಹುದು. ಆದರೆ ಕನ್ನಡವು ಸಂಸ್ಕೃತದ ಸಾಕುಮಗಳು ಎಂಬುದನ್ನು ವಿದ್ಯಾರ್ಥಿಗಳು ಮರೆಯಬಾರದು. ದಕ್ಷಿಣ ಭಾರತದ ಭಾಷೆಗಳು ದ್ರಾವಿಡ ಭಾಷಾ ವರ್ಗಕ್ಕೆ ಸೇರಿದೆ. ಒಂದು ಕಾಲದಲ್ಲಿದ್ದ ಮೂಲ ದ್ರಾವಿಡ ಭಾಷೆಯಿಂದ ತಮಿಳು, ಕನ್ನಡ, ತುಳು, ತೆಲುಗು, ಮಲಯಾಳಂ ಭಾಷೆಗಳು ಬೇರೆ ಬೇರೆ ಶಾಖೆಗಳಾಗಿ ಒಡೆದು ಸ್ವತಂತ್ರವಾಗಿ ಬೆಳೆದುವು. ಇದನ್ನು ೧೯ ಶತಮಾನದ ಪಾಶ್ಚಾತ್ಯ ಭಾಷಾ ವಿಜ್ಞಾನಿಗಳು ಮೊದಲು ವಾದಿಸಿ ಸಾಧಿಸಿ ಸಕಾರಣವಾಗಿ ಸಮರ್ಥಿಸಿ ತೋರಿಸಿದರು. ಆದರೂ ಭಾಷಾ ವಿಜ್ಞಾನದ ಮೂಲಭೂತ ತತ್ವಗಳನ್ನು ತಿಳಿಯದವರು ಸಂಸ್ಕೃತದಿಂದ ಕನ್ನಡ ಇತ್ಯಾದಿಗಳು ಹುಟ್ಟಿದುವು ಎಂದು ನಂಬಿದ್ದಾರೆ. ಕುವೆಂಪು ಅವರು ಕನ್ನಡವು ಸಂಸ್ಕೃತದ ಸಾಕುಮಗಳು ಎಂಬ ಅರ್ಥದಲ್ಲಿ ಬರೆದಿದ್ದಾರೆ.

ಕರ್ನಾಟಕ ಏಕೀಕರಣವಾದ ನಂತರವೂ ಅದರ ಹೆಸರು ಕರ್ನಾಟಕ ಎಂದು ಆಗಲಿಲ್ಲ. ಆಗ ಕವಿಯು ಅದನ್ನು ಬಹಿರಂಗವಾಗಿ ಭಾಷಣಗಳಲ್ಲಿ ಹೇಳಲು ತೊಡಗಿದಾಗ ಕರ್ನಾಟಕ ಸರಕಾರವೇ ಆಕ್ಷೇಪಿಸಿ ಅವರಿಗೆ ಪತ್ರ ಬರೆದಿತ್ತು. ಕವಿಯು ಅಷ್ಟಕ್ಕೆಲ್ಲ ಜಗ್ಗುವ ಜೀವವಾಗಿರಲಿಲ್ಲ. ಕವಿಯ ಕನಸಿನ ಕರ್ನಾಟಕ ಹೇಗಿರುತ್ತದೆ ಎಂಬುದನ್ನು ಕವನದ ಮೂಲಕವೇ ವಿವರಿಸಿದರು. ಅದು ನಾಲ್ಕು ದಿನದ ರಾಜಕೀಯದ ನಾಟಕವಲ್ಲ, ಕೀರ್ತಿಶನಿಯ ರಾಜಕೀಯ ನಾಟಕವಲ್ಲ, ಅದು ಸರಸ್ವತಿಯೆ ರಚಿಸಿದ ಕರ್ನಾಟಕ ಸರ್ಕಾರ ಎಂದು ಹೇಳಿದರು. ಯಾವುದನ್ನು ಬರೆಯಬಾರದು ನುಡಿಯಬಾರದು ಎಂದು ಸರಕಾರ ಹೇಳಿತ್ತೋ ಅದನ್ನೇ ಹೇಳತೊಡಗಿದರು. ಅವರ ವೀರಾವೇಶದ ಕವನಕ್ಕೆ ಸರಕಾರ ಪೆಚ್ಚಾಯಿತು. ನೀವು 'ಅಖಂಡ ಕರ್ನಾಟಕ' ಎಂಬ ಕವನವನ್ನು ಓದಿ ನೋಡಿರಿ. ನಿಮಗೂ ಕೂಡ ಕರ್ನಾಟಕಾವೇಶ ಎಂಬ ಆವೇಶವು ಉಂಟಾಗುತ್ತದೆ. ಅದೇ ಆವೇಶದಲ್ಲಿರುವಾಗಲೇ ಮುಂದಿನ ಕವನವನ್ನೂ ಓದಿರಿ. 'ಮೆಟ್ಟುವ ನೆಲ ಕರ್ನಾಟಕ' ಎಂಬ ಕವನವು ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂಬ ಪ್ರೀತಿ ಪೂರ್ವಕ ಆದೇಶವನ್ನು ನೀಡುತ್ತದೆ. ಈ ಆದೇಶವು ಎಂದಿಗಿಂತಲೂ ಇಂದು ತುಂಬಾ ಪ್ರಸ್ತುತವಾಗಿದೆ. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಗಳಿಗೆ ಹೋಗುತ್ತಿದ್ದಾರೆ. ಅಲ್ಲದೆ ಅಲ್ಲಿ ಕನ್ನಡ ಸಂಘಗಳನ್ನು ಕಟ್ಟುತ್ತಿದ್ದಾರೆ.

ಕುವೆಂಪು ಅವರು ಇಂದು ಇದ್ದಿದ್ದರೆ ತುಂಬಾ ಸಂತೋಷಪಡುತ್ತಿದ್ದರು. ಕನ್ನಡ ನಾಡಿನಲ್ಲಿಯೇ ಕನ್ನಡ ಹಿಂದೆ ಬೀಳಲು ಜನರು ನಿರಭಿಮಾನ, ಅಧಿಕಾರಿಗಳ ಉದಾಸೀನ, ಸರ್ಕಾರದ ರಾಜಕೀಯ ದೃಷ್ಟಿ ಇವು ಮೂರು ಕಾರಣಗಳಾಗಿವೆ. ಕವಿಯು ಸಾಂಸ್ಕೃತಿಕ ಕರ್ನಾಟಕವನ್ನು ಕಣ್ಣಿನ ಮುಂದೆ ಚಿತ್ರಿಸಿಕೊಂಡು ಅದನ್ನು ಸಾಕಾರಗೊಳಿಸಲು ಬಯಸುತ್ತಾರೆ. ಇಂಗ್ಲಿಷ್ ಭಾಷೆ ಮತ್ತು ಕನ್ನಡ ಭಾಷೆಗಳನ್ನು ತೋಳ ಮತ್ತು ಮುದ್ದಿನ ಕುರಿಮರಿಗೆ ಹೋಲಿಸಿ ಅತ್ಯಂತ ವ್ಯಂಗ್ಯವಾಗಿ ಬರೆದಿರುವುದನ್ನು ನೋಡಬಹುದು. ಎಷ್ಟು ಸಮರ್ಥವಾಗಿ ಇಂದಿನ ಪರಿಸ್ಥಿತಿಯನ್ನು ವಿಭಾವಾತ್ಮಕವಾಗಿ ವರ್ಣಿಸಿದ್ದಾರೆಂಬುದನ್ನು ಓದಿಯೇ ಅನುಭವಿಸಬೇಕು, 'ಭಾವೈಕ್ಯತೆ ' ಎಂಬ ಹೆಸರಿನ ಕವನವನ್ನು ಒಮ್ಮೆ ಓದಿರಿ, ನಿಮಗೇ ತಿಳಿಯುತ್ತದೆ ವ್ಯಂಗ್ಯದ ಹಿಂದೆ ಇರುವ ನೋವು. ತೋಳ ಹೇಳುತ್ತದೆ. 'ನಿನ್ನದು ಗುಡ್ಡಗಾಡು ಭಾಷೆ, ನಾನೋ ವಿಶ್ವಭಾಷೆ ಪ್ರಪಂಚಕ್ಕೆ ರಾಷ್ಟ್ರ ಭಾಷೆ...... ಬಾ ನನ್ನ ಒಳಗೆ ಶೀಘ್ರ' ಎಂದು. ಹೊರಗೆ ಹುಲಿ ನಿನಗಾಗಿ ಹೊಂಚು ಹಾಕುತ್ತಿದೆ. ಆದ್ದರಿಂದ ನೀನು ನನ್ನ ಹೊಟ್ಟೆಯ ಒಳಗೆ ಇದ್ದರೆ ಅಪಾಯ ತಟ್ಟುವುದಿಲ್ಲ ಎನ್ನುತ್ತದೆ. ಬಹುಶಃ ಹುಲಿಯನ್ನು ಹಿಂದಿ ಭಾಷೆ ಎಂದು ತಿಳಿಯಬಹುದು. ಕವಿಯು ಎಂದೋ ಹೇಳಿದುದು ಇಂದಿಗೂ ಪ್ರಸುತ್ತವಾಗಿದೆ. ಎಷ್ಟೇ ಹೇಳಿದರೂ ತೋಳದ ಹೊಟ್ಟೆಯೊಳಕ್ಕೆ ಹೋಗುವ ದಾರಿಯಲ್ಲಿಯೇ ಮುದ್ದಿನ ಕುರಿಮರಿ ನಡೆಯುತ್ತದೆ, ಅಲ್ಲಿ ನಡೆಸುತ್ತಿದ್ದಾರೆ. ಅದಕ್ಕಾಗಿ ನೂರೆಂಟು ಕಾರಣಗಳನ್ನು ಕೊಟ್ಟು ಸಮರ್ಥಿಸಿ ಕೊಳ್ಳುತ್ತಿದ್ದಾರೆ. ಪ್ರಪಂಚದ ಬೇರೆ ಯಾವ ಭಾಷೆಗೂ ಇಂತಹ ದುರ್ದಶೆ ಉಂಟಾಗಿಲ್ಲವೆಂದು ತೋರುತ್ತದೆ. ಇಂಗ್ಲಿಷಿನ ಮರುಭೂಮಿಯಲ್ಲಿ ಕನ್ನಡ ಮಕ್ಕಳ ಶಕ್ತಿ, ಬುದ್ಧಿ, ಪ್ರತಿಭೆಗಳು ಇಂಗಿ ಹೋಗುತ್ತಿವೆ ಎಂದು ಹೇಳುತ್ತಾರೆ. ಸರ್ವ ಭಾಷಾಮಯಿ ಸರಸ್ವತಿ ಎಂಬ ಕಲ್ಪನೆಯನ್ನು ಮಾಡಿರುವ ಕವಿಗೆ ಭಾಷಾದ್ವೇಷವಿಲ್ಲ ಅವರು ಹೇಳಿರುವುದು ಬಲಾತ್ಕಾರವಾಗಿ ಯಾವ ಭಾಷೆಯನ್ನೂ ಹೇರಬೇಡಿ ಎಂದು. ಕುವೆಂಪು ಈಗ ಇದಿದ್ದರೆ ಅವರಿಗೆ ಹೊಸ ಕುತಂತ್ರ ತಿಳಿಯುತ್ತಿತ್ತು. ಯಾರೂ ಹೇರದಿದ್ದರೂ ಜನಗಳೇ ಓಡಿ ಬಂದು ಅಪ್ಪಿಕೊಳ್ಳುವಂತೆ ಮಾಡಲಾಗುತ್ತಿದೆ. ಹಣಕ್ಕೆ ಪಟ್ಟ ಕಟ್ಟುವವರು ಉಳಿದ ಎಲ್ಲಕ್ಕೂ ಚಟ್ಟ ಕಟ್ಟುತ್ತಾರೆ. ಇಂಗ್ಲಿಷ್ ಹಿಡಿದರೆ ಹಣ, ಅಧಿಕಾರ, ಕೀರ್ತಿ, ವೈಭೋಗ ಎಂದು ಹೇಳಿದರೆ ಸಾಕು, ಬಿದ್ದು ಕಾಲು ಹಿಡಿಯುತ್ತಾರೆ. ''ಬೇಕಾದವರಿಗೆ ಕೊಡಿರೊ, ಬೇಡವೆಂದವರಾರು, ಹೇರಿ ಎಲ್ಲರ ಮೇಲೆ ಕೊಲೆಗೈವಿರೇಕೋ?' ಎಂದು ಕವಿ ಕೂಗಿ ಹೇಳುತ್ತಾರೆ. ಆದರೆ ಪರಿಸ್ಥಿತಿಯು ಹಾಗೆ ಇಲ್ಲ ಎನ್ನುವುದನ್ನು ನೀವೆಲ್ಲರೂ ತಿಳಿದಿದ್ದೀರಿ. ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗಿಲ್ಲ. ಇಂಗ್ಲಿಷ್ ಮಾಧ್ಯಮವನ್ನು ಕಡ್ಡಾಯ ಮಾಡಿಲ್ಲ. ಆದರೂ ಜನರೇ ಸ್ವಂತ ಇಚ್ಛೆಯಿಂದ ಆಯ್ಕೆ ಮಾಡಿಕೊಳ್ಳುತ್ತಿರುವುದನ್ನು ನೋಡಿದರೆ ಈ ಕವನದ ಉದ್ದೇಶ ಈಡೇರುವುದಿಲ್ಲವೆನ್ನಿಸುತ್ತಿದೆ. ಬಲಾತ್ಕಾರವಿದ್ದರೆ ಅದನ್ನು ತಪ್ಪಿಸಬಹುದು, ಇಲ್ಲದಿದ್ದರೆ ಏನು ಮಾಡುವುದು. ಆದ್ದರಿಂದ ಕವಿಯು ಪ್ರಾರ್ಥನೆಯ ದಾರಿಯನ್ನು ಹಿಡಿಯುತ್ತಾರೆ. ಇಂಗ್ಲಿಷ್ ಎಂಬ ಪೂತನಿಯನ್ನು ಕೊಂದು ಕನ್ನಡಿಗರನ್ನು ರಕ್ಷಿಸುವಂತೆ ಕೃಷ್ಣನಿಗೆ ಪ್ರಾರ್ಥನೆ ಸಲ್ಲಿಸುತ್ತಾರೆ. ಪ್ರಾರ್ಥನೆಯೂ ಸಾಲದೆಂದು ತಿಳಿದು ಕನ್ನಡಿಗರನ್ನು ಛೇಡಿಸುತ್ತಾರೆ. ನಿಮಗೆ ಗಂಡಸುತನವಿದ್ದರೆ ಪ್ರಾಣಿಗಳಂತೆ ಬಾಲ ಅಲ್ಲಾಡಿಸಬೇಡಿ. ಸಂಸ್ಕೃತ

ಮತ್ತು ಹಿಂದಿ ಭಾಷೆಗಳು ಕನ್ನಡವನ್ನು ದೂರಕ್ಕೆ ತಳ್ಳುತ್ತಿವೆ ಎಂಬುದು ಕವಿಯ ಕೋಪಕ್ಕೆ ಕಾರಣವಾಗುತ್ತದೆ. ಛೇಡಿಸಿದರೂ ಏನೂ ಆಗಲಿಲ್ಲವೆಂದು ತಿಳಿದು ಕನ್ನಡ ಡಿಂಡಿಮವನ್ನು ಬಾರಿಸುವಂತೆ ಮನವಿ ಸಲ್ಲಿಸುತ್ತಾರೆ. ಸತ್ತಂತೆ ಇರುವ ಕನ್ನಡಿಗರನ್ನು ಬಡಿದು ಎಚ್ಚರಿಸುತ್ತಾರೆ.

1960ರಲ್ಲಿ 'ಮಾನಸ ಗಂಗೋತ್ರಿಯ' ಪ್ರಾರಂಭೋತ್ಸವದಲ್ಲಿ ಬರೆದ ಕವನ ' ಕನ್ನಡಡಿಂಡಿಮ'.

ಬಾರಿಸು ಕನ್ನಡ ಡಿಂಡಿಮವ
ಓ ಕರ್ನಾಟಕ ಹೃದಯ ಶಿವ
ಸತ್ತಂತಿ ಹರನು ಬಡಿದೆಚ್ಚರಿಸು[15]

ಈ ಕವನದಲ್ಲಿ ಕವಿ ಇಂಗ್ಲಿಷ್ ಮತ್ತಿತರ ಭಾಷೆಗಳು ಕನ್ನಡ ಭಾಷೆಯ ಮೇಲೆ ನಡೆಸುತ್ತಿದ್ದ ದಾಳಿಯಿಂದ ಮತ್ತು ಕನ್ನಡವು ನಶಿಸುವತ್ತಿಂದ್ದ ಕ್ಲಿಷ್ಟ ಪರಿಸ್ಥಿತಿಯಲ್ಲಿ ಈ ಕವನ ನಿರೂಪಿತಗೊಂಡಿದೆ. ಕನ್ನಡ ಭಾಷೆಯ ಉಳಿವಿಗಾಗಿ ಪ್ರಸ್ತುತ ಪೀಳಿಗೆಯ ಮೇಲೆ ತೀವ್ರ ಪ್ರಭಾವಯುತವಾಗಿ ಈ ಕವನವು ಅಸ್ಥಿತ್ವ ಪಡೆದುಕೊಂಡಿದೆ.

ಈ ದೇಶದ ಸ್ವಾತಂತ್ರ್ಯದ ಚಳುವಳಿಯ ಜೊತೆಗೇ ಅದರದೊಂದು ಭಾಗವಾಗಿ ಹುಟ್ಟಿಕೊಂಡಿದ್ದು ಕರ್ನಾಟಕದ ಏಕೀಕರಣದ ಕಲ್ಪನೆ. ಸ್ವಾತಂತ್ರ್ಯ ಚಳುವಳಿಯ ಮೂಲಕ ಈ ದೇಶ ಪರಕೀಯ ಪ್ರಭುತ್ವದಿಂದ ಬಿಡುಗಡೆ ಪಡೆಯುವುದು ಎಷ್ಟು ಮುಖ್ಯವಾಗಿತ್ತೋ ಅಷ್ಟೆ ಮುಖ್ಯವಾಗಿತ್ತು. ವಸಾಹತುಷಾಹೀ ಕಾರಣದಿಂದ ಹರಿದು ಹಂಚಿ ಹೋದ ಕರ್ನಾಟಕ ಮತ್ತೇ ಏಕೀಕೃತ ಕರ್ನಾಟಕವಾಗುವುದು. 'ಕರ್ನಾಟಕ ಮಾತೆ' ಯನ್ನು 'ಭಾರತ ಜನನಿಯ ತನುಜಾತೆ' ಯೆಂದ ಪರಿಭಾವಿಸಿದ ಕುವೆಂಪು ಮೊದಲಿನಿಂದಲೂ ಕನ್ನಡ ಭಾಷೆಯ ಮೇಲಣ ಉತ್ಕಟವಾದ ಪ್ರೀತಿಯನ್ನು ಕುರಿತು ಹಲವು ಕವಿತೆಗಳನ್ನು ಬರೆದ ಕುವೆಂಪು 'ಸಾಯಿತಿದೆ ನಿಮ್ಮ ನುಡಿ ಓ ಕನ್ನಡ ಕಂದರಿರ ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ' ಎಂದು ಕನ್ನಡಿಗರನ್ನು ಎಚ್ಚರಿಸುತ್ತ ಅಖಂಡ ಕರ್ನಾಟಕದ ಕನಸುಕಾಣುತ್ತ, ಕನ್ನಡದ ಸ್ಥಾನಮಾನಗಳ ಪರವಾಗಿ ದನಿಯೆತ್ತುತ್ತ ಕನ್ನಡ ಪರ ಹೊರಾಟಗಳಿಗೆ ಸ್ಪೂರ್ತಿಯಾಗುತ್ತ, ಪ್ರೋತ್ಸಾಹಿಸುತ್ತ ನಿಂತ ನಿಲುವು ಕೇವಲ ಕನ್ನಡ ಭಾಷೆಯ ಮೇಲೂ ಅಭಿಮಾನದಿಂದ ಹುಟ್ಟಿ ಕೊಂಡಿದ್ದಲ್ಲ, ಈ ದೇಶದ ಶ್ರೀಸಾಮಾನ್ಯನ ಅಭ್ಯುದಯದ ಪರವಾದ ಕಾಳಜಿಗಳಿಂದ ಹುಟ್ಟಿಕೊಂಡಿದ್ದು. ಯಾಕೆಂದರೆ ಇಂಗ್ಲಿಷ್ ಭಾಷೆ ಮತ್ತು ಶಿಕ್ಷಣದ ಹಿಡಿತ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಉಂಟುಮಾಡುವ ತಾರತಮ್ಯಗಳು ಪ್ರಜಾಪ್ರಭುತ್ವಕ್ಕೆ ವಿರೋಧಿಯಾದ ಅಸಮಾನತೆಯನ್ನು ಸುಭದ್ರಗೊಳಿಸುವ ತಂತ್ರಗಳೆ ಆಗುತ್ತವೆ. ಎಂಬ ಸತ್ವವನ್ನು ಕುವೆಂಪು ಬಲ್ಲವರಾಗಿದ್ದರು. ಆದರೂ ಕುವೆಂಪು ಕಂಡ ಅಖಂಡ ಕರ್ನಾಟಕದ ಕನಸು ನನಸಾದರೂ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಾದರೂ ಅವರು ಆಶಿಸಿದಂತೆ ಕರ್ನಾಟಕದ ಎಲ್ಲ ಹಂತಗಳಲ್ಲಿ ಕನ್ನಡಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನಮಾನಗಳು ಸಂದಿಲ್ಲ.

ವಿಶ್ವದಲ್ಲಿಯೇ ಇಂಗ್ಲಿಷ್ ಜನರ ಹಾಗೂ ಸಾಹಿತಿಗಳ ದೇಶ, ಭಾಷಾ ಪ್ರೇಮ ಸುಪ್ರಸಿದ್ಧವಾದುದು. ಅಂಥ ದೇಶಭಿಮಾನ ನಮ್ಮ ಜನರಲ್ಲಿ ಇಂದು ಮೂಢ ಬೇಕಾಗಿದೆ. ಅವರಲ್ಲಿ ಜಾಗೃತಿಯನ್ನುಂಟುಮಾಡುವ

ಗುರುತರ ಹೊಣೆಗಾರಿಕೆ ನಮ್ಮ ಸಾಹಿತಿಗಳ ಮೇಲಿದೆ. ಇಂದು ಭಾರತ ಅನೇಕ ಕೋಲಾಹಲಗಳ ನೆಲವೀಡಾಗಿದೆ. ಒಂದು ಕಡೆ ನಮ್ಮ ನೆಲದ ಮೇಲೆ ವಿದೇಶಿ ಆಕ್ರಮಣದ ಭೀತಿ ಇದ್ದರೆ ಮತ್ತೊಂದೆಡೆ ನಮ್ಮ ನಾಡಿನೊಳಗೆ ಇರುವ ಅನೇಕ ಪಾಶವಿಶಕ್ತಿಗಳ ಭಾರತದ ಸಮಗ್ರತೆಯನ್ನೇ ಛಿದ್ರಿಸುವ ಹೀನ ಕಾರ್ಯವನ್ನೆಸಗುತ್ತಿದೆ. ಇವೆಲ್ಲ ಗೊಂದಲಗಳ ನಡುವೆ ಭಾರತೀಯ 'ಶ್ರೀಸಾಮಾನ್ಯ' ನಿರ್ಲಿಪ್ತವಾಗಿದ್ದಾನೆ. ಅಲ್ಲದೆ ಭಾರತೀಯ ಗುಣವೇ ಅಷ್ಟು, ಎದ್ದರೆ ಒಂದೇ ಬಾರಿಗೆ ಏಳುವುದು, ಬಿದ್ದರೆ ಮತ್ತೇ ಮೇಲೇಳದಿರುವುದು ಇಂದು ನಮ್ಮ ಸಾಹಿತಿಗಳು ಹೊಣೆಯರಿತು ದೇಶದ ಜನರ ಮನಸ್ಸಿನಲ್ಲಿ ಶೌರ್ಯ, ತ್ಯಾಗ, ದೇಶಪ್ರೇಮ, ನಾಡು ನುಡಿಯ ಬಗೆಗಿನ ಕಾಳಜಿ ಮುಂತಾದ ಶೇಷ್ಠ ಗುಣಗಳನ್ನು ತುಂಬಬೇಕಾಗಿದೆ.

ಕುವೆಂಪುರವರ ರಾಷ್ಟ್ರೀಯ -ನಾಡು-ನುಡಿ ಕವನಗಳಲ್ಲಿ ಕಂಡು ಬರುವ ಭಾವನೆ ಅತ್ಯಂತ ಕಳಕಳಿಯದಾಗಿದೆ. ಅವು ಅವರ ಹೃದಯದಾಳದಿಂದ ಮೂಡಿ ಬಂದ ಮುತ್ತುಗಳು. ಅದು ಅವರಿಗೆ ಮಾತ್ರ ಸಿದ್ದಿಸಿದ ಸಹಜ ಸರಳ ಸುಂದರ ಶೈಲಿಯಲ್ಲಿ ಓದುಗರ ಹೃದಯವನ್ನು ಸೆರೆಹಿಡಿಯುವ ಮೋಹಕಶಕ್ತಿ, ಜನಮನವನ್ನು ಬಡಿದೆಬ್ಬಿಸಿ ಕಾರ್ಯೋನ್ಮುಖರನ್ನಾಗಿ ಮೂಡಿಸುವಂತಹ ಪ್ರೇರಕಶಕ್ತಿ ಅವರ ಶೈಲಿಗಿದೆ. ಕುವೆಂಪು ಅವರತಂಹ ಪ್ರತಿಭಾವಂತ ಕವಿಗಳು ಬೆರಳೆಣಿಕೆಯಷ್ಟಿದ್ದರೆ ಸಾಕು. ಆದೇಶದ ಜನತೆಯ ಜನಮನವನ್ನು ಬೇಕಾದಲ್ಲಿಗೆ ಬೇಕಾದ ರೀತಿಯಲ್ಲಿ ತಿದ್ದಿ ಒಯ್ಯುಬಹುದು. ಕುವೆಂಪುರವರು ಅಂತಹ ಕನ್ನಡದ ಹೆಮ್ಮೆಯ ಕವಿ. ಇಂತಹ ಶೇಷ್ಠ ಕವಿಯನ್ನು ಪಡೆದ ನಾಡು- ನುಡಿಗಳೆರಡೂ ಧನ್ಯ.

ಅಡಿ ಟಿಪ್ಪಣಿಗಳು

1) ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥಾ - ಇಕ್ಷು ಗಂಗೋತ್ರಿ - ಸಂಪುಟ-2 ಪು.ನಂ. 86

2 ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥಾ-ಇಕ್ಷು ಗಂಗೋತ್ರಿ -ಸಂಪುಟ--2 ಪು.ನಂ.86

3) ಸ್ವಾತಂತ್ರ್ಯ ಲಕ್ಷ್ಮಿಗೆ- ಇಕ್ಷು ಗಂಗೋತ್ರಿ. ಸಂಪುಟ-2 ಪು.ನಂ.98.

4) ಸ್ವಾತಂತ್ರ್ಯ ಲಕ್ಷ್ಮಿಗೆ- ಇಕ್ಷು ಗಂಗೋತ್ರಿ. ಸಂಪುಟ-2 ಪು.ನಂ.98.

5 ಸ್ವಾತಂತ್ರ್ಯ ಲಕ್ಷ್ಮಿಗೆ-ಇಕ್ಷು ಗಂಗೋತ್ರಿ. ಸಂಪುಟ-2 ಪು.ನಂ. 99.

6) ಅಖಂಡ ಕರ್ನಾಟಕ ಇಕ್ಷು ಗಂಗೋತ್ರಿ. ಸಂಪುಟ-2 ಪು.ನಂ. 124.

7) ಪಾಂಚಜನ್ಯ - ಪಾಂಚಜನ್ಯ. ಸಂಪುಟ -1 ಪು.ನಂ. 111

8) ಹೊಸಬಾಳಿನಗೀತೆ- ಕೋಗಿಲೆ ಮತ್ತು ಸೋವಿಯಟ್ ರಷ್ಯಾ. ಸಂಪುಟ-1 ಪು.ನಂ.373.

9) ಸಾಯುತ್ತಿದೆ ನಿಮ್ಮ ನುಡಿ ಓ ಕನ್ನಡ ಕಂದರಿರ.

ಕೋಗಿಲೆ ಮತ್ತು ಸೋಮಿಯಟ್ ರಷ್ಯಾ. ಸಂಪುಟ-1 ಪು.ನಂ. 384

10) ಸಾಯುತ್ತಿದೆ ನಿಮ್ಮ ನುಡಿ ಓ ಕನ್ನಡ ಕಂದರಿರ.

ಕೋಗಿಲೆ ಮತ್ತು ಸೋಮಿಯಟ್ ರಷ್ಯಾ. ಸಂಪುಟ-1 ಪು.ನಂ. 384

11) ಕೋಗಿಲೆ ಮತ್ತು ಸೋಮಿಯಟ್ ರಷ್ಯಾ. ಸಂಪುಟ-1 ಪು.ನಂ. 384

12) ಭಾರತ ಭೂಮಿ ನನ್ನ ತಾಯಿ- ಕೋಗಿಲೆ ಮತ್ತು ಸೋವಿಯಟ್ ರಷ್ಯಾ ಸಂಪುಟ-1 ಪು.ನಂ. 378.

13) ಮೆಟ್ಟು ನೆಲ ಕರ್ನಾಟಕ -ಕೋಗಿಲೆ ಮತ್ತು ಸೋವಿಯಟ್ ರಷ್ಯಾ -ಸಂಪುಟ -1 ಪು.ನಂ. 387.

14) ಹೊಸಬಾಳಿನ ಗೀತೆ -ಕೋಗಿಲೆ ಮತ್ತು ಸೋವಿಯಟ್ ರಷ್ಯಾ - ಸಂಪುಟ-1 ಪು.ನಂ. 373.

15) ಅಲ್ಲಿ- ಇಲ್ಲಿ- ಅನುತ್ತರಾ. ಸಂಪುಟ-2 ಪುಟ್ಟಸಂಖ್ಯೆ -421

16) ಕನ್ನಡ ಡಿಂಡಿಮ - ಅನುತ್ತರಾ - ಸಂಪುಟ-2 ಪುಟ್ಟಸಂಖ್ಯೆ-417.

ಉಪ ಸಂಹಾರ

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ, ಮಹಾಕವಿ ಕುವೆಂಪು ಹಿಮಾಲಯ ಸದೃಶ ವ್ಯಕ್ತಿತ್ವವುಳ್ಳವರು. ಅವರ ಉದಾತ್ತ ಬದುಕು,ಧೀಮಂತ ಬರಹ ಆದರ್ಶಪ್ರಾಯವಾದದ್ದು. ರಾಷ್ಟ್ರಕವಿ ಕುವೆಂಪು ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯ ದೃಷ್ಠಿಯಲ್ಲಿ, ತಮ್ಮದೇ ಆದ ಛಾಪನ್ನು ಸ್ಥಾಪಿಸಿದ್ದಾರೆ. ಹೆಚ್ಚು-ಕಡಿಮೆ ಇಪ್ಪತ್ತನೆಯ ಶತಮಾನದ ಬಹುಮುಖ್ಯ ಘಟನೆಗಳು ಅವರ ಸಾಹಿತ್ಯ ನಿರ್ಮಿತಿಯಲ್ಲಿ ಸೇರ್ಪಡೆಯಾಗಿವೆ. ಅವರು ಎರಡು ಮಹಾಯುದ್ಧಗಳನ್ನು, ಭಾರತ ಸ್ವಾತಂತ್ರ್ಯದ ಮಹಾ ಸಂಗ್ರಾಮವನ್ನು ಕಂಡವರು. ಜಾಗತೀಕ ಯುದ್ಧಗಳ ಸಂದರ್ಭದಲ್ಲೇ ವೈವಿಧ್ಯಮಯವಾದ, ವಿಪುಲವಾದ, ವೈಚಾರಿಕವಾದ, ವೈಜ್ಞಾನಿಕವಾದ ಸಾಹಿತ್ಯವನ್ನು ಸೃಷ್ಠಿಸಿದ ಅಂತರ್‌ಮುಖಿ ಅವರು .ಕುವೆಂಪುರವರು ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಮಹಾ ಕೃತಿಗಳನ್ನು ಬರೆದು ಪೂರೈಸಿದರು. ಅವರ ಸೃಜನಶೀಲ, ಸೃಜನೇತರ ಹಾಗೂ ಸಾಂದರ್ಭಿಕ ಉಪನ್ಯಾಸಗಳಲ್ಲಿ ಮೊನಚಾದ ಕೃತಿಯು ವೈಚಾರಿಕತೆಯಿಂದ ವಿಮುಖವಾಗಿಲ್ಲ. ಕುವೆಂಪು ಪ್ರತಿಭೆಯ ಮುಖ್ಯ ಹೂರಣ ವೈಚಾರಿಕತೆ.

ಕನ್ನಡ ಸಾಹಿತ್ಯ ಪರಂಪರೆಯ ಸಮೃದ್ಧ ಸಾರವನ್ನು ಹೀರಿಕೊಂಡು, ವಿಶ್ವ ಸಾಹಿತ್ಯದ ಹೊಸತನ್ನು ಮೈಗೂಡಿಸಿಕೊಂಡು, ಸಮಕಾಲೀನ ಯುಗ ಧರ್ಮವನ್ನು ತಲಸ್ಪರ್ಶಿಯಾಗಿ ಗ್ರಹಿಸಿಕೊಂಡು, ಸಾಹಿತ್ಯ ನಿರ್ಮಿಸಿರುವುದು ಕುವೆಂಪು ಅವರ ಹೆಗ್ಗಳಿಕೆ ಯಾಗಿದೆ ವಿಶ್ವ ವ್ಯಾಪಕತೆಯ ಹಿನ್ನೆಲೆಯಲ್ಲಿ ಮನುಕುಲದ ಅಂತಃಸತ್ವವನ್ನು ಪ್ರತಿಮಿಸುವ ಅವರ ಸಾಹಿತ್ಯ ಸೃಷ್ಠಿ ಕನ್ನಡಕ್ಕೆ ಹೊಸ ಕೊಡುಗೆಯಾಗಿದೆ. ಭವ್ಯ ಭಾರತೀಯ ಸಂಸ್ಕೃತಿಗೆ ಆಕಸ್ಮಿಕವಾಗಿ ಪ್ರವೇಶಿಸಿದ ಸಮಗ್ರ ಸಂಪ್ರದಾಯ ಮೌಢ್ಯಕ್ಕೆ ಕುಠಾರ ಪ್ರಾಯವಾಗಿ, ಕುವೆಂಪು ಸಾಹಿತ್ಯ ಸ್ಪಂಧಿಸುತ್ತದೆ; ಹೊಸ ದನಿಯನ್ನು ಹೊಸ ಬನಿಯನ್ನು ನೀಡುವುದರ ಮೂಲಕ ಹೊಸ ಮನ್ವಂಥರವನ್ನು ಅನಾವರಣಗೊಳಿಸುತ್ತದೆ. ಅವರ ವೈಚಾರಿಕ ಸಂವಾದದಲ್ಲಿ ವೈಜ್ಞಾನಿಕವಾದ ತಾರ್ಕಿಕವಾದ ತಳಹದಿ ಇರುವುದನ್ನು ಕಾಣಬಹುದು. ಕುವೆಂಪು ಸಾಮಾಜಿಕ ಶೋಷಣೆ ಹಾಗೂ ಸಂಪ್ರದಾಯಿಕ ಮೌಢ್ಯದ ಕಡು ವಿರೋಧಿ.

ಕುವೆಂಪುರವರ ವೈಚಾರಿಕತೆ ಶ್ರೀ ಸಾಮಾನ್ಯರ ಉದ್ಧಾರಕ್ಕೆ ಹೆದ್ದಾರಿಯಾಗುತ್ತದೆ. ಅವರ ಪ್ರಾರಂಭದ ಪದ್ಯ ಬರವಣಿಗೆಯಿಂದ ಜೀವಿತದ ಕೊನೆಯ ಗದ್ಯ ಬರವಣಿಗೆಯವರೆಗೆ ವೈಚಾರಿಕತೆಯ ಧಾರೆಯನ್ನು ನಿಚ್ಚಳವಾಗಿ ಗುರುತಿಸಬಹುದು. ಕುವೆಂಪು ಸಾಹಿತ್ಯದ ಸಂಪರ್ಕಕ್ಕೆ ಬರುವ ಸರ್ವರಿಗೂ ವೈಚಾರಿಕತೆಯ ಸ್ಪರ್ಶವಾಗದೇ ಉಳಿಯುವುದಿಲ್ಲ. ಕನ್ನಡ ಸಾಹಿತ್ಯ ಲೋಕಕ್ಕೆ ನವ-ನವೀನವಾದ ವೈಚಾರಿಕತೆಯ ಪ್ರಖರತೆಯನ್ನು ಪ್ರಚೋದಿಸಿದ್ದು ಕುವೆಂಪು ಸಾಹಿತ್ಯದ ವಿಶೇಷವಾಗಿದೆ. 20ನೇಯ ಶತಮಾನದ ಕನ್ನಡ

ಮಹಾ ಸಾಹಿತಿಗಳಲ್ಲಿ ಕುವೆಂಪು ಹೆಮ್ಮರವಾಗಿ ಎದ್ದು ಕಾಣುವುದು ಅವರ ವೈಚಾರಿಕತೆಯ ಅನನ್ಯತೆಯಿಂದಲೆ.

ತಾನು ಬದುಕಿದ ಆ ನಿರ್ದಿಷ್ಟ ಕಾಲಮಾನದ ಸಮಕಾಲೀನ ಬದುಕನು ಜೀವಂತವಾಗಿ ಅನುಭವಿಸಿ ಸತ್ವಯುತ್ತವಾದ ಅಭಿವ್ಯಕ್ತಿಯನ್ನು ಮಾಡುವುದೆ ಸಮಕಾಲೀನತೆಯನ್ನು ಪ್ರತಿಬಿಂಬಿಸಿದಂತಾಗುತ್ತದೆ. ಪ್ರತಿಯೊಬ್ಬ ಕವಿಯು ಆಯಾಯ ಕಾಲ ದೇಶಗಳ ಯಾವುದೋ ಒಂದು ಘಟನೆಯಿಂದ ಪ್ರೇರಿತನಾಗಿ ಅದೇ ಕಾಲದ ಸತ್ವಕ್ಕೆ ಒಳಗಾಗುತ್ತಾನೆ. ಈಗಾಗಿ ಆ ಕಾಲದ ಜಲ್ವಂತ ಅನುಭಾವತ್ಮಕ ಅಭಿವ್ಯಕ್ತಿಯಾಗಿ ಕೇವಲ ಕೃತಿಯು ಮಾತ್ರ ಕಂಡು ಬರದೇ ಸ್ವತಃಹ ಕವಿಯು ಅನುಭವದ ಉತ್ತರಕ್ಕೆ ನಿದರ್ಶನವಾಗಿರುತ್ತಾನೆ. ಪ್ರತಿಯೊಂದು ಕಾಲಕ್ಕೂ ಕೆಲವು ನಿರ್ದಿಷ್ಟವಾದ ವಿಶಿಷ್ಟ ಲಕ್ಷಣಗಳಿರುತ್ತವೆ. ಈ ವಿಶಿಷ್ಟತೆ ಎನ್ನುವುದು ತನ್ನ ಹಿಂದಿನ ಸ್ಥಿತಿಯನ್ನು ಕಳಚಿ ಬೆಳವಣಿಗೆಯಾದ ಕ್ರಮದಿಂದ ವೈಧ್ಯವಾಗುತ್ತದೆ. ಇಂತಹ ವಿಶಿಷ್ಟ ಸೂಕ್ಷ್ಮಾಭಿವೃದ್ಧಿಗಳನ್ನು ತನ್ನ ಅಭಿವ್ಯಕಾತ್ಮಕ ಕೃತಿಯಲ್ಲಿ ಅಚ್ಚುಕಟ್ಟಾಗಿ ವ್ಯಕ್ತವಾಗಿರುವ ರೂಪಗಳನ್ನು ಅಧ್ಯಯಿಸುವ ನಮ್ಮ ಗುರಿ ಸ್ವಲ್ಪ ಮಟ್ಟಿಗೆ ಯಶಸ್ಸಿನ ಹಾದಿಯತ್ತ ತಲುಪಿದೆ.

ಪ್ರಕೃತಿ ಮತ್ತು ಸಮಾಜಗಳ ಕೂಸು ವ್ಯಕ್ತಿ. ಪ್ರಕೃತಿ ಮತ್ತು ಸಮಾಜಗಳ ಸೂಕ್ಷ್ಮತೆಗಳನ್ನು ಅರ್ಥಯಿಸಿಕೊಳ್ಳುವವನು ಕವಿ. ಹೀಗೆ ಕವಿ ಅಧ್ಯಯಿಸಿಕೊಳ್ಳುವಾಗ ಅವರ ಬದುಕಿನ ಏರಿಳಿತಗಳಿಗೆ ಪ್ರತಿಯೊಂದು ಘಟನಾವಳಿಗಳನ್ನು ಅನ್ವಯಿಸಿಕೊಳ್ಳುವತ್ತ, ಹೋಲಿಸಿಕೊಳ್ಳುತ್ತ ಸಾಗುತ್ತಿರುತ್ತಾನೆ. ಆದರೆ ಅವನು ಒಬ್ಬ ಸಮಾಜದ ಒಂದು ಭಾಗವಾಗಿರುವುದರಿಂದ ಆ ಅನ್ವಯ ಮತ್ತು ಹೋಲಿಕೆ ಆತ್ಮೀಯತೆಯತ್ತ ತಿರುಗುವಲ್ಲಿ ಸಾಗುತ್ತಿರುತ್ತದೆ. ಜೊತೆಗೆ ಸಾಕ್ಷಿ ಪ್ರಜ್ಞೆಯಿಂದ ಘಟನಾವಳಿಗಳ ಒಳ-ಹೊರಗನು ಪರೀಕ್ಷಿಸಬಲ್ಲತಂಹ ಪ್ರಜ್ಞೆ ಅವನಲ್ಲಿ ಸಾಂದ್ರವಾಗಿರುತ್ತದೆ. ಸಮಾಜದಿಂದ ಋಣಮುಕ್ತ ಪಡೆಯುವಲ್ಲಿ ಸಾಹಿತಿಯು ಹೆಚ್ಚು ಕಡಿಮೆ ಯಶಸ್ವಿಯಾಗುತ್ತಾನೆ. ಹಾಗೆಯೇ ಕುವೆಂಪುರವರು ತಮ್ಮ ಅನುಭಾವಭಿವ್ಯಕ್ತಿಯ ಪ್ರತಿಯೊಂದು ಕ್ಷಣದಲ್ಲೂ ತಮ್ಮನ್ನು, ತಮ್ಮ ಕೃತಿಯನ್ನು ಸಮಕಾಲೀನತೆಗೆ ಹೊಂದಿಸುವ ಸಹಜತೆಯನ್ನು ಮೆರೆಸಿ ಸಾಮಾಜಿಕ ಜವಾಬ್ದಾರಿಯನ್ನು ಹೊರಲು ಸಿದ್ಧರಾಗಿರುವ ಕುವೆಂಪುರವರನ್ನು ನಮ್ಮ ಅಧ್ಯಯನ ವ್ಯಾಪ್ತಿಯಲ್ಲಿ ಗುರುತಿಸಿದ್ದೇವೆ.

ಸಮಾಜದಲ್ಲಿ ವ್ಯವಸ್ಥೆ ಎನ್ನುವುದನ್ನು ಸೃಷ್ಟಿ ಮಾಡಿಕೊಂಡಂದಿನಿಂದ ಅಸಮಾನತೆಯು ಕೂಡ ಜೊತೆಯಲ್ಲಿಯೇ ಸೃಷ್ಟಿಯಾಗಿದೆ ಹಾಗೂ ಅಸಮಾನತೆಯ ಜೊತೆ ಜೊತೆಯಲ್ಲಿಯೇ ಬಲಿಷ್ಠ ವರ್ಗವು ಬಲಹೀನ ವರ್ಗದ ಮೇಲೆ ಮಾಡುತ್ತಿರುವ ಶೋಷಣೆಯು ಅಷ್ಟೇ ಪಾಲನದಾಯಕವಾಗಿದೆ. ಪ್ರತಿ ಕಾಲ ಘಟ್ಟದಲ್ಲೂ ಒಂದು ಸಮಾಜದ ಜನತೆ ಆಕರ್ಷಣೆಯ ಸೌಲಭ್ಯಗಳತ್ತ ಸಾಗುತ್ತಿರುವಾಗಲೇ ನಾಗರೀಕತೆ ಸ್ಪಷ್ಟಗೊಳ್ಳುತ್ತದೆ. ಈ ನಾಗರಿಕತೆ ಮುಂದುವರೆದು ನವ ನಾಗರಿಕತೆಯ ಬೆನ್ನು ಬಿದ್ದು ತಮ್ಮ ವ್ಯಕ್ತಿತ್ವದ

ಅನನ್ಯತೆ, ದೇಶೀಯತೆ, ನೆಲದ ಪ್ರಾಕೃತಿಕ ಸಹಜ, ಸರಳ, ನಿರಳ ಜೀವನ ವಿಧಾನಗಳಿಂದ ದೂರವಾಗುತ್ತ ಸ್ವಾವಲಂಬನೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತ ಹೋಗುವ ಸ್ಥಿತ್ಯಂತರದ ಸಂದರ್ಭದಲ್ಲಿ ವ್ಯವಸ್ಥೆಯು ದುರಂತತೇಯತ್ತ ಕ್ರಮಿಸುತ್ತಿರುತ್ತದೆ. ಅಂದಿನ ಭಾರತದ ಹಳ್ಳಿಗಳ ಸ್ಥಿತಿ-ಗತಿಗಳು, ವಸಾಹತುಶಾಹಿಯ ದಬ್ಬಾಳಿಕೆ, ಕೈಗಾರಿಕೀಕರಣಗಳ ಪ್ರಕ್ರಿಯೆಗಳಿಂದಾಗಿ ಹಳ್ಳಿಗಳು ಅವನತಿಯತ್ತ ಸಾಗಿದ ಸ್ಥಿತಿಯನ್ನು ಕುವೆಂಪು ಕವಿತೆಗಳಲ್ಲಿ ಕಾಣಬಹುದು. ವ್ಯವಸ್ಥೆಯ ಅತಿ ಮುಖ್ಯ ಶಕ್ತಿ ಶ್ರೀಸಾಮಾನ್ಯ. ಒಲುವೆಯ ಬಾಳು, ನಲ್ಮೆಯ ಸೇವೆಯೇ ಶ್ರೀಸಾಮಾನ್ಯನ ಜೀವನ ಮಾರ್ಗವಾಗಿದೆ. ಇವನನ್ನು ಯಾರು ಶೋಷಿಸಬಾರದು, ಭಕ್ಷಿಸಲು ಆಗದು, ಹೆದರಿಸಲು ಸಾಧ್ಯವಾಗದ ಸ್ಥಿತಿಯ ಕನಸನ್ನು ನವುೂದಿಸುತ್ತಾರೆ ಕುವೆಂಪು ಸವಾಜದಲ್ಲಿ ಬಡವ-ಬಲ್ಲಿದ ಎಂಬೆರಡು ವರ್ಗಗಳಲ್ಲಿ ಬಡವನ ಗತಿ ಪರಿಣಾಮ ಪೂರಕವಾಗಿ ನಿಶಕ್ತಿಯ ಹಾದಿ ಹಿಡಿದಿರುವುದನ್ನು ಕವಿ ನೋವಿನಿಂದ ಕಲ್ಕಿ ಪದ್ಯದಲ್ಲಿ ವಿಶ್ಲೇಷಿಸಿದ್ದಾರೆ. ಅದನ್ನು ನಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಬಳಸಿಕೊಂಡಿದ್ದೇವೆ.

ಕುವೆಂಪುರವರ ಕವಿತೆಗಳಲ್ಲಿ ಮೌಢ್ಯ, ಸಂಪ್ರದಾಯಗಳ ವಿರುದ್ಧ ನಡೆಸಿರುವ ಧ್ವನಿಪೂರ್ಣ ಆಕ್ರೋಶವನ್ನು ಗುರುತಿಸುವ ಪ್ರಯತ್ನ ಮಾಡಿದ್ದೇವೆ. ದಯ್ಯ, ದೇವರು, ಶಕುನ, ಅಚಾರಗಳು ಭಾರತೀಯ ಜನಜೀವನದಲ್ಲಿ ನಡೆಸಿರುವಂತಹ ಹಾವಳಿ ಅಪಾರ. ಅಮಾಯಕರಾದ, ಅನಕ್ಷರಸ್ಥ ಹಳ್ಳಿಯ ಜನರಂತೂ ನಂಬಲಾಸಾಧ್ಯವಾದ ಶೋಷಣೆಗೆ ಒಳಗಾಗಿರುವುದನ್ನು ಕಾಣುತ್ತೇವೆ. ಶತಶತಮಾನಗಳಿಂದ ಆರ್ಯರು ಏರಿದ ವರ್ಣಧರ್ಮದ ಅಡಿಯಲ್ಲಿ ಸಿಕ್ಕಿ ನರಳಿ, ಜಾತಿ, ಮತ, ಪಂಗಡಗಳ ನೇವದಿಂದ ಸಮಾಜವನ್ನು ಛಿದ್ರಗೊಳಿಸಿವೆ. ವೇದಶಾಸ್ತ್ರಗಳ ಹೆಸರಿನಿಂದ ಮಾಡಬಾರದ ಅನ್ಯಾಯಗಳನ್ನು ಮಾಡಿ ಹೋಗಿದ್ದಾರೆ. ಕೆಲವು ಪ್ರಬಲರು ದೇವರು ಮತ್ತು ಆ ಹೆಸರಿನಲ್ಲಿ ನಮ್ಮ ಸಮಾಜದ ಮೇಲೆ ಪುರೋಹಿತವರ್ಗ ನಡೆಸಿದ ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆಗಳನ್ನು ಹೇಳಲಾಸಾಧ್ಯ. ವಾಸ್ತವವಾಗಿ ಈ ನಮ್ಮ ಜನರ ಅಂತರ್ಯವನ್ನು ಅರಿಯುವ ಶಕ್ತಿ ನಮ್ಮ ಸಮಾಜದ ಜನರಿಗೆ ಮೂಡಿದಾಗ ರಕ್ತಕ್ರಾಂತಿಯಾಗುವುದು ಖಚಿತ. ಭೂಮಿಯಲ್ಲಿ ಅನ್ಯಾಯ ಹೆಚ್ಚಾದಾಗ ದೇವರು ಅದನ್ನು ಸರಿಪಡಿಸಲು ಅವತಾರವೆತ್ತುತ್ತಾನಂತೆ. ರಾಮ, ಕೃಷ್ಣ, ಬುದ್ಧ, ಬಸವ, ಗಾಂಧಿ ಇವರೆಲ್ಲರ ಅವತಾರದಿಂದಲು, ಕಾಂತ್ರಿಯ ನಂತರವು ಮೌಢ್ಯಚಾರಣೆಗಳಿಂದ ದೂರ ಸರಿಯದಿರುವ ವಿಕ್ಷಿಪ್ತ ಮನಸ್ಸುಗಳ ಬಗ್ಗೆ ರೋಷವನ್ನು ಕವಿ ವ್ಯಕ್ತಪಡಿಸುತ್ತಾರೆ. ಕುವೆಂಪು ತಮ್ಮ ಅಭಿವ್ಯಕ್ತಿಯಲ್ಲಿ ವ್ಯಕ್ತಪಡಿಸಿರುವುದು ಜಾತಿ-ದ್ವೇಷವಲ್ಲ, ಮತೀಯ ದ್ವೇಷವಲ್ಲ, ಬದಲಿಗೆ ನಿರ್ಜಾತೀಯ, ನಿರ್ಮತೀಯ ಸಮಾಜದ ನಿರ್ಮಾಣದ ಬಗೆಗೆ ಕಾತರತೆಯನ್ನು ತೋರಿಸಿದ್ದಾರೆ.

ದೇಶದ ಬೆನ್ನೆಲುಬು ರೈತ. ಇಂತಹ ರೈತನಿಗೆ ಸಂಬಂಧಪಟ್ಟಂತೆ ಎರಡು ಸಾವಿರ ವರ್ಷದ ದೀರ್ಘ ಇತಿಹಾಸದಲ್ಲಿ ರೈತನೇ ವಸ್ತುವಾಗಿ ಉಳ್ಳ ಕಾವ್ಯವಾಗಲಿ, ಕಾವ್ಯ ಭಾಗಗಳಾಗಲಿ ಕನ್ನಡದಲ್ಲಿ ಇಲ್ಲವೆ

ಇಲ್ಲವೆಂಬುದು ಆಶ್ಚರ್ಯಕರ ಸಂಗತಿ. ಆದರೆ ಕುವೆಂಪುರವರು ಬೇಸಾಯವು ಕೂಡ ಒಂದು ತಪಸ್ಸೆಂದು, ಒಂದು ಯೋಗವೆಂದು ತಿಳಿದು ರೈತನನ್ನು ಮೊಟ್ಟ ಮೊದಲು ನೇಗಿಲಯೋಗಿ ಎಂದು ಕರೆದು ಅತೀತಶಕ್ತಿಯಾಗಿ ಮೆರೆಸಿದ್ದಾರೆ. ತಲಾತಲಾಂತರಗಳಿಂದ ರೈತನ ಮೇಲೆ ಆಗುತ್ತಿರುವ ಶೋಷಣೆಯ ಪರಮಾವಧಿಯನ್ನು ಸದೃಢ ಸಂಕಲ್ಪದ ಮುಖಾಂತರ ಮಾತ್ರ ಸುಧಾರಿಸಬಹುದೆಂದು ಹೇಳುತ್ತ ತನ್ನ ನಿತ್ಯ ಬದುಕಿನ ಅವಶ್ಯಕ ಸಾಮಾಗ್ರಿ ಶಕ್ತಿಗಳಾದ ನೇಗಿಲು, ಬಸವ, ಗೊಬ್ಬರಗಳನ್ನು ಅಣಿಯಾಗಿ ಘನಿರ್ಭವಿಸುತ್ತ ರೈತನನ್ನು ಶೋಷಣೆಯಿಂದ ಮುಕ್ತಗೊಳಿಸದಿದ್ದರೆ ಲಯವಂತು ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸುತ್ತಾರೆ.

ಒಂದು ನಿರ್ದಿಷ್ಟವಾದ ಎಲ್ಲೆಯೊಳಗೆ ಬಹಳ ಕಾಲದಿಂದಲೂ ಒಟ್ಟಿಗೆ ಜೀವನ ನಡೆಸಿ ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ಐಕ್ಯತೆಯನ್ನು ಸಾಧಿಸಿದ ವಿಶಾಲ ಕ್ಷೇತ್ರದಲ್ಲಿ ವಾಸಿಸುವ ಜನರೆಲ್ಲರೂ ಒಂದೇ ಧರ್ಮವನ್ನು ಅವಲಂಭಿಸಿದ್ದರೂ ಅವರೆಲ್ಲರನ್ನು ಒಂದೇ ಸಂಸ್ಕೃತಿ ತನ್ನ ಮಧುರವಾದ ಬಂಧನದಲ್ಲಿ ಒಟ್ಟಿಗೆ ಕಟ್ಟಿ ಹಾಕಿರುತ್ತದೆ. ಈ ಜನರ ಮನೋಭಾವವನ್ನು ರಾಷ್ಟ್ರೀಯ ಮನೋಭಾವವೆಂಬ ರಾಷ್ಟ್ರೀಯ ಪ್ರಜ್ಞೆಯಲ್ಲಿ ತಾನು ತನ್ನದು ಎನ್ನುವ ಅಭಿಮಾನ ಉಕ್ಕಿ ಹರಿಯುತ್ತಿರಬೇಕೆಂಬ ರಾಷ್ಟ್ರೀಯ ಭಾವನೆಯನ್ನು ಜಾಗೃತಿಗೊಳಿಸುವಲ್ಲಿ ರಾಷ್ಟ್ರೀಯತೆ, ನಾಡು-ನುಡಿ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಒಟ್ಟಾರೆಯಾಗಿ ಕುವೆಂಪು ಅವರ ಸಾಹಿತ್ಯ ಕ್ರಿಯೆಯನ್ನು ಗಮನಿಸುವಾಗ ದಟ್ಟವಾದ ಅನುಭವಗಳನ್ನು ಸಮಕಾಲೀನವಾಗಿಸುವುದರಲ್ಲಿ ಅದು ತೀವ್ರವಾಗಿರುವುದನ್ನು ಮರೆಯುವಂತಿಲ್ಲ. ತೀರ ಸಮಕಾಲೀನವಾಗಿ ಸ್ಪಂದಿಸುವ ಅವರ ಹೆಚ್ಚಿನ ಕೃತಿಗಳು ಸಾಂಪ್ರದಾಯಿಕ ಅನಿಷ್ಟಗಳ ವಿರುದ್ಧ ಸೆಣಸುವುದರ ಮೂಲಕ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ಕಲ್ಪಿಸುತ್ತವೆ. ಇವರು ಕೇವಲ ಪ್ರಕೃತಿ ಕವಿಯಾಗಿ ಉಳಿಯದೆ ಬಂಡೇಳುವ ಪ್ರವೃತ್ತಿಯಿಂದಾಗಿ ಸಮಕಾಲೀನ ಸಮಸ್ಯೆಯ ಅನ್ವೇಷಕರಾಗಿ ಸಾಹಿತ್ಯದಲ್ಲಿ ಶ್ರಮವಹಿಸಿ ಬರೆಯುವುದರಿಂದ ಕೇವಲ ಕಾವ್ಯತಾದಾತ್ಮ್ಯಕ್ಕೆ ಮಾತ್ರ ಸೀಮಿತವಾಗುತ್ತಾರೆಂದು ಹೇಳುವಂತಿಲ್ಲ. ಕುವೆಂಪು ಕೃತಿಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಅರ್ಥರಹಿತ ಸಾಮಾಜಿಕ ಪ್ರವೃತ್ತಿಯ ವಿರುದ್ಧ ಬಂಡಾಯಗಾರರಾಗಿ ಸಮಕಾಲೀನರಾಗುತ್ತಿದ್ದಂತೆ, ವೈಜ್ಞಾನಿಕ ಅಂಶಗಳನ್ನು ಸೂರೆಗೊಂಡು ಕಾವ್ಯದ ಪರಿಕರಗಳನ್ನಾಗಿಸಿಕೊಳ್ಳುವಿಕೆಯಿಂದಾಗಿ ಸಾಮಾಜಿಕ ಅರಿವಿನೊಂದಿಗೆ ಬೆಸೆದುಕೊಳ್ಳುತ್ತಾರೆ.

ಗ್ರಂಥ ಋಣ

1. ಕುವೆಂಪು ಸಮಗ್ರ ಕಾವ್ಯ
   ಸಂಪುಟ-1, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ, ಸೆಪ್ಟಂಬರ್ 2000

2. ಕುವೆಂಪು ಸಮಗ್ರ ಕಾವ್ಯ
   ಸಂಪುಟ-2, ಪ್ರಸಾರಾಂಗ ಕನ್ನಡ ವಿ.ವಿ. ಹಂಪಿ, ಸೆಪ್ಟಂಬರ್ 2000

3. ಅನಿಕೇತನ
   ಸಂ. ಡಾ. ಸಾ.ಶಿ. ಮರುಳಯ್ಯ, ಸಪ್ನ ಬುಕ್ ಹೌಸ್, ಬೆಂಗಳೂರು-9, ಮುದ್ರಣ 2005

4. ಸಹ್ಯಾದ್ರಿ
   ಸಂ. ಡಾ. ದೇ.ಜವರೇಗೌಡ, ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು 1975

5. ಗಂಗೋತ್ರಿ,
   ಕುವೆಂಪು ಅಭಿನಂದನ ಸಮಿತಿ, ಗೀತಾ ಬುಕ್ ಹೌಸ್, ಮೈಸೂರು. ಮುದ್ರಣ-1968

6. ಸಾಹಿತ್ಯ ಮಾರ್ಗ
   ದೇ. ಜವರೇಗೌಡ, ಸರಸ ಸಾಹಿತ್ಯ ಪ್ರಕಾಶನ, ಮೈಸೂರು. ಮುದ್ರಣ - 1964

7. ಕುವೆಂಪು ಅವರ ವೈಚಾರಿಕತೆ
   ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ಪ್ರೊ. ಹೆಚ್.ಎಂ. ಚನ್ನಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು. ಮುದ್ರಣ - 1993

8. ಸಮಗ್ರ ಗದ್ಯ-2
   ಸಂಪುಟ 2, ಜಿ.ಎಸ್. ಶಿವರುದ್ರಪ್ಪ, ಸ್ನೇಹ ಪ್ರಕಾಶನ. ಮುದ್ರಣ - 1994

9. ಕುವೆಂಪು ಸಾಹಿತ್ಯ : ಕೆಲವು ಅಧ್ಯಯನಗಳು
   ಸಂಪುಟ-2 ದೇ.ಜ.ಗೌ. ಸಹ್ಯಾದ್ರಿ ಪ್ರಕಾಶನ, ಮುದ್ರಣ - 1989
   ಸಂಪುಟ-3 ದೇ.ಜ.ಗೌ. ಸಹ್ಯಾದ್ರಿ ಪ್ರಕಾಶನ, ಮುದ್ರಣ - 1989

10. ಶ್ರೀ ಕುವೆಂಪು ಸಾಹಿತ್ಯದಲ್ಲಿ ರೈತ
    ಸಂಪಾದಕ : ದೇ.ಜ.ಗೌ., ಪ್ರತಿಧ್ವನಿ ಪ್ರಕಾಶನ, ಕಲಾನಿಲಯ, ಜಯಲಕ್ಷ್ಮಿಪುರಂ, ಮೈಸೂರು. ಮುದ್ರಣ - 1986

11. ಕುವೆಂಪು ಕೃತಿ ವಿಮರ್ಶೆ
ಪ್ರಧಾನ ಸಂಪಾದಕ ಪ್ರೊ. ಅರವಿಂದ ಮಾಲಗತ್ತಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ಪ್ರಕಟಣೆ ಮಾಲೆ-544, ಸಾಮಾನ್ಯ ಗ್ರಂಥಮಾಲೆ-47.

12. ಸಾಹಿತ್ಯಾರಾಧನೆ
ಸಂಪಾದಕ ದೆ.ಜ.ಗೌ., ಸಿ.ಪಿ.ಕೆ. ಪ್ರಕಾಶನ, ಮೈಸೂರು. ಮುದ್ರಣ - 1970

13. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ
ಎಸ್. ಅನಂತ ನಾರಾಯಣ, ಮೈಸೂರು. ಮುದ್ರಣ -1962

14. ಕುವೆಂಪು ಸಾಹಿತ್ಯಾವಲೋಕನ
ಡಿ.ಕೆ. ರಾಜೇಂದ್ರ, ಪ್ರಕಾಶನ-ಸಹ್ಯಾದ್ರಿ, ಮುದ್ರಣ - 1976

15. ಕುವೆಂಪು ಸಾಹಿತ್ಯದ ಕೆಲವು ಆಯಾಮಗಳು
ಬಿ.ಜಿ. ಮಂಜುನಾಥನ್, ಪ್ರಕಾಶನ-ಸಹ್ಯಾದ್ರಿ, ಮುದ್ರಣ - 2003

16. ಕುವೆಂಪು ಸಾಹಿತ್ಯ ಸಂಧಾನ
ಸಿ.ಪಿ.ಕೆ., ಮುದ್ರಣ - 1931

17. ಕುವೆಂಪು ಅವರ ವೈಚಾರಿಕತೆ
ಹೆಚ್. ತಿಪ್ಪೆರುದ್ರಸ್ವಾಮಿ, ಮುದ್ರಣ - 1993

18. ಕುವೆಂಪು ಸಾಹಿತ್ಯ ವಿಚಾರ
ಶಿವರಾಮು ಕಾಡನಕುಪ್ಪೆ, ಪ್ರಕಾಶನ-ಸಹ್ಯಾದ್ರಿ. ಮುದ್ರಣ - 1928

19. ಕುವೆಂಪು ಸಾಹಿತ್ಯ ಕುರಿತು
ಸಂಪಾದಕ : ಎನ್. ಚನ್ನಪ್ಪ, ಅರ್ಕಾವತಿ ಪ್ರಕಾಶನ. ಮುದ್ರಣ - 1988

20. ಕುವೆಂಪು ಸಾಹಿತ್ಯ-ತೌಲನಿಕ ಅಧ್ಯಯನ
ಜಿ.ಎಸ್. ಶಿವರುದ್ರಪ್ಪ.